# ಹೊಸ ಮನುಷ್ಯ ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೩ (**‘ನವ ಮಾನವ ಮಾಸಿಕ’**ದ ನೋಂದಿತ ಆವೃತ್ತಿ) ಸಂಪುಟ: ೧ ಸಂಚಿಕೆ: ೩

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ ವಿವರ:** ವಾರ್ಷಿಕ: ರೂ. ೧೨೫/–(ವ್ಯಕ್ತಿಗಳಿಗೆ) ರೂ. ೨೦೦/–(ಸಂಸ್ಥೆ/ಗ್ರಂಥಾಲಯಗಳಿಗೆ)


**ವಿಳಾಸ:** ಎಚ್.ಐ.ಜಿ.–೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ತಿಂಗಳು ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಹಾಸನದಲ್ಲಿ ‘ಹೊಸ ಮನುಷ್ಯನ ಹುಡುಕಾಟದಲ್ಲಿ’ ಎಂಬ ವಿಷಯ ಕುರಿತು ಎರಡು ದಿನಗಳ ಅಧ್ಯಯನ ಶಿಬಿರ ಏರ್ಪಡಿಸಿತ್ತು. ಅದರ ಸಂಕ್ಷಿಪ್ತ ವರದಿಯೊಂದು ಈ ಸಂಚಿಕೆಯಲ್ಲಿ ಪ್ರಕಟವಾಗಿರುವುದರಿಂದ ಅದರ ಒಳವಿವರಗಳನ್ನು ಇಲ್ಲಿ ಹೇಳುವ ಅಗತ್ಯವಿಲ್ಲ. ಆದರೆ ಈ ಶಿಬಿರ ನಿದೇಶಕನಾಗಿ ಗೋಷ್ಠಿಗಳನ್ನು ನಿರ್ವಹಿಸುತ್ತಿದ್ದಾಗ ನನ್ನ ಮನಸ್ಸಿನಲ್ಲಿ ಹಾದುಹೋದ ಕೆಲವು ಸಂಗತಿಗಳನ್ನು ಇಲ್ಲಿ ಹೇಳಲೇಬೇಕು.

ಹಾಸನ ಎಂದರೆ ಏನು ಎಂಬುದು ಆ ಊರಿನ ಸಜ್ಜನರೂ ಸೇರಿದಂತೆ ಎಲ್ಲರಿಗೂ ಗೊತ್ತಿರುವ ಕಾರಣದಿಂದಾಗಿ ಈ ಶಿಬಿರವನ್ನು ಆಯೋಜಿಸುವ ಉತ್ಸಾಹ ತೋರಿದ, ಅಲ್ಲಿ ಬಹಳ ವರ್ಷಗಳಿಂದ ‘ವಿವೇಕ ಬ್ಯೂರೋ’ದ ಹೆಸರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ನನ್ನ ಕಿರಿಯ ಗೆಳೆಯ ಬಿ.ಶಿವಕುಮಾರ್‌ರನ್ನು ನಾನು ಪ್ರೋತ್ಸಾಹಿಸಲಿಲ್ಲ. ಆದರೆ ಅವರು ಹಠ ಬಿಡದೆ ಸತತವಾಗಿ ಒತ್ತಾಯಿಸಿದ್ದರಿಂದ, ತಮ್ಮ ಕೇಂದ್ರದ ವಿದ್ಯಾರ್ಥಿಗಳ ಭವಿಷ್ಯದ ಬದುಕಿನ ದೃಷ್ಟಿಯಿಂದ ಈ ಶಿಬಿರ ಅಗತ್ಯವೆಂದು ನನಗೆ ಮನಗಾಣಿಸಿದ್ದರಿಂದ ಶಿಬಿರವನ್ನು ಆಯೋಜಿಸಲಾಗಿತ್ತು.

ನಿರೀಕ್ಷೆಯಂತೆ, ಶಿವಕುಮಾರರ ವಿದ್ಯಾರ್ಥಿಗಳ ಹೊರತಾಗಿ ಸ್ಥಳೀಯರು ಬಂದದ್ದು ಒಬ್ಬರೋ ಇಬ್ಬರೋ. ಬಂದ ಆ ಇಬ್ಬರೂ ಮೊದಲ ದಿನದ ನಡಾವಳಿಯನ್ನು ಗಮನಿಸಿ ಇದು ತಮಗೆ ಸಲ್ಲತಕ್ಕದ್ದಲ್ಲ ಎಂದು ಭಾವಿಸಿಯೇನೋ ಎರಡನೇ ದಿನ ಅಲ್ಲಿಗೆ ಕಾಲಿಡಲಿಲ್ಲ. ಆದರೆ ಅಲ್ಲಿ ನಿಜವಾಗಿ ನನ್ನ ಗಮನ ಸೆಳೆದದ್ದು ಆರಂಭದಲ್ಲಿ ಶಿಬಿರದ ಗೋಷ್ಠಿಗಳ ವಿಷಯಗಳು ಭಾರವೆಂತೆನ್ನಿಸಿ, ಇವಕ್ಕೂ ತಾವು ಸಿದ್ಧತೆ ಮಾಡಿಕೊಳ್ಳುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಲೀ, ತಮ್ಮ ಭವಿಷ್ಯದ ವೃತ್ತಿ ಬದುಕಿನ ಹುಡುಕಾಟಕ್ಕಾಗಲೀ ಯಾವುದೇ ಸಂಬಂಧವಿಲ್ಲವೆಂದೆನಿಸಿ ಅಷ್ಟೇನೂ ಉತ್ಸಾಹ–ಆಸಕ್ತಿಗಳನ್ನು ತೋರದ ಯುವ ಶಿಬಿರಾರ್ಥಿಗಳು ಒಂದಾದಮೇಲೊಂದರಂತೆ ಗೋಷ್ಠಿಗಳಲ್ಲಿ ವಿಷಯಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಾ ಚರ್ಚೆ ಆರಂಭವಾಗುತ್ತಿದ್ದಂತೆ ಚುರುಕಾದ ಬಗೆ. ಅವರ ದೇಹ ಭಾಷೆ ಬದಲಾಯಿತು. ಹಾಗೇ ಮನಸ್ಸಿನ ಭಾಷೆಯೂ. ಚರ್ಚೆಯಲ್ಲಿ ಮೂಡಿದ ಹಲವು ವಿಷಯಗಳು, ಒಳನೋಟಗಳು ಅವರ ನಿರೀಕ್ಷೆಯನ್ನು ಮೀರಿ ಅವರ ವ್ಯಕ್ತಿತ್ವದ ಆಳದಲ್ಲಿದ್ದ ಅವ್ಯಕ್ತ ಅನ್ನಿಸಿಕೆಗಳನ್ನು ಮುಟ್ಟುತ್ತಿದ್ದಂತೆಯೇ ಅವರು ಎಚ್ಚೆತ್ತರು. ಗೋಷ್ಠಿಗಳನ್ನು ಏಕಾಗ್ರತೆಯಿಂದ ಕೇಳಲಾರಂಭಿಸಿದರು; ನಿಧಾನವಾಗಿ ಪ್ರಶ್ನೆಗಳನ್ನೂ ಕೇಳಲಾರಂಭಿಸಿದರು.

ಇದರ ಪರಿಣಾಮವಾಗಿ ಶಿಬಿರದ ಕೊನೆಯ ಹೊತ್ತಿಗೆ, ತಾವಿರುವ ವ್ಯವಸ್ಥೆ ಮತ್ತು ಅದು ರೂಪಿಸುತ್ತಿರುವ ತಮ್ಮ ವ್ಯಕ್ತಿತ್ವಗಳೆರಡೂ ಹುಸಿಯಿರಬಹುದೇ ಎಂಬ ಅನುಮಾನ, ಅವರಲ್ಲಿ ಎಲ್ಲರಲ್ಲದಿದ್ದರೂ ಬಹಳಷ್ಟು ಜನರಲ್ಲಿ ಆರಂಭವಾದಂತಿತ್ತು. ಇದಕ್ಕೆ ಶಿಬಿರದ ಸಂಪನ್ಮೂಲ ವ್ಯಕ್ತಿಗಳ ಪ್ರತಿಭೆ ಮತ್ತು ನಾವು ತೋರಿಸಿದ ‘ನಿಷ್ಠುರ ಸತ್ಯ’ ಎಂಬ ಸಾಕ್ಷ್ಯ ಚಿತ್ರದ ಪರಿಣಾಮಶೀಲತೆಯೂ ಕಾರಣವಾಗಿತ್ತು ಎಂಬುದನ್ನೂ ಇಲ್ಲಿ ದಾಖಲಿಸಬೇಕು. ಅದೇನೇ ಇರಲಿ, ಈ ಅನುಮಾನದ ಆರಂಭವೇ ಹೊಸ ಮನುಷ್ಯನ ಹುಡುಕಾಟದ ಆರಂಭದ ಹೆಜ್ಜೆಯಲ್ಲವೇ? ಶಿಬಿರದ ಸಮಾರೋಪದಲ್ಲಿ ಶಿಬಿರಾರ್ಥಿಗಳು ಶಿಬಿರದ ಉಪಯುಕ್ತತೆ ಬಗ್ಗೆ ಆಡಿದ ಮಾತುಗಳನ್ನು ಕೇಳುತ್ತಿದ್ದಂತೆ, ಕುಸಿಯುತ್ತಿರುವಂತೆ ತೋರುತ್ತಿರುವ ಇಂದಿನ ವ್ಯವಸ್ಥೆ ಬಗ್ಗೆ ಸಾಮಾನ್ಯವಾಗಿ ಮತ್ತು ನಿರಾಳವಾಗಿ ಕೇಳಿ ಬರುವ, ಇದು ಸಂಪೂರ್ಣ ಕುಸಿದು ಕೊಳೆತಾಗಲೇ ಹೊಸ ವ್ಯವಸ್ಥೆ ಬರಲು ಸಾಧ್ಯ ಎಂಬ ಹತಾಶೆಯ ಸಿನಿಕ ಮಾತುಗಳಿಗೆ ಒಮ್ಮೊಮ್ಮೆ ನಾನೂ ವ್ಯಕ್ತಪಡಿಸುವ ಸಹಮತ ತಪ್ಪೆಂದೂ, ಇಂತಹ ಮಾತು ಮೂಡುವುದು ನಮ್ಮ ಕರ್ತವ್ಯಗಳನ್ನು ಮಾಡಲಾಗದ ನಮ್ಮ ಅನ್ಯಮನಸ್ಕತೆಯಿಂದಾಗಿ ಎಂಬುದೂ ನನಗೆ ಅರಿವಾಗತೊಡಗಿತು. ನಾವು ನಮ್ಮ ಮಕ್ಕಳನ್ನು ಇಂದಿಗೆ ಜೋಪಾನ ಮಾಡುವ ನಮ್ಮ ಎಚ್ಚರಿಕೆಯಲ್ಲಿ ನಾಳೆಯ ಬಗ್ಗೆ ಸೂಕ್ಷ್ಮವಾಗಿ ಚಿಂತಿಸದಿರುವಂತೆ ಅವರನ್ನು ನಾವು ಜಡಗೊಳಿಸಿಬಿಟ್ಟಿದ್ದೇವೇಯೇನೋ!

ಈ ವ್ಯವಸ್ಥೆಯನ್ನು ಹಾಳು ಮಾಡುವುದರಲ್ಲಿ ಭಾಗಿಯಾಗಿ(ಉದಾ: ಸ್ಪರ್ಧಾತ್ಮಕ ಸುಖ–ಸಂತೋಷಗಳಿಗಾಗಿ ಮಾರುಕಟ್ಟೆಗೆ ಬರುವ ಸಕಲ ವಸ್ತುಗಳನ್ನೂ ಮನೆ ತುಂಬಾ ತುಂಬಿಕೊಂಡು, ಮಕ್ಕಳ ಮೇಲೆ ಶೈಶವದಿಂದಲೇ ಇಂಗ್ಲಿಷ್ ಮಾಧ್ಯಮವನ್ನು ಹೇರಿ) ಅಥವಾ ಅದು ಹಾಳಾಗುತ್ತಿರುವುದನ್ನು ಸಂಬಂಧವಿಲ್ಲದಂತೆ ಮೌನವಾಗಿ ನೋಡುತ್ತಾ ಕೂತ ತಪ್ಪಿಗೆ ಪ್ರಾಯಶ್ಚಿತ್ತವಾಗಿಯಾದರೂ ನಾವು ಯಾರ ಹಿತಕ್ಕಾಗಿ ಹೀಗೆ ಮಾಡಲಾಯಿತು ಎಂದು ಹೇಳಿಕೊಳ್ಳುತ್ತಿದ್ದೇವೆಯೋ ಆ ಮಕ್ಕಳು ಮೊಮ್ಮಕ್ಕಳ ಬದುಕೇ ಮೂಲ ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವ ಆತಂಕದ ಸೂಚನೆಗಳು ಬರುತ್ತಿರುವ ಈಗಲಾದರೂ ಇದನ್ನು ಸರಿಪಡಿಸಲು, ಹೊಸ ದಾರಿ ಹುಡುಕಲು ಯತ್ನಿಸಬೇಕು ಎಂಬ ಎಚ್ಚರ, ಬದ್ಧತೆಗಳನ್ನು ಪ್ರದರ್ಶಿಸದಿದ್ದಲ್ಲಿ ನಾವು ಎಳೆಯರನ್ನಾದರೂ ಏಕೆ ದೂಷಿಸಬೇಕು? ಬರೀ ಸುಮ್ಮನೆ ಮಾತನಾಡುತ್ತಾ, ಜಗತ್ತನ್ನು ಶಪಿಸುತ್ತಾ ಕಾಲ ಕಳೆಯುವವರು ಒಂದಿಷ್ಟು ರಚನಾತ್ಮಕ ಕೆಲಸವನ್ನೂ ಶುರು ಮಾಡಿದರೆ ಎಳೆಯರೂ ನಮ್ಮನ್ನು ಕೂಡಿಕೊಂಡಾರು ಎಂಬ ಭರವಸೆ ಸ್ವಲ್ಪ ಪ್ರಮಾಣದಲ್ಲಾದರೂ ನನಗೆ ದೊರಕಿತು ಎಂದು ಇಲ್ಲಿ ಹೇಳಲೇ ಬೇಕು.

ಶಿಬಿರದಲ್ಲಿ ಕೆಲವು ಬೇಸರದ, ನಿರಾಶೆಯ ಕ್ಷಣಗಳೂ ಇಲ್ಲದಿರಲಿಲ್ಲ. ಉದಾ: ಐ.ಎ.ಎಸ್. ಕೆ.ಎ.ಎಸ್., ಬ್ಯಾಂಕ್ ಅಧಿಕಾರಿಗಳಾಗಲು ತರಬೇತಿ ಪಡೆಯುತ್ತಿದ್ದ ಹಲವರು ದಿನ ನಿತ್ಯದ ಪತ್ರಿಕೆಗಳನ್ನೂ ಓದುತ್ತಿಲ್ಲವೆಂಬುದು ತಿಳಿದು ಬಂತು. ದೆಹಲಿ ಅತ್ಯಾಚಾರದ ಪ್ರಕರಣ ಅಲ್ಲಿದ್ದ ಹುಡುಗಿಯರಲ್ಲಿ ಅರ್ಧ ಜನಕ್ಕೆ ಗೊತ್ತೇ ಇರಲಿಲ್ಲ. ಆದರೆ ಹೆಚ್ಚೂಕಡಿಮೆ ಎಲ್ಲ ಹುಡುಗರಿಗೂ ಗೊತ್ತಿತ್ತು! ಕುವೆಂಪು ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿರುವ ಒಬ್ಬ ಶಿಬಿರಾರ್ಥಿಯ ಪ್ರಕಾರ ಭಗತ್ ಸಿಂಗ್ ಸಾವಿಗೆ, ಸುಭಾಷರ ಕಣ್ಮರೆಗೆ ಮತ್ತು ರಾಷ್ಟ್ರ ವಿಭಜನೆಗೆ ಗಾಂಧಿಯೇ ಕಾರಣವಾಗಿದ್ದರು...

ಇದಕ್ಕೆಲ್ಲ ನಾವು ಈ ಎಳೆಯರನ್ನು ದೂಷಿಸಬೇಕಾಗಿದೆಯೋ ಅಥವಾ ಅವರ ತಂದೆ–ತಾಯಿಗಳು ಮತ್ತು ಅಧ್ಯಾಪಕರೂ ಇದಕ್ಕೆ ಹೊಣೆಗಾರರಾಗಿರುವರೋ? ನಾವೆಲ್ಲ ಯೋಚಿಸಬೇಕಿದೆ.

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಜನವರಿ ಸಂಚಿಕೆಯ ನಿಮ್ಮ ಸಂಪಾದಕೀಯ ನಿಜ, ನಿಜ ಅನ್ನಿಸಿತು, ಸಂಪತ್ತನ್ನು ತೋರಿಸಿ ಮೆರೆಯುವುದಕ್ಕೆ ನಾಚುತ್ತಿದ್ದ ಕಾಲವೂ ಇತ್ತಲ್ಲ, ಅದು ಈಗ ಇಲ್ಲ. ಸಾರ್ವಜನಿಕ ಲಜ್ಜೆ ಅನ್ನುವುದು ಸತ್ತು ಹೋಗಿದೆ. ನಾವು ಯಾವುದನ್ನು 'ಅಭಿವೃದ್ಧಿ' ಅಂದುಕೊಂಡಿದ್ದೆವೋ ಅದು ಸಾಕು ಎಂಬ ಚಳುವಳಿ ಬೇಕು ಅನ್ನಿಸುತ್ತಿದೆ.

–**ಓ.ಎಲ್. ನಾಗಭೂಷಣ ಸ್ವಾಮಿ,** ಬೆಂಗಳೂರು

ನರೇಂದ್ರ ಮೋದಿಯ ಗುಜರಾತ್ ಗೆಲುವನ್ನು ಕುರಿತ ನಿಮ್ಮ ಟಿಪ್ಪಣಿಗಳು ಆಲೋಚನಾರ್ಹವಾಗಿವೆ. ಜಿ. ರಾಜಶೇಖರ್ ಅಮೆರಿಕಾದ ಜಾಗತಿಕ ಭಯೋತ್ಪಾದನೆಯನ್ನು ಜಿದ್ದಿಗೆ ಬಿದ್ದವರಂತೆ ವಿಶ್ಲೇಷಣೆಗೊಳಪಡಿಸಿ ಉಪಕರಿಸಿದ್ದಾರೆ. ಇವೊತ್ತು ಮಾನವ ಕುಲಕ್ಕೆ ಸವಾಲಾಗಿರುವ ಅಮೆರಿಕಾದ ಜಾಗತಿಕ ಕಾರ್ಯಾಚರಣೆಯ ನೀಚ ಅತಿಕ್ರಮಣವನ್ನು ಇಸ್ಲಾಮನ್ನೂ ಒಳಗೊಂಡು ಉಳಿದ ಜಗತ್ತು ಪರಸ್ಪರರಲ್ಲಿ ನಂಬಿಕೆಯಿಟ್ಟು ಒಗ್ಗಟಾಗಿ ಎದುರಿಸಬೇಕಿದೆ.

ಪುಸ್ತಕಾವಲೋಕನದಲ್ಲಿ ಜಯದೇವ್ ಪರಿಚಯಿಸಿರುವ ಪುಸ್ತಕ ಓದುವ ಕುತೂಹಲ ಹುಟ್ಟಿಸಿದೆ. 'ಸೆಕ್ಯುಲರಿಸಂ' ಕುರಿತ ಶಿವ ವಿಶ್ವನಾಥನ್ ಅವರ ಚಿಂತನೆ ಕನ್ನಡಕ್ಕೇನೂ ಹೊಸದಲ್ಲವಾದರೂ, ಜನತೆಯ ಮನಸ್ಸು ಜಡವಾಗಿಬಿಟ್ಟಿರುವ ಈ ಸಂದರ್ಭದಲ್ಲಿ ಉಪಯುಕ್ತವೇ ಆಗಿದೆ. ಇನ್ನು ಕಿಡಿಗೇಡಿಯ ಟಿಪ್ಪಣಿಗಳು great!

–**ಕೆ.ಪಿ.ನಟರಾಜ,** ತುಮಕೂರು

ಕಳೆದ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯ ನನಗೆ ಇಷ್ಟವಾಯಿತು.

–**ಎಂ.ಆರ್. ರಾಮಶೇಷ,** ಮೈಸೂರು

'ಹೊಸ ಮನುಷ್ಯ' ಹೆಸರು ಸರಳವಾಗಿದ್ದು ಜನಸಾಮಾನ್ಯರಿಗೆ ಇಷ್ಟವಾಗುವಂತಿದೆ. ಸಮಕಾಲೀನ ವಿಚಾರಗಳನ್ನು ತೀಕ್ಷ್ಣವಾಗಿ ವಿಶ್ಲೇಷಿಸುತ್ತಾ ಅವುಗಳ ಮೇಲೆ ಹೊಸ ಬೆಳಕು ಚೆಲ್ಲುತ್ತಿರುವುದು ಪತ್ರಿಕೆಯ ಅನನ್ಯತೆಯಾಗಿದೆ. 'ನಮ್ಮ ಸಮಾಜವಾದಿಗಳು' ಅಂಕಣ, ಸಮಾಜಾದವೆಂದರೇನು ಎಂದೂ ತಿಳಿಯದ ಹೊಸ ತಲೆಮಾರಿನವರಿಗೆ ಉಪಯುಕ್ತವೂ, ಪ್ರೇರಕವೂ ಆಗಿದೆ.

–**ಪಿ.ಎಂ. ಜಗದೀಶ್,** ಬೆಂಗಳೂರು

'ಹೊಸ ಮನುಷ್ಯ' ಶೀರ್ಷಿಕೆ ಆಪ್ತವಾಗಿದ್ದು, ಜನವರಿ ಸಂಚಿಕೆಯ ಎಲ್ಲ ಲೇಖನಗಳೂ ನಮ್ಮ ಸುತ್ತಮುತ್ತಲಿನ ವಿದ್ಯಮಾನಗಳನ್ನು ಹೊಸ ಕಣ್ಣುಗಳಿಂದ ನೋಡುವಂತೆ ನಮ್ಮನ್ನು ತೀವ್ರವಾಗಿ ಪ್ರಚೋದಿಸುತ್ತವೆ.

–**ಗಿರೀಶ್ ಕೆ.,** ನನ್ನಿವಾಳ

'ನವ ಮಾನವವು 'ಹೊಸ ಮನುಷ್ಯ'ನಾದ ಮೇಲೆ ಹೆಚ್ಚು ಆಪ್ತವಾಗುತ್ತಿದೆ. ಡಿಸೆಂಬರ್, ೨೦೧೨ರ ಸಂಚಿಕೆಯಲ್ಲಿನ ಸವಿತಾ ನಾಗಭೂಷಣರ ಲೇಖನ ನಮ್ಮ ಜನ ಪ್ರತಿನಧಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿಯಂತಿದೆ. ಸರ್ಕಾರ ನಡೆಸುವ ಜನ ಪ್ರತಿನಿಧಿಗಳ ಸ್ವಹಿತಾಸಕ್ತಿ ಮತ್ತು ಈ ಪ್ರತಿನಿಧಿಗಳನ್ನು ಆರಿಸುವ ಜನಗಳ ಇಚ್ಛಾಶಕ್ತಿಯ ಕೊರತೆ ಇಂತಹ ವಿಪರ್ಯಾಸಗಳು ನಿತ್ಯವು ಜರುಗುತ್ತಲೇ ಇರಲು ಕಾರಣವಾಗಿದೆ.

ಹೊಸದಾಗಿ ಶುರುವಾಗಿರುವ 'ಕಿಡಿಗೇಡಿ' ಟಿಪ್ಪಣಿಗಳು ಚಾಟಿ ಏಟಿನಂತಿವೆ. ನಿಮ್ಮ ಸಂಪಾದಕೀಯಕ್ಕಾಗಿ ಪ್ರತಿ ತಿಂಗಳು ಪತ್ರಿಕೆಗಾಗಿ ಎದುರು ನೋಡುತ್ತಿರುತ್ತೇನೆ.

–**ಡಾ. ಅರುಂಧತಿ ರಂಗಸ್ವಾಮಿ,** ತುಮಕೂರು

# ಶಾಲೆಗೊಂದು ಬಹಿರಂಗ ಪತ್ರ: ನೀವೂ ಬರೆಯಿರಿ

ಪ್ರೀತಿಯ ಹಾಗೂ ಗೌರವಾನ್ವಿತ ಗುರುಗಳಿಗೆ ನಮಸ್ಕಾರಗಳು.

ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅನಾಚಾರಗಳಿಗೆ ಕಾರಣವಾದ ನೈತಿಕ ಅಧಃಪತನ ಕಂಡು ದಿಗ್ಭ್ರಮೆಯಗುತ್ತಿದೆ.

ನಮ್ಮ ಕಿರಿಯರಿಗೆ ಹೇಗೆ ಮತ್ತು ಯಾಕೆ ಆಕ್ರಮಣಶೀಲರಾಗಿರಬಾರದು ಮತ್ತು ಪ್ರಚೋದನಕಾರಿಯಾಗಿರಬಾರದು ಎಂಬುದನ್ನು ಹೇಳದೇ ನಾವು ಹೊಣೆಗೇಡಿಗಳಾಗಿ ವರ್ತಿಸುತ್ತಿದ್ದೇವೆ.

ನಮ್ಮ ನಡತೆ, ಹಾವಭಾವ, ಮಾತು, ಕಣ್ನೋಟ ನಾಗರೀಕವಾಗಿರಬೇಕೆಂದು ನಮ್ಮ ಮಕ್ಕಳಿಗೆ ತಿಳಿಹೇಳಬೇಕಾದ ಪೋಷಕರು, ಶಿಕ್ಷಕರು ಮತ್ತು ಹಿರಿಯರು ನಮಗರಿವಿಲ್ಲದಂತೆ ಅವರನ್ನು ತಪ್ಪುದಾರಿಗೆ ಎಳೆಯುತ್ತಿದ್ದೇವೆ.

ತಮ್ಮ ಶಾಲೆಯ ಸಭೆ–ಸಮಾರಂಭಗಳಲ್ಲಿ ಹಾಡು–ನೃತ್ಯ ಕಾರ್ಯಕ್ರಮಗಳಿಗಾಗಿ ದ್ವಂದ್ವಾರ್ಥದ, ಕೆಲವೊಮ್ಮೆ ಅರ್ಥವೇ ಇಲ್ಲದ, ಅಸಂಬದ್ಧವಾದ ಸಂಗೀತ–ಹಾಡುಗಳನ್ನು ಮಕ್ಕಳಿಗೆ ಕಲಿಸಿ, ವೇದಿಕೆಯ ಮೇಲೆ ಪ್ರದರ್ಶಿಸಲು ಸಿದ್ಧತೆ ನಡೆಸುವುದು ಎಲ್ಲೆಡೆಯಂತೆ ಬಹಳ ಸಮಯದಿಂದಲೂ ನಡೆಯುತ್ತಲೇ ಇರುತ್ತದೆ. ಶಿಕ್ಷಕರು ಕಲಿಸಿದ್ದನ್ನು ಅಮಾಯಕ ಮಕ್ಕಳು ಕಲಿತು ಪ್ರದರ್ಶಿಸಿದಾಗ ನಾವು ಪೋಷಕರು ಚಪ್ಪಾಳೆ ಹೊಡೆದು ನಮ್ಮ ಮೂರ್ಖತನವನ್ನು ಜಾಹೀರುಗೊಳಿಸುತ್ತಿದ್ದೇವೆ. ನಮ್ಮ ಮಕ್ಕಳಿಗೆ ನಾವೆಂಥಾ ನಾಳೆಗಳನ್ನು ಸಿದ್ಧಪಡಿಸುತ್ತಿದ್ದೇವೆ? ಅವರನ್ನು ಯಾವ ದಿಕ್ಕಿನೆಡೆ ಸಜ್ಜುಗೊಳಿಸುತ್ತಿದ್ದೇವೆ ಎಂದು ಹತಾಶೆಯಾಗುತ್ತಿದೆ.

ಈಗಾಗಲೇ ಟೀವಿ, ಮೊಬೈಲ್ ಮತ್ತು ಇಂಟರ್‌ನೆಟ್‌ನಿಂದ ಕಲುಷಿತಗೊಳ್ಳುತ್ತಿರುವ ನಮ್ಮ ಕಿರಿಯರ ಎಳೆಯ ಮನಸ್ಸನ್ನು ಶಾಶ್ವತವಾಗಿ ಮಲಿನಗೊಳಿಸುವ ಈ ವ್ಯವಸ್ಥಿತ ಪ್ರಯತ್ನವನ್ನು ಈ ಕೂಡಲೇ ನಿಲ್ಲಿಸಬೇಕೆಂದು ಈ ಪತ್ರದ ಮೂಲಕ ಕೇಳಿಕೊಳ್ಳುತ್ತೇನೆ.

ನಮ್ಮ ಕನ್ನಡದ್ದೇ ಆದ ಸದಭಿರುಚಿಯ ದೇಶಭಕ್ತಿ, ನಾಡಹಿರಿಮೆ, ಜನಪದ ಸೊಗಡು ಸಾರುವ ಅಪಾರ ಸಾಹಿತ್ಯವಿದ್ದರೂ ಕೀಳು ಅಭಿರುಚಿಯನ್ನು ಮಕ್ಕಳಿಗೆ ಪಠ್ಯೇತರ ಚಟುವಟಿಕೆಯ ಮೂಲಕ ತಲುಪಿಸುತ್ತಿರುವ ನಮೆಲ್ಲರ ಉದ್ದೇಶ ಪ್ರಶ್ನಾರ್ಹವಾಗಿದೆ. ಮಕ್ಕಳು ಹಾಗೂ ಯುವ ಜನಾಂಗ ದಾರಿ ತಪ್ಪದಂತೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿಯುತ ಶಿಕ್ಷಕರು ಹಾಗೂ ನಾಳಿನ ದೇಶವನ್ನು ರೂಪಿಸುವಲ್ಲಿ ಗುರುತರ ಹೊಣೆಯನ್ನು ಹೊತ್ತಿರುವ ವಿದ್ಯಾ ಸಂಸ್ಥೆಗಳಲ್ಲಿರುವ ಈ ರೀತಿಯ ಬೆಳವಣಿಗೆಗಳನ್ನು ಕಂಡು ನನಗೆ ಆಘಾತವಾಗಿದೆ.

ಈಗಲೂ ತಡವಾಗಿಲ್ಲ. ಈ ಕುರಿತು ಶೀಘ್ರ ಕ್ರಮ ಕೈಗೊಂಡು ನಮ್ಮ ಮಕ್ಕಳಲ್ಲಿ ಸದಭಿರುಚಿ ಬೆಳೆಯುವಲ್ಲಿ ತಾವುಗಳು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೀರೆಂದು ಈ ಮೂಲಕ ಆಶಿಸುತ್ತೇನೆ.

ವಂದನೆಗಳು.

–**ಧನಂಜಯ ಜೀವಾಳ ಬಿ.ಕೆ.,**
ಮೂಡಿಗೆರೆ

**(ಈ ಪತ್ರವನ್ನು ನಾನು ನನ್ನ ಮಗ ಮತ್ತು ಮಗಳು ಓದುತ್ತಿರುವ ಶಾಲೆಯ ಮುಖ್ಯಸ್ಥರಿಗೆ ಬರೆದು ಕಳಿಸಿದಾಗ, ಮೊದಲ ದಿನ ನನ್ನ ಮಗಳು ಗುರುಗಳಿಗೆ ಕೊಟ್ಟರೆ ಎಲ್ಲಿ ಓದಿ ಗದರುತ್ತಾರೋ ಎಂದು ಹೆದರಿ ಮತ್ತು ಹಾಗೆಲ್ಲಾ ಪತ್ರ ಕೊಡೋಹಾಗಿಲ್ಲ ಎಂದುಕೊಂಡು ಅವರಿಗೆ ಪತ್ರ ಕೊಡದೇ ವಾಪಾಸ್ ತಂದಿದ್ದಳು. ಮಾರನೇ ದಿನ ನನ್ನ ಗದರಿಕೆಗೆ ಬೆಚ್ಚಿ ಆ ಶಾಲೆಯ ಪ್ರಾಂಶುಪಾಲರಿಗೆ ನೀಡಿದಳು. ಪತ್ರವನ್ನೋದಿದ ಪ್ರಾಂಶುಪಾಲರು ನನಗೆ ದೂರವಾಣಿ ಕರೆ ಮಾಡಿ, ವಸ್ತು ವಿಷಯಕ್ಕಾಗಿ ವಂದನೆಗಳನ್ನು ತಿಳಿಸಿದರು ಹಾಗೂ ತಮ್ಮ ಶಾಲೆಯ ನಿಯೋಜಿತ ಕಾರ್ಯಕ್ರಮದಲ್ಲಿ ಗಮನಾರ್ಹ ಬದಲಾವಣೆ ಮಾಡಿದ್ದನ್ನು ವಿವರಿಸಿದರು. ಈ ವಿಚಾರಗಳನ್ನು ನಾವು ಈವರೆವಿಗೂ ಯೋಚಿಸಿಯೇ ಇರಲಿಲ್ಲ, ನಮ್ಮ ಬೆನ್ನು ನಮಗೆ ಕಾಣಿಸಿರಲೇ ಇಲ್ಲ ಮತ್ತು ಯಾವ ಪೋಷಕರೂ ಈ ಕುರಿತಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರಲಿಲ್ಲ ಎಂದು ವಾಸ್ತವವನ್ನು ತೆರೆದಿಟ್ಟರು.**

**ಈ ಪತ್ರದ ಸಾರಾಂಶವನ್ನು ಒಳಗೊಂಡಂತ ಸೂಕ್ತ ಹಾಗೂ ಸಮಂಜಸವಾದ ಪತ್ರವನ್ನು ಸಹೃದಯೀ ಪೋಷಕರು ತಮ್ಮ ಮಕ್ಕಳು ಓದುತ್ತಿರುವ ಶಾಲೆಗಳ ಮುಖ್ಯಸ್ಥರುಗಳಿಗೆ ಬರೆಯುವ ಮೂಲಕ ಒಳ್ಳೆಯ ನಾಳೆಗಳಿಗೆ ನಾಂದಿ ಹಾಡುವಂತಾಗಲಿ.)**

# 'ಹೊಸ ಮನುಷ್ಯನ ಹುಡುಕಾಟದಲ್ಲಿ': ಹಾಸನದಲ್ಲಿ ಸಮಾಜವಾದಿ ಅಧ್ಯಯನ ಶಿಬಿರ



ಇಂದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವುದು ಪ್ರಕೃತಿಯ ವಿನಾಶದ ಕೆಲಸವೇ ಆಗಿದ್ದು ಈ ಬಗ್ಗೆ ನಾವು ಎಚ್ಚೆತ್ತುಕೊಳ್ಳದಿದ್ದರೆ ನಮ್ಮ ಕಣ್ಮುಂದೆಯೇ ಅನಾಹುತ ಕಾದಿದೆ ಎಂದು ಪತ್ರಕರ್ತ ಆರ್. ಪಿ. ವೆಂಕಟೇಶಮೂರ್ತಿ ಎಚ್ಚರಿಸಿದ್ದಾರೆ. ಅವರು ಕಳೆದ ಜನವರಿ ೧೨ ಹಾಗೂ ೧೩ರಂದು ಸಾಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಮತ್ತು ಹಾಸನದ ವಿವೇಕ ಬ್ಯೂರೋ ಹಾಸನದಲ್ಲಿ ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಸಂದರ್ಭದಲ್ಲಿ ಸಂಯುಕ್ತವಾಗಿ ಆಯೋಜಿಸಿದ್ದ 'ಹೊಸ ಮನುಷ್ಯನ ಹುಡುಕಾಟದಲ್ಲಿ' ಎಂಬ ವಿಷಯ ಕುರಿತ ಸಮಾಜವಾದಿ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ನಮ್ಮ ನದಿಗಳ ಮರಳು ಬರಿದಾಗುತ್ತಿದ್ದು ಅವು ಒಂದೊಂದಾಗಿ ನಿಧಾನವಾಗಿ ಬತ್ತಿ ಹೋಗುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ ಎಂದು ಅವರು ಈ ಅನಾಹುತವನ್ನು ವಿವರಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ವಿವೇಕಾನಂದರು ಹಿಂದೂ ಧರ್ಮದ ಪುರ್ನವ್ಯಾಖ್ಯಾನ ಮತ್ತು ಪುನರನ್ವೇಷಣೆಯ ಮೂಲಕ ಮಾಡುತ್ತಿದ್ದುದೂ ಹೊಸ ಮನುಷ್ಯನ ಹುಡುಕಾಟವನ್ನೇ ಎಂದು ಹೇಳಿದರು. ಶಿಬಿರದ ಉದ್ದೇಶದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಶಿಬಿರದ ನಿರ್ದೇಶಕರೂ ಆಗಿದ್ದ ಅವರು, ಗಾಂಧೀಜಿ ತಮ್ಮ 'ಹಿಂದ್ ಸ್ವರಾಜ್' ಮೂಲಕ ಮಾಡಿದ್ದ ಪಶ್ಚಿಮದ ಆಧುನಿಕತೆಯ ವಿಮರ್ಶೆಯಿಂದ ಸ್ಫೂರ್ತಿ ಪಡೆದು ತಮ್ಮದೇ ವಿಶಿಷ್ಟ ಸಮಾಜವಾದಿ ನಾಗರೀಕತೆಯ ಕನಸು ಕಂಡಿದ್ದ ಲೋಹಿಯಾರ ತಾತ್ವಿಕ ಅನ್ವೇಷಣೆಯ ಮುಂದುವರಿಕೆಯಾಗಿ ಶಿಬಿರದಲ್ಲಿ 'ಹೊಸ ಮನುಷ್ಯನ ಹುಡುಕಾಟ'ದ ಪ್ರಯತ್ನ ನಡೆಯುತ್ತಿದೆ ಎಂದರು.

ದಿನದ ಮೊದಲ ಗೋಷ್ಠಿಯಲ್ಲಿ 'ಹೊಸ ಮನುಷ್ಯನ ಹುಡುಕಾಟದ ಸಾಧನವಾಗಿ ಇತಿಹಾಸ ಅಧ್ಯಯನ' ಎಂಬ ವಿಷಯವಾಗಿ ಮಾತನಾಡಿದ ಡಾ|| ರಾಜಾರಾಂ ತೋಳ್ಪಾಡಿಯವರು, ಗತಕಾಲದ ದಾಖಲೆಗಳು ಇತಿಹಾಸವಲ್ಲ; ನಾವು ಕಟ್ಟಿಕೊಳ್ಳಬಯಸುವ ವರ್ತಮಾನ ಮತ್ತು ಭವಿಷ್ಯಕ್ಕನುಗುಣವಾಗಿ ನಮ್ಮ ಇತಿಹಾಸವನ್ನು ಕಟ್ಟಿಕೊಳ್ಳಬೇಕಾಗುತ್ತದೆ ಎಂದರು. ಎರಡನೇ ಗೋಷ್ಠಿಯಲ್ಲಿ 'ಹೊಸ ಮನುಷ್ಯನ ಹುಡುಕಾಟದ ಸಾಧನಗಳಾಗಿ ಸಾಹಿತ್ಯ-ಸಂಸ್ಕೃತಿ' ವಿಷಯವಾಗಿ ಮತನಾಡಿದ ಪ್ರೊ|| ಬಿ.ಪಿ.ವೀರೇಂದ್ರಕುಮಾರ್ ಅವರು, ಸಾಹಿತ್ಯ-ಸಂಸ್ಕೃತಿಗಳು ಮನುಷ್ಯನ ಹೊಸ ಬದುಕಿನ ನಿರಂತರ ಅನ್ವೇಷಣೆಯ ಪ್ರಯತ್ನಗಳೇ ಆಗಿದೆ ಎನ್ನುತ್ತಾ, ಕನ್ನಡ ಸಾಹಿತ್ಯ ಚರಿತ್ರೆಯಿಂದ ಹಲವು ಉದಾಹರಣೆಗಳನ್ನು ನೀಡಿದರಲ್ಲದೆ, ಸಮಕಾಲೀನ ಸಾಹಿತ್ಯವೂ ವಿವಿಧ ಚಳುವಳಿಗಳ ಮೂಲಕ ಹೇಗೆ ಬದುಕನ್ನು ಹೊಸ ಒಳನೋಟಗಳೊಂದಿಗೆ ವಿಮರ್ಶಿಸುತ್ತಾ ಹೊಸ ಮನುಷ್ಯನ ಅನ್ವೇಷಣೆಯಲ್ಲಿ ತೊಡಗಿದೆ ಎಂಬುದನ್ನು ವಿಷದೀಕರಿಸಿದರು.



ಅಂದು ಸಂಜೆ ಅಮೆರಿಕಾದ ಮಾಜಿ ಉಪಾಧ್ಯಕ್ಷ ಅಲ್ಗೋರ್ ತಯರಿಸಿರುವ ಪರಿಸರ ಸಂರಕ್ಷಣೆಯ ತುರ್ತು ಅಗತ್ಯ ಕುರಿತ ಸಾಕ್ಷ್ಯ ಚಿತ್ರ 'ಒಂದು ನಿಷ್ಠುರ ಸತ್ಯ'ವನ್ನು ಪ್ರದರ್ಶಿಸಲಾಯಿತು.ಮಾರನೆಯ ದಿನ ಬೆಳಿಗ್ಗೆ ಶಿಬಿರಾರ್ಥಿಗಳಿಂದ ಸಾಕ್ಷ್ಯಚಿತ್ರದ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಯಿತು.

ನಂತರದ ಗೋಷ್ಠಿಯಲ್ಲಿ 'ಹೊಸ ಮನುಷ್ಯನ ಹುಡುಕಾಟದ ಗಾಂಧಿ ಪ್ರಯೋಗ' ಎಂಬ ವಿಷಯವಾಗಿ ಮಾತನಾಡಿದ ಡಾ|| ಎಚ್.ಎ. ಶಂಕರನಾರಾಯಣ ಅವರು ಗುಣಾತ್ಮಕ ಅಭಿವೃದ್ಧಿ ಮತ್ತು ಘನಾತ್ಮಕ ಅಭಿವೃದ್ಧಿಯ ನಡುವಣ ವ್ಯತ್ಯಾಸಗಳನ್ನು ಅರಿಯಲಾಗದಿರುವ ನಾವು, ಮನುಷ್ಯನ ಅಭಿವೃದ್ಧಿಯನ್ನೂ ಒಳಗೊಂಡ ಗಾಂಧಿ ಪ್ರತಿಪಾದಿಸಿದ ಗುಣಾತ್ಮಕ ಅಭಿವೃದ್ಧಿಯ ಕಡೆ ಗಮನ ಕೊಡದಿದ್ದರೆ ನಾವಿಂದು ಹೆಮ್ಮೆಪಡುತ್ತಿರುವ ಘನಾತ್ಮಕ ಅಭಿವೃದ್ಧಿ ನಮಗೇ ಮುಳುವಾಗುವ ಕಾಲ ದೂರವಿಲ್ಲ ಎಂದು ಎಚ್ಚರಿಸಿದರು. ನಂತರದ ಗೋಷ್ಠಿಯಲ್ಲಿ ಲೋಹಿಯಾ-ಅಂಬೇಡ್ಕರ್ ಚಿಂತನೆಗಳ ಬಗ್ಗೆ ಮಾತನಾಡಿದ ಡಾ|| ರಾಜಾರಾಂ ತೋಳ್ಪಾಡಿಯವರು, ಇತಿಹಾಸವನ್ನು ಧಿಕ್ಕರಿಸಿ ಯೋಚಿಸಬಲ್ಲವರಾಗಿದ್ದ ಗಾಂಧಿಗೆ ಇತಿಹಾಸದ ಸೋಂಕಿಲ್ಲದ ಆದರ್ಶದ ಹಳ್ಳಿ ನವ ಭಾರತದ ಅಭಿವೃದ್ಧಿಯ ಮೂಲ ಘಟಕವಾಗಿದ್ದರೆ ಇತಿಹಾಸದ ಅವಮಾನಗಳಿಂದ ಜರ್ಝರಿತರಾಗಿದ್ದ ಅಂಬೇಡ್ಕರ್‌ಗೆ ಹಳ್ಳಿಯೆಂಬುದು ದುಃಸ್ವಪ್ನವಾಗಿತ್ತು. ಲೋಹಿಯಾ ತಮ್ಮ ಹೊಸ ಸಮಾಜವಾದಿ ಚಿಂತನೆಯ ಮೂಲಕ ಈ ಪರ-ವಿರೋಧಗಳನ್ನು ಮೀರಬಲ್ಲ ಚತುಸ್ತಂಭ ರಾಷ್ಟ್ರದ ಪರಿಕಲ್ಪನೆ ನೀಡಿ, ಹೊಸ ಅಭಿವೃದ್ಧಿಯ ಮಾದರಿಯೊಂದನ್ನು ನಮಗೆ ಕಟ್ಟಿಕೊಟ್ಟಿದ್ದಾರೆ ಎಂದರು. ಕೊನೆಯ ಗೋಷ್ಠಿಯಲ್ಲಿ 'ಭಾರತಕ್ಕೆ ಬಿದ್ದ ಅಮೆರಿಕಾದ ಕನಸು' ವಿಷಯವಾಗಿ ಮಾತನಾಡಿದ ರವಿಕೃಷ್ಣಾ ರೆಡ್ಡಿಯವರು, ಮುಕ್ತಸ್ಪರ್ಧೆಯ ಮೂಲಕ ಇತಿಹಾಸದ ಎಲ್ಲ ಅಡೆತಡೆಗಳನ್ನೂ ಮೀರಲು ಸಾಧ್ಯ ಎಂಬ ಅಮೆರಿಕಾದ ಕನಸೇ ಕುಸಿದು ಬೀಳುತ್ತಿದ್ದು ಇಂದು ಜಗತ್ತು ಬಂಡವಾಳಶಾಹಿ ಮತ್ತು ಸಮಜವಾದಗಳನ್ನು ಮೀರಿದ ಹೊಸ ಅಭಿವೃದ್ಧಿಯ ಹುಡುಕಾಟದಲ್ಲಿ ತೊಡಗಬೇಕಿದೆ ಎಂದು ಅಭಿಪ್ರಾಯಪಟ್ಟರು.



ಪ್ರತಿ ಗೋಷ್ಠಿಯ ನಂತರ ಶಿಬಿರಾರ್ಥಿಗಳಿಂದ ಅರ್ಧ ತಾಸು ಚರ್ಚೆ ಇರುತ್ತಿತ್ತು. ಶಿಬಿರದ ಕೊನೆಯಲ್ಲಿ ಶಿಬಿರಾರ್ಥಿಗಳು ತಾವು ಶಿಬಿರದಿಂದ ಕಲಿತಿದ್ದರ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಶಿಬಿರದ ಸಂಚಾಲಕ ಮತ್ತು ವಿವೇಕ ಬ್ಯೂರೋದ ಮುಖ್ಯಸ್ಥ ಬಿ. ಶಿವಕುಮಾರ್ ಸಮಾರೋಪದ ಮಾತುಗಳನ್ನಾಡಿ, ತಮ್ಮ ಬ್ಯೂರೋ ಯುವಜನರನ್ನು ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಗೊಳಿಸುವ ಕೆಲಸ ಮಾಡದೆ, ಅವರನ್ನು ಹೊಸ ಬದುಕಿನ ಅನ್ವೇಷಣೆಯಲ್ಲಿ ತೊಡಗುವಂತೆಯೂ ಸಜ್ಜುಗೊಳಿಸುವ ಆಶಯ ಹೊಂದಿದೆ ಎಂದರು.

ಶಿಬಿರದಲ್ಲಿ ನಿವೃತ್ತ ಪ್ರಾಂಶುಪಾಲರಾದ ದೇ.ನಾ. ಶ್ರೀನಿವಾಸಮೂರ್ತಿ, ಮಾಜಿ ಕಾರ್ಮಿಕ ನಾಯಕ ನಂಜುಂಡಸ್ವಾಮಿ ನಿವೃತ್ತ ಗ್ರಂಥಪಾಲಕ ಕೆ.ಡಿ. ಹಾಲವರ ಮುಂತಾದ ಹಲವು ಹಿರಿಯರೂ ಮತ್ತು ಕೆಲವು ಯುವ ಸರ್ಕಾರಿ ಅಧಿಕಾರಿಗಳೂ ಸೇರಿದಂತೆ ಸುಮಾರು ಅರುವತ್ತು ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

(ವರದಿ: **ಸಹನಾ ಎಸ್.** ಹಾಸನ)

# ಹೊಸ ಆರ್ಥಿಕ ನೀತಿಯೂ, ಮಹಿಳೆಯರ ಮೇಲಿನ ಹಿಂಸಾಚಾರವೂ...

–ವಂದನಾ ಶಿವ



**ದೆ**ಹಲಿಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದ ದಿಟ್ಟ ಮತ್ತು ಧೀರ ಹುಡುಗಿ ಕೊನೆಯುಸಿರೆಳೆದಿದ್ದಾಳೆ. ಅವಳಿಗೆ ಮತ್ತು ಮಹಿಳೆಯ ಮೇಲಿನ ಹಿಂಸಾಚಾರಕ್ಕೆ ಬಲಿಯಾದ ಎಲ್ಲರಿಗೆ ಶ್ರದ್ಧಾಂಜಲಿಯಗಿ ಈ ಲೇಖನವನ್ನು ಬರೆಯುತ್ತಿರುವೆ.

ಮಹಿಳೆ ಮೇಲಿನ ದೌರ್ಜನ್ಯ ಪಿತೃಪ್ರಧಾನ ವ್ಯವಸ್ಥೆಯಷ್ಟೇ ಹಳೆಯದು. ಇತ್ತೀಚಿನ ವರ್ಷಗಳಲ್ಲಿ ಇದು ದೆಹಲಿಯಲ್ಲಿ ಅತ್ಯಾಚಾರಕ್ಕೊಳಗಾದ ಹುಡುಗಿಯ ಬರ್ಬರ ಕೊಲೆ ಮತ್ತು ಚಂಡೀಗಢದ ೧೭ ವರ್ಷಗಳ ಹುಡುಗಿಯ ಅಸಹಾಯಕ ಆತ್ಮಹತ್ಯೆಯಂತೆ ಹೆಚ್ಚು ಕ್ರೂರವೂ, ವ್ಯಾಪಕವೂ ಆಗುತ್ತಿದೆ. ಅತ್ಯಾಚಾರದ ಪ್ರಕರಣಗಳು ಈ ದೇಶದಲ್ಲಿ, ಅಪರಾಧ ದಾಖಲೆಗಳ ರಾಷ್ಟ್ರೀಯ ಮಂಡಳಿಯ ಅಂಕಿ ಅಂಶಗಳ ಪ್ರಕಾರ– ಅದು ಸ್ಥಾಪಿತವಾದ ೧೯೭೧ರಿಂದ ಪರಿಗಣಿಸಿದರೆ– ' ಈವರೆಗೆ ಶೇ.೮೭೩ರಷ್ಟು ಏರಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅದರ ಏರಿಕೆಯ ಪ್ರಮಾಣ ಶೇ.೨೪೦ರಷ್ಟು!(೧೯೦೦ರಲ್ಲಿದ್ದ ೧೦,೦೬೮ ಸಂಖ್ಯೆ ೧೦೧೧ರ ಹೊತ್ತಿಗೆ ೨೪, ೨೦೬ನ್ನು ಮುಟ್ಟಿದೆ) ಈ ಅಪಾರ ಹೆಚ್ಚಳದ ಮೂಲವನ್ನು ಶೋಧಿಸ ಹೊರಟಾಗ ಎದ್ದು ಕಾಣುವ ಅಂಶವೆಂದರೆ ಇಪ್ಪತ್ತು ವರ್ಷಗಳ ಹಿಂದೆ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಲಾಯಿತು ಎಂಬುದು. ಹಾಗಾದರೆ, ಇಪ್ಪತ್ತು ವರ್ಷಗಳಿಂದ ಬೆಳೆಯುತ್ತಿರುವ, ಅಪ್ರಜಾಸತ್ತಾತ್ಮಕವಾಗಿ ಹೇರಲ್ಪಟ್ಟಿರುವ ಅನ್ಯಾಯದ ಮತ್ತು ಅನುಚಿತವಾದ ಈ ಹಿಂಸಾತ್ಮಕ ಆರ್ಥಿಕ ನೀತಿಗೂ ಮಹಿಳೆ ಮೇಲಿನ ದೌರ್ಜನ್ಯದ ಈ ಅಪಾರ ಹೆಚ್ಚಳಕ್ಕೂ ಏನಾದರೂ ಸಂಬಂಧವಿದೆಯೇ?. ನನಗನ್ನಿಸುವಂತೆ ಸಂಬಂಧವಿದೆ.

ಮೊದಲ ಅಂಶ ಎಂದರೆ, 'ಅಭಿವೃದ್ಧಿ'ಯ ಸುತ್ತ ಕುರುಡಾಗಿ ಕಟ್ಟಲ್ಪಟ್ಟಿರುವ ಈ ಆರ್ಥಿಕ ಮಾದರಿಯು ಆರ್ಥಿಕತೆಗೆ ಮಹಿಳೆಯರ ಕೊಡುಗೆಯನ್ನು ನಿರಾಕರಿಸುವ ಮೂಲಕ ಅವರ ಮೇಲಿನ ದೌರ್ಜನ್ಯಕ್ಕೆ ಅಡಿಪಾಯ ಹಾಕಿದೆ. ಸರ್ಕಾರ ಹೆಚ್ಚೆಚ್ಚು 'ಒಳಗೊಳ್ಳುವ ಅಭಿವೃದ್ಧಿ' ಮತ್ತು 'ಒಳಗೊಳ್ಳುವ ಹಣಕಾಸಿನ ವ್ಯವಸ್ಥೆ'ಯ ಬಗ್ಗೆ ಮಾತಾಡಿದಷ್ಟೂ ಆರ್ಥಿಕತೆ ಮತ್ತು ಸಮಾಜಕ್ಕೆ ಮಹಿಳೆಯರು ನೀಡುವ ಕೊಡುಗೆಯನ್ನು ಹೆಚ್ಚೆಚ್ಚು ಹೊರಗಿಡಲಾಗುತ್ತಿದೆ. ಪಿತೃಪ್ರಧಾನ ಆರ್ಥಿಕ ಮಾದರಿಯ ಪ್ರಕಾರ ಬದುಕಲು ಮಾಡಲಾಗುವ ಉತ್ಪಾದನೆಯನ್ನು ಅನುತ್ಪಾದಕ ಎಂದು ಪರಿಗಣಿಸಲಾಗುತ್ತದೆ. ಮೌಲ್ಯವನ್ನು ನಿರ್ಮೌಲ್ಯವನ್ನಾಗಿ ದುಡಿಮೆಯನ್ನು ದುಡಿಮೆಯಲ್ಲದ್ದನ್ನಾಗಿ ಜ್ಞಾನವನ್ನು ಜ್ಞಾನವಲ್ಲದ್ದನ್ನಾಗಿ ಪರಿವರ್ತಿಸಲಾಗುತ್ತಿರುವುದು, 'ಒಟ್ಟಾರೆ ರಾಷ್ಟ್ರೀಯ ಉತ್ಪನ್ನ'(GDP) ಎಂಬ ನಮ್ಮ ರಾಷ್ಟೀಯ ಬದುಕನ್ನು ಆಳುತ್ತಿರುವ ಪಿತೃಪ್ರಧಾನ ರಚನೆಯಾದ ಬಹು ಶಕ್ತಿಶಾಲಿ ಸಂಖ್ಯೆ. ಈ ಜಿಡಿಪಿ ಲೆಕ್ಕಾಚಾರಿಗಳ ಪ್ರಕಾರ ಉತ್ಪಾದಕರು ತಾವು ಉತ್ಪಾದಿಸಿದುದನ್ನು ಬಳಕೆ ಮಾಡಿದರೆ ಅದು ಉತ್ಪಾದನೆ ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಅವರ ಶಾಸ್ತ್ರದ ಪ್ರಕಾರ ಅದು ಉತ್ಪಾದನೆಯ ವ್ಯಾಖ್ಯೆಯ ಹೊರಗಿದೆ. ಹಾಗಾಗಿ ಮಹಿಳೆಯರು ತಮ್ಮ ಕುಟುಂಬಗಳಿಗಾಗಿ, ಮಕ್ಕಳಿಗಾಗಿ, ಸಮುದಾಯಕ್ಕಾಗಿ, ಸಮಾಜಕ್ಕಾಗಿ ಮಾಡುವ ಉತ್ಪಾದನೆಯನ್ನು ಅನುತ್ಪಾದಕ ಮತ್ತು ಆರ್ಥಿಕವಾಗಿ ನಿಷ್ಕ್ರಿಯ ಎಂದು ಪರಿಗಣಿಸಲಾಗುತ್ತದೆ. ಜಗತ್ತಿನ ದಕ್ಷಿಣ ಭಾಗದ ದೇಶಗಳಲ್ಲಿನ ಬದುಕುವುದಕ್ಕಾಗಿ ಮಾಡುವ ದುಡಿಮೆಯ ಆರ್ಥಿಕತೆಗಳಲ್ಲಿನ ಮಹಿಳೆಯರ ದುಡಿಮೆಯ ಅಪಮೌಲ್ಯೀಕರಣವು ಇಂತಹ ಬಂಡವಾಳಶಾಹಿ ಪಿತೃಪ್ರಧಾನ ವ್ಯವಸ್ಥೆಯ ಸಹಜ ಫಲವಾಗಿದೆ.

ಗಂಡುಗುಣದ ಬಂಡವಾಳಶಾಹಿ ವ್ಯವಸ್ಥೆಯ ನಿರ್ದೇಶನದಂತೆ ತನ್ನನ್ನು ಮಾರುಕಟ್ಟೆ ಆರ್ಥಿಕತೆಯ ಮೌಲ್ಯಗಳಿಗಷ್ಟೇ ಸೀಮಿತಗೊಳಿಸಿ ಕೊಂಡಿರುವುದರಿಂದ ಉತ್ಪಾದನೆಯ ಪರಿಕಲ್ಪನೆಯು ಪರಿಸರ ಮತ್ತು ಮಾನವನ ಉಳಿವಿಗೆ ಅಗತ್ಯವಾದ ಎರಡು ಮುಖ್ಯ ಆರ್ಥಿಕತೆಗಳನ್ನು ನಿರ್ಲಕ್ಷಿಸುತ್ತದೆ. ಅವು ನಿಸರ್ಗದ ಮತ್ತು ಉಳಿವಿನ ಆರ್ಥಿಕತೆಗಳು. ಈ ಆರ್ಥಿಕತೆಗಳಲ್ಲಿ ಭೂಮಿಯ ಬದುಕು ಮತ್ತು ಮಾನವ ಬದುಕುಗಳನ್ನು ಹೇಗೆ ಸಂರಕ್ಷಿಸಲಾಗುತ್ತಿದೆ ಎಂಬುದರ ಗಣನೆಯ ಅಂಶಗಳೇ ಆರ್ಥಿಕ ಮೌಲ್ಯಗಳೆನಸಿಕೊಳ್ಳುತ್ತವೆ. ಅದರ ನಾಣ್ಯಗಳೆಂದರೆ ನಗದು ಅಥವಾ ಮಾರುಕಟ್ಟೆ ವ್ಯವಹಾರವಲ್ಲ; ಜೀವದಾಯಿಯಾದ ಕೆಲಸ–ಕಾರ್ಯಗಳು.




ಎರಡನೆಯ ಅಂಶವೆಂದರೆ ಮಹಿಳೆಯರು ಮಾಡುವ ದುಡಿಮೆ ಮತ್ತು ಸಂಪದಭಿವೃದ್ಧಿಯನ್ನು ತನ್ನ ಮನಸ್ಸಿನಿಂದ ಹೊರಗಿಟ್ಟಿರುವ ಬಂಡವಾಳಶಾಹಿ ಗಂಡು ವ್ಯವಸ್ಥೆ ಮಹಿಳೆಯರನ್ನು ತಮ್ಮ ಬದುಕಿನ ಕ್ರಮಗಳಿಂದ ಮತ್ತು ತಮ್ಮ ಈ ಬದುಕಿನ ಕ್ರಮಕ್ಕಾಗಿ ಅವಲಂಬಿಸಿರುವ ಅವರ ಭೂಮಿ, ಕಾಡು, ನೀರು, ಅವರ ಬೀಜ ಮತ್ತು ಜೀವ ವೈವಿಧ್ಯಗಳಿಂದ ದೂರ ಮಾಡುವ ಮೂಲಕ ಹಿಂಸೆಯನ್ನು ಆಳಗೊಳಿಸುತ್ತದೆ. ಮಿತಿಯಿರುವ ಜಗತ್ತಿನಲ್ಲಿ ಮಿತಿಯಿಲ್ಲದ ಬೆಳವಣಿಗೆಯನ್ನು ಪ್ರತಿಪಾದಿಸುವ ಆರ್ಥಿಕ ಸುಧಾರಣೆಗಳನ್ನು ದುರ್ಬಲರ ಸಂಪನ್ಮೂಲಗಳನ್ನು ಬಲಶಾಲಿಗಳು ಲೂಟಿ ಮಾಡಲು ಅವಕಾಶ ಮಾಡಿಕೊಡುವುದರಿಂದಷ್ಟೇ ಪೋಷಿಸಬಹುದು. 'ಅಭಿವೃದ್ಧಿ'ಗೆ ಅಗತ್ಯವಾದ ಸಂಪನ್ಮೂಲಗಳ ಲೂಟಿ ಅತ್ಯಾಚಾರದ ಸಂಸ್ಕೃತಿಯನ್ನು ಸೃಷ್ಟಿಸುತ್ತದೆ: ಭೂಮಿ ಮೇಲಿನ ಅತ್ಯಾಚಾರ, ಸ್ಥಳೀಯ ಸ್ವಾವಲಂಬಿ ಆರ್ಥಿಕತೆಗಳ ಮೇಲಿನ ಅತ್ಯಾಚಾರ ಮತ್ತು ಮತ್ತು ಅದರ ಕೇಂದ್ರದಲ್ಲಿರುವ ಮಹಿಳೆಯರ ಮೇಲಿನ ಅತ್ಯಾಚಾರ...

ಭೂಮಿಯ ಮೇಲಿನ ಅತ್ಯಾಚಾರಕ್ಕೂ ಹೆಣ್ಣಿನ ಮೇಲಿನ ಅತ್ಯಾರಕ್ಕೂ–ರೂಪಕಾತ್ಮಕ ನೆಲೆಯಲ್ಲಿ ಲೋಕ ದೃಷ್ಟಿಯನ್ನು ರೂಪಿಸುವಲ್ಲಿ ಮತ್ತು ವಾಸ್ತವಿಕ ನೆಲೆಯಲ್ಲಿ ಮಹಿಳೆಯರ ದಿನನಿತ್ಯದ ಬದುಕನ್ನು ರೂಪಿಸುವಲ್ಲಿ–ಆಳದ ಸಂಬಂದವಿದೆಯೆಂದು ನಾನು ಹೇಳುತ್ತಲೇ ಬಂದಿದ್ದೇನೆ. ಮಹಿಳೆಯ ಆರ್ಥಿಕತೆಯ ದುರ್ಬಲೀಕರಣ ಅವಳನ್ನು ಲೈಂಗಿಕ ಆಕ್ರಮಣವೂ ಸೇರಿದಂತೆ ಎಲ್ಲ ರೀತಿಯ ದೌರ್ಜನ್ಯಗಳಿಗೂ ದಾರಿ ಮಾಡಿಕೊಡುತ್ತದೆ. ಇತ್ತೀಚೆಗೆ ರಾಷ್ಟ್ರೀಯ ಮಹಿಳಾ ಆಯೋಗವು ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರಶಾಸ್ತ್ರ ಸಂಶೋಧನಾ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿದ್ದ 'ಆರ್ಥಿಕ ಸುಧಾರಣೆಗಳು ಮಹಿಳೆಯರ ಮೇಲೆ ಮಾಡಿರುವ ಪ್ರಭಾವ' ಕುರಿತ ಸಾರ್ವಜನಿಕ ಸಾಕ್ಷ್ಯ ಸಭೆಗಳಲ್ಲಿ ನಿರೂಪಿಸಲ್ಪಟ್ಟ ಎಲ್ಲ ಅನುಭವಗಳೂ ಇದನ್ನು ಪುಷ್ಟೀಕರಿಸುತ್ತವೆ.

ದೆಹಲಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದ ಹುಡುಗಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಹುಟ್ಟು ಹಾಕಿದ್ದಾಳೆ. ಅದನ್ನು ನಾವು ಪೋಷಿಸಿ, ಆಳಗೊಳಿಸಿ, ವಿಸ್ತರಿಸಬೇಕು. ಮಹಿಳೆಯರ ಮೇಲೆ ದೌರ್ಜನ್ಯವೆಸುಗವವರಿಗೆ ಶಿಕ್ಷೆಯಾಗುವುದನ್ನು ಖಚಿತಗೊಳಿಸುವಂತಹ ಕಾನೂನುಗಳಿಗಾಗಿ ನಾವು ಹೋರಾಡಬೇಕು. ಇದನ್ನೆಲ್ಲ ಮಾಡುತ್ತಿರುವಾಗಲೇ, ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಕಾರಣವಾಗುತ್ತಿರುವ ಈ 'ಅಭಿವೃದ್ಧಿ' ಎಂಬ ಹೆಸರನಲ್ಲಿ ನಮ್ಮ ಹೇರಲಾಗಿರುವ ಈ ಆಳುತ್ತಿರುವ ಸೂತ್ರವನ್ನು ಬದಲಿಸಬೇಕಾದ ಅಗತ್ಯವನ್ನೂ ನಾವು ಮನಗಾಣಬೇಕಿದೆ.ಹೆಣ್ಣಿನ ಮೇಲಿನ ಹಿಂಸಾಚಾರವನ್ನು ಕೊನೆಗಳಿಸುವುದು ಎಂದರೆ ಬಂಡವಾಳಶಾಗಿ ಪಿತೃಪ್ರಧಾನ ವ್ಯವಸ್ಥೆ ರೂಪಿಸಿರುವ ಹಿಂಸಾತ್ಮಕ ಆರ್ಥಿಕತೆಯ ಗಡಿ ದಾಟಿ ಹೇಣ್ಣಿಗೆ ಮತ್ತು ಭೂಮಿಗೆ ಗೌರವ ನೀಡುವಂತಹ ಅಹಿಂಸಾತ್ಮಕ, ಶಾಂತಿಯುತ ಆರ್ಥಿಕತೆಗಳೆಡೆಗೆ ಚಲಿಸುವುದೇ ಆಗಿದೆ

(ಕನ್ನಡ ಭಾವಾನುವಾದ: **ಡಿಎಸ್ಸೆನ್**)

# ನಮ್ಮ ಸಮಾಜವಾದಿಗಳು | ನೇರ, ನಿಷ್ಟುರ ವ್ಯಕ್ತಿತ್ವದ ಜಿ.ಆರ್.ಜಿ. ನಗರ್



ಶಿವಮೊಗ್ಗ ಜಿಲ್ಲೆಯ ಸಾಗರ ಪ್ರಾಂತ್ಯದಲ್ಲಿ ಸಮಾಜವಾದಿ ಚಳುವಳಿ ಉತ್ತುಂಗದಲ್ಲಿದ್ದಾಗ ಸಮಾಜವಾದಿ ಸಿದ್ಧಾಂತವನ್ನು ಜ್ವರ ಏರಿಸಿಕೊಂಡವರಂತೆ ಕೆಲಸ ಮಾಡಿದ ಹಲವು ಹಿರಿಯ ಚೇತನಗಳು ಈಗ ನಮ್ಮ ನಡುವೆ ಇಲ್ಲ. ತಮ್ಮ ಜೀವನದ ಕೊನೆಯವರೆಗೂ ಸಾರ್ವಜನಕ ಹೋರಾಟವನ್ನೆ ಬದುಕಿನ ಉಸಿರು ಎನ್ನುವಂತೆ ಇದ್ದ ಚೇತನಗಳ ಪೈಕಿ ಸಾಗರದ ಜಿ.ಆರ್.ಜಿ.ನಗರ್ ಕೂಡ ಒಬ್ಬರು.

ಜಿ.ಆರ್.ಜಿ. ನಗರ್ ಅವರ ಹೆಸರು ಗುರುರಾಜಣ್ಣ. ಅವರ ಕುಟುಂಬ ಮೂಲತಃ ಹೊಸನಗರ ಸಮೀಪದ ನಗರಕ್ಕೆ ಸೇರಿದ್ದವರಾಗಿದ್ದರಿಂದ ಹೆಸರಿನ ಜೊತೆಗೆ ನಗರ್ ಕೂಡಿಕೊಂಡಿದೆ. ಸಂಪ್ರದಾಯಸ್ಥ ಮಾಧ್ವ ಜಮೀನುದಾರಿ ಕುಟುಂಬದ ನಗರ್ ಸಮಾಜವಾದಿ ಚಿಂತನೆಯ ಆಕರ್ಷಣೆಗೆ ಒಳಗಾದದ್ದು ವಿಶೇಷ ಸಂಗತಿ. ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲೆ ನಗರ್ ಸಾರ್ವಜನಿಕ ಬದುಕಿಗೆ ಧುಮುಕಿದವರು. ಆಗ ಸಾಗರದಲ್ಲಿ ಸೇವಾದಳದ ಶಿಕ್ಷಕರಾಗಿದ್ದ ಅವರು ಎಚ್.ಎಲ್.ವೀರಭದ್ರಪ್ಪಗೌಡರು, ಮರೂರು ರುದ್ರಪ್ಪ ಗೌಡರು, ಕಾನ್ಲೆ ಸಣ್ಣಯ್ಯ, ಕಾನುಗೋಡು ಹರಿಯಪ್ಪ ಮೊದಲಾದ ಸತ್ಯಾಗ್ರಹಿಗಳೊಂದಿಗೆ ಸಂಪರ್ಕ ಹೊಂದಿದ್ದು ಅವರಿಗೆ ನೆರವಾಗುವ ಕೆಲಸ ಮಾಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿ ಕಾಲಕ್ಕೆ ಸಾಗರ ತಾಲ್ಲೂಕಿನ ಸೈದೂರು ಗ್ರಾಮದಲ್ಲಿ ಗುರುರಾಜರ ಕಾಲಿಗೆ ಗುಂಡೇಟು ಬಿದ್ದಿತ್ತು. ಇದ್ಯಾವುದಕ್ಕೂ ಜಗ್ಗದ ಅವರು ಮತ್ತೆ ಉತ್ಸಾಹದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಚಳುವಳಿಯ ಮೆರವಣಿಗೆ, ಪ್ರಭಾತ್‌ಪೇರಿ, ಕರಪತ್ರ ಮುದ್ರಣ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ನಗರ್ ಸಕ್ರಿಯವಾಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರಕುತ್ತಿದ್ದಂತೆ ನಗರ್ ಕಾಂಗ್ರೆಸ್ ಪಕ್ಷದ ಹುದ್ದೆಯನ್ನು ತ್ಯಜಿಸಿ ಸಮಾಜವಾದಿ ಚಿಂತಕರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಆರಂಭಿಸಿದರು. ೧೯೫೧ರಲ್ಲಿ ಸಾಗರ ತಾಲ್ಲೂಕಿನಲ್ಲಿ ಕಾಗೋಡು ಸತ್ಯಾಗ್ರಹ ಆರಂಭವಾದಾಗ ಅದರ ರೂಪುರೇಷಗಳನ್ನು ಸಿದ್ಧಪಡಿಸಿದ ತಂಡದಲ್ಲಿ ನಗರ್ ಕೂಡ ಇದ್ದರು. ಅಪಾರ ಸಿಟ್ಟು ಸೆಡವಿನ ನಗರ್ ಅಧಿಕಾರಿಗಳೊಂದಿಗೆ ಹಲವು ಸಂದರ್ಭಗಳಲ್ಲಿ ನೇರವಾಗಿ ಜಟಾಪಟಿಗೆ ಇಳಿಯುತ್ತಿದ್ದರು. ಅಪ್ಪಟ ಪ್ರಜಾಪ್ರಭುತ್ವವಾದಿಯಾಗಿದ್ದರೂ ಅಧಿಕಾರಿಗಳು ಉದ್ಧಟತನ ತೋರಿದರೆ ಮತ್ತು ಚಳುವಳಿಯ ಕೆಲಸ ಆಗಬೇಕು ಅಂತಾದರೆ ಅನ್ಯಮಾರ್ಗಕ್ಕೂ ಇಳಿಯಲು ಹಿಂಜರಿಯದ ವ್ಯಕ್ತಿತ್ವ ಅವರದ್ದಾಗಿತ್ತು. ಕಾಗೋಡು ಚಳುವಳಿ ಸಂದರ್ಭದಲ್ಲಿ ಚಳುವಳಿಗಾರರಿಗೆ ಕಿರುಕುಳ ನೀಡಿದ ಪೊಲೀಸ್ ಅಧಿಕಾರಿಗಳಿಗೆ ನಗರ್ ತಮ್ಮದೆ ಆದ ಶೈಲಿಯ ಮೂಲಕ ಬುದ್ಧಿ ಕಲಿಸಿದ ಬಗ್ಗೆ ಈ ಭಾಗದಲ್ಲಿ ಹಲವು ರೋಚಕ ಕಥೆಗಳಿವೆ.

ಕಾಗೋಡು ಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಲು ಡಾ. ರಾಮಮನೋಹರ ಲೋಹಿಯಾ ಅವರು ಸಾಗರಕ್ಕೆ ಆಗಮಿಸಿ, ಅಲ್ಲಿನ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಬಂಧಿಸಿದ್ದಾಗ ಅವರ ಜೊತೆ ಬಂಧನಕ್ಕೆ ಒಳಗಾದ ವ್ಯಕ್ತಿಗಳ ಪೈಕಿ ನಗರ್ ಕೂಡ ಒಬ್ಬರು. ಕಾಗೋಡು ಗ್ರಾಮದಲ್ಲಿ ಮೊದಲ ಬಾರಿಗೆ 'ಉಳುವವನೆ ಹೊಲದೊಡೆಯ' ಎಂಬ ಘೋಷಣೆಯೊಂದಿಗೆ ಭೂಮಾಲೀಕರ ಜಮೀನಿಗೆ 'ಅತಿಕ್ರಮ ಪ್ರವೇಶ' ಮಾಡಿ ಬೇಲಿಯನ್ನು ಕಿತ್ತು ಬಂಧನಕ್ಕೊಳಗಾದವರಲ್ಲಿಯೂ ನಗರ್ ಸೇರಿದ್ದರು.

ಕಾಗೋಡು ಚಳುವಳಿಯ ನಂತರವೂ ಸಾಗರದಲ್ಲಿ ನಡೆದ ಹಲವು ಜನಪರ ಚಳುವಳಿಗಳಲ್ಲಿ ನಗರ್ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಹಲವು ಸಮಾಜವಾದಿಗಳಂತೆ ತಮ್ಮ ವೈಯಕ್ತಿಕ ಬದುಕನ್ನು ಕಡೆಗಣಿಸಿ ಸಮಾಜದ ಹಿತವೇ ಮುಖ್ಯ ಎನ್ನುವಂತೆ ನಗರ್ ಕೂಡ ಬದುಕಿದ್ದರು. ಚಳುವಳಿಯ ಸೆಳೆತದ ಕಾರಣಕ್ಕೆ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ತಿಲಾಂಜಲಿ ಇಟ್ಟವರು ನಗರ್.

ಸಾಗರದಲ್ಲಿ ನಡೆದ ಲೆವಿ ಚಳುವಳಿ, ಇತ್ತೀಚಿನ ದಂಡಾವತಿ ಅಣೆಕಟ್ಟು ವಿರೋಧಿ ಹೋರಾಟ, ಶಿಕಾರಿಪುರ ತಾಲ್ಲೂಕು ಈಸೂರಿನ ಭೂ ಹೋರಾಟ ಸೇರಿದಂತೆ ಹತ್ತು ಹಲವು ಚಳುವಳಿಗಳಲ್ಲಿ ನಗರ್ ಪಾಲ್ಗೊಳ್ಳುವಿಕೆ ಇತ್ತು. ಅಂತರಜಾತಿ ವಿವಾಹವಾಗುವುದರ ಜೊತೆಗೆ ಅವರು ಹರಿಜನರ ದೇವಸ್ಥಾನ ಪ್ರವೇಶ, ವೇಶ್ಯೆಯರ ಮದುವೆ ಮೊದಲಾದ ಚಟುವಟಿಕೆಗಳನ್ನು ತಮ್ಮ ಗೆಳೆಯರ ಗುಂಪಿನೊಂದಿಗೆ ನಡೆಸಿದ್ದರು. ನಗರ್‌ರ ಒಳಗೊಬ್ಬ ಅದ್ಭುತ ಸಂಘಟನಕಾರ ಇದ್ದ. ಚಳುವಳಿಗೆ ಸಂಬಂಧಪಟ್ಟಂತೆ ಯಾವುದೆ ಕೆಲಸವನ್ನು ಹಿಡಿದರೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಸದಾ ವ್ಯವಸ್ಥೆಯ ವಿರುದ್ಧ ತಮ್ಮ ಆಕ್ರೋಶವನ್ನು ಯಾವುದೆ ಮುಲಾಜಿಲ್ಲದೆ ವ್ಯಕ್ತಪಡಿಸುವ ಕಾರಣಕ್ಕೆ ಹಲವರ ನಿಷ್ಠೂರ ಕಟ್ಟಿಕೊಂಡಿದ್ದರು

ಸಮಾಜವಾದಿಗಳಿಗೂ ಕಲೆ, ಸಾಹಿತ್ಯ ಸಂಸ್ಕೃತಿಗೂ ಅವಿನಾವಭಾವ ಸಂಬಂಧ ಅದಕ್ಕೆ ತಕ್ಕಂತೆ ನಗರ್ ಕೂಡ ಬಹುಮುಖಿ ಸಾಂಸ್ಕೃತಿಕ ವ್ಯಕ್ತಿತ್ವ ಹೊಂದಿದ್ದವರು. ಸಾಗರದಲ್ಲಿ ಗುರುರಾಜ ಮಿತ್ರಮಂಡಳಿ ಎಂಬ ರಂಗತಂಡವನ್ನು ಅವರು ಸ್ಥಾಪಿಸಿದ್ದರು. ಇದಕ್ಕೂ ಮುನ್ನ ಕಮಲ ಕಲಾಸಂಘ ಎಂಬ ಸಾಂಸ್ಕೃತಿಕ ಸಂಘಟನೆ ಜೊತೆ ಗುರುತಿಸಿಕೊಂಡಿದ್ದರು. ಹಲವು ಕಂಪನಿ ನಾಟಕಗಳನ್ನು ಸಾಗರಕ್ಕೆ ಕರೆಸಿ ತಿಂಗಳುಗಟ್ಟಲೆ ಅವರಿಗೆ ಆಶ್ರಯ ನೀಡುತ್ತಿದ್ದರು. ಆಗಿನ ಕಂಪನಿ ನಾಟಕ ತಂಡಗಳು ರಾಜ್ಯದ ವಿವಿಧೆಡೆ ಪ್ರದರ್ಶನ ನೀಡಿ ನಷ್ಟ ಅನುಭವಿಸಿ ಕಷ್ಟದಲ್ಲಿದ್ದರೆ ಸಾಗರಕ್ಕೆ ಬಂದರೆ ಜೀವನಕ್ಕೆ ತೊಂದರೆ ಇಲ್ಲ ಎಂಬ ಭಾವನೆಯಿಂದ ಇಲ್ಲಿಗೆ ಬಂದು ಮೊಕ್ಕಾಂ ಹೂಡುತ್ತಿದ್ದವಂತೆ. ಈ ವಿದ್ಯಮಾನದ ಹಿಂದೆ ಇದ್ದ ವ್ಯಕ್ತಿಗಳ ಪೈಕಿ ನಗರ್ ಪ್ರಮುಖರು.

ಸಮಾಜವಾದಿಗಳ ಪಾಲಿಗೆ 'ಶಾಪ'ದ ರೂಪದಲ್ಲಿ ಇದ್ದ ವೈಯಕ್ತಿಕ ಬದುಕಿನ ಅಶಿಸ್ತು ನಗರ್ ಅವರಲ್ಲೂ ಇತ್ತು. ಈ ಕಾರಣಕ್ಕೆ ಅವರ ಕುಟುಂಬ ಆರ್ಥಿಕವಾಗಿ ತೀವ್ರ ಸಂಕಷ್ಟ ಎದುರಿಸಬೇಕಾಯಿತು. ಹಲವು ವರ್ಷ 'ಸಾಗರ ಸುದ್ದಿ' ಎಂಬ ಪತ್ರಿಕೆ ನಡೆಸಿದರೂ ಆರ್ಥಿಕವಾಗಿ ಅದು ನಗರ್‌ಗೆ ಆಸರೆಯಾಗಲಿಲ್ಲ. ನಗರ್ ಅವರ ಪತ್ನಿ ಪ್ರೇಮ ರಂಗ ಕಲಾವಿದೆ. ಚಳುವಳಿಕಾರರ ಪತ್ನಿ ಅನುಭವಿಸುವ ಎಲ್ಲಾ ಪಡಿಪಾಟಲುಗಳನ್ನು ಪ್ರೀತಿಯಿಂದಲೆ ಸಹಿಸಿಕೊಂಡ ಸಹನಾಜೀವಿ. ಆದರೆ ಅವರ ಮಕ್ಕಳು ಅಪ್ಪನ ಚಳುವಳಿಯ 'ವ್ಯಾಮೋಹ'ವನ್ನು ಒಪ್ಪಿಕೊಂಡವರಲ್ಲ.

ಆರ್ಥಿಕ ಸಂಕಷ್ಟ ಎಷ್ಟೇ ಇದ್ದರೂ ಯಾರ ಎದುರೂ ಸಹಾಯಕ್ಕಾಗಿ ಕೈಚಾಚಿದವರಲ್ಲ. ತಮ್ಮ ಕೊನೆಗಾಲದಲ್ಲಿ ಹೆಚ್ಚೆಂದರೆ ತೀರ ಆಪ್ತರಿಂದ ಒಂದು ಸಿಗರೇಟು, ದಿನಪತ್ರಿಕೆ ಕೇಳಿ ಪಡೆಯುತ್ತಿದ್ದರು. ರಂಗಭೂಮಿಯಲ್ಲಿನ ಕೆಲಸಕ್ಕಾಗಿ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನಗರ್ ಅವರಿಗೆ ದೊರಕಿದೆ. ಹಾಗೆಂದು ಪ್ರಶಸ್ತಿ, ಸನ್ಮಾನಗಳನ್ನು ಅವರು ಹುಡುಕಿಕೊಂಡು ಹೋದವರಲ್ಲ.

ಕಳೆದ ವರ್ಷ ಕಣ್ಣಿನ ಶಸ್ತ್ರ ಚಿಕಿತ್ಸೆಗೆಂದು ಉತ್ಸಾಹದಿಂದಲೆ ಬೆಂಗಳೂರುನ ಆಸ್ಪತ್ರೆಗೆ ಹೋಗಿದ್ದ ಅವರು ಸಾಗರಕ್ಕೆ ಬಂದದ್ದು ಶವವಾಗಿ. ಸಾರ್ವಜನಕ ವಿಚಾರಗಳ ಬಗ್ಗೆ ಧ್ವನಿ ಎತ್ತಲು ಯಾವತ್ತೂ ಇಲ್ಲದ ಹಿಂಜರಿಕೆ ಕಾಣುತ್ತಿರುವ ಇಂದಿನ ದಿನಗಳಲ್ಲಿ ನಗರ್ ಅವರಂತಹ ವ್ಯಕ್ತಿಗಳ ಗೈರು ಹಾಜರಿ ಸಾಗರದ ಸುತ್ತಮುತ್ತ ಎದ್ದು ಕಾಣುತ್ತದೆ.

**–ಎಂ.ರಾಘವೇಂದ್ರ**

# ಗ್ರಾಮಾಂತರ ಪಿಯುಸಿ ಮಕ್ಕಳು : ಒಂದು ಚಿತ್ರ, ಕೆಲವು ಸಲಹೆಗಳು

–ಮಂಜುಳಾ ಎಂ ರಾಜು

**ತ**ರಗತಿಯಲ್ಲಿ ಹಾಜರಾತಿ ಕರೆದ ಮೇಲೆ ಬಹಳ ದಿನಗಳಿಂದ ಗೈರು ಹಾಜರಾದ ವಿದ್ಯಾರ್ಥಿಯೊಬ್ಬನನ್ನು ಆಮೇಲೆ ಬಂದು ಭೇಟಿ ಆಗುವಂತೆ ಹೇಳಿದೆ. ತರಗತಿ ಮುಗಿದ ನಂತರ ಬಂದು ನನ್ನೆದುರು ನಿಂತ. ಬಾಡಿದ ಮುಖ, ನಿಸ್ತೇಜ ಕಣ್ಣುಗಳು, ಒಣಗಿದ ತುಟಿ– ಒಟ್ಟಾರೆ ಕಡು ಬಡತನ, ಹಸಿವು, ಅನಾರೋಗ್ಯ, ಅಪೌಷ್ಟಿಕತೆ ತೋರುವ ಮುಖ.

ಇದು ನಾನು ಅಧ್ಯಾಪನ ಮಾಡುವ ತಾಲ್ಲೂಕು ಕೇಂದ್ರವೊಂದರ ಸರ್ಕಾರಿ ಪದವಿ ಪುರ್ವ ಕಾಲೇಜಿಗೆ ಹೆಚ್ಚಾಗಿ ಬರುವ ಮಕ್ಕಳ ಸ್ಥಿತಿ. ಸುತ್ತಲಿನ ಗ್ರಾಮೀಣ, ರೈತ, ಕೂಲಿ ಕಾರ್ಮಿಕರ, ನಗರದ ಬಡ ಕುಟುಂಬದಿಂದ ಬರುವ ಅನೇಕರಲ್ಲಿ ಇವರು 'ಕಲಿ–ನಲಿ' ಬದಲು ದುಡಿ–ಕಲಿ ವರ್ಗಕ್ಕೆ ಸೇರಿದ್ದಾರೆ ಎಂದರೂ ಸರಿ. ಕಾಲೇಜು ಅವಧಿ ಮುಗಿಯುತ್ತಿದ್ದಂತೆಯೇ ಅಥವಾ ಅದು ನಡೆಯುವ ಅವಧಿಯಲ್ಲಿಯೇ ಕೆಲಸಕ್ಕೆ ಹೋಗುವ ಒತ್ತಡ. ಪೆಟ್ರೋಲ್ ಬಂಕ್‌ಗಳಲ್ಲಿ, ಬಟ್ಟೆ ಅಂಗಡಿಗಳಲ್ಲಿ, ಶಾಮಿಯಾನ ಹಾಕುವ ಕೆಲಸಗಳಲ್ಲಿ, ಬಾರ್, ಬೆಂಡಿಂಗ್, ಮದುವೆ ಇತ್ಯಾದಿ ಸಮಾರಂಭಗಳಲ್ಲಿ ಅಡಿಗೆ ಮಾಡುವುದು, ಬಡಿಸುವುದು, ಕೇಬಲ್ ಸಂಪರ್ಕ, ಕಬ್ಬು, ಬತ್ತದ ಕಟಾವ್ ಇತ್ಯಾದಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಅದು ಅವರಿಗೆ ಅನಿವಾರ್ಯ ಕೂಡ. ಮನೆಗೆ ಇವರ ದುಡಿಮೆಯ ಹಣ ಬೇಕೇ ಬೇಕು. ಮೊಬೈಲ್, ಸಿನಿಮಾ ಫ್ಯಾಷನ್ ಉಡಿಗೆ ತೊಡಿಗೆಗೆ ಕೊಳ್ಳಲು ಕೂಡ!

ಪ್ರತಿಷ್ಠಿತ ಕಾಲೇಜುಗಳಲ್ಲಿ ಓದಿದ ವಿಜ್ಞಾನದ ವಿದ್ಯಾರ್ಥಿಗಳಿಗೂ ಇಲ್ಲಿಯ ವಿದ್ಯಾರ್ಥಿಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಸ್ವಲ್ಪ ಪ್ರಯತ್ನ ಪಟ್ಟು ೩೫ ರಿಂದ ೪೫ರಷ್ಟು ಅಂಕ ಪಡೆದು ಪಾಸಾಗುವುದಷ್ಟೆ ಬಹಳ ಜನರ ಗುರಿ. ಈ ವಿದ್ಯಾರ್ಥಿಗಳನ್ನು ನೀವೇನಾಗಬೇಕೆಂದು ಕೇಳಿದರೆ ಪೋಲಿಸ್ ಕಾನ್‌ಸ್ಟೆಬಲ್ ಆಗುತ್ತೀನಿ, ಮಿಲಿಟರಿಗೆ ಸೇರಬೇಕು, ಆದಕ್ಕೆ ಪಿಯುಸಿ ಮುಗಿಸಬೇಕು ಅನ್ನುತ್ತಾರೆಯೇ ಹೊರತು ಇದರಾಚೆ ಅವರ ನಿರೀಕ್ಷೆಗಳೆ ಇಲ್ಲ. ಇದು ಅವರ ಮಿತಿಯೋ ಅಥವಾ ನಾವು ಅಧ್ಯಾಪರೆನ್ನಿಸಿಕೊಂಡಿರುವವವರ ವೈಫಲ್ಯವೋ ನನಗೆ ತಿಳಿಯದಾಗಿದೆ. ಇವರಲ್ಲಿ ಸಾಫ್ಟವೇರ್ ಇಂಜನೀಯರ್‌ಗಳಾಗುವ, ಲೆಕ್ಚರರ್, ಲಾಯರ್, ಬ್ಯಾಂಕ್ ಅಧಿಕಾರಿ ಇತ್ಯಾದಿ ಕೆಲಸಗಳ ಕನಸುಗಳು ಇಲ್ಲವೇ ಇಲ್ಲವೆಂದು ಹೇಳಬೇಕು. ಇನ್ನು, ಈ ಎಲ್ಲ ಓದಿನಿಂದ ಆಗಬೇಕಾದ್ದೇನೂ ಇಲ್ಲ, ಹೇಗೋ ದುಡಿದು ಅನ್ನ ಬಟ್ಟೆ ಸಂಪಾದಿಸಬಲ್ಲೆವು ಎಂಬ ಆತ್ಮ ವಿಶ್ವಾಸದ ಮುಖಗಳೂ ಕೆಲವಿವೆ. ಹಾಗೆ ಯಾವುದೇ ಗುರಿಗಳಿಲ್ಲದೆ ನಗರದ ಶೋಕಿಗೆ ಬಲಿಯಾದ ಮಕ್ಕಳೂ ಇವೆ. ತಡವಾಗಿ ಬಂದರೆ, ಬಹಳ ದಿನಗಳಿಂದ ಚಕ್ಕರ್ ಹಾಕಿದ ವಿದ್ಯಾರ್ಥಿಗಳನ್ನು ಪ್ರಶ್ನಿಸಿದರೆ ತಾಯಿಗೆ ಕಾಯಿಲೆ ಎಂದೂ, ಗದ್ದೆಗೆ ನೀರು ಬಿಡಬೇಕಾಗಿತ್ತೆಂದೋ ಹಾಲನ್ನು ಡೈರಿಗೆ ಕೊಟ್ಟು ಬರುವಾಗ ತಡವಾಯಿತೆಂದೋ ಉತ್ತರ ಬರುತ್ತದೆ.

ಇಷ್ಟಲ್ಲದೆ ಇವರ ಗೋಳು ಇನ್ನೂ ಇದೆ. ಒಬ್ಬ ಹುಡುಗನ ತಂದೆ ಕುಡಿದು ಬಂದು ಇವನ ಪುಸ್ತಕದ ಬ್ಯಾಗನ್ನು ಪುಸ್ತಕದ ಸಮೇತ ಬೆಂಕಿಗೆ ಎಸೆದಿದ್ದನಂತೆ. ಮತ್ತೊಬ್ಬ ವಿದ್ಯಾರ್ಥಿಯ ತಂದೆ ತಾಯಿಯರಿಬ್ಬರು ಏಡ್ಸ್ ರೋಗಕ್ಕೆ ಬಲಿಯಾಗಿ ಸಾವನ್ನಪ್ಪಿದ್ದರು. ಅನಾಥನಾದ ಅವನು ಆಗಾಗ ಕಾಲೇಜಿಗೆ ಬರುತ್ತಿದ್ದನಾದರೂ ತರಗತಿಯಲ್ಲಿ ಇದ್ದಕ್ಕಿದ್ದಂತೆ ಕಿರುಚಾಡುವುದು, ಕೂಗುವುದು ಮಾಡುತ್ತಾ ಇತರ ವಿದ್ಯಾರ್ಥಿಗಳಿಗೆ ಗೇಲಿಯ ವಸ್ತುವಾಗಿದ್ದನು. ಹೀಗೆ ಹತ್ತು ಹಲವು ಸಾಮಾಜಿಕ ಸಮಸ್ಯೆಯ ಮುಖಗಳು ಗೋಚರಿಸುತ್ತವೆ. ಸಮಾಜದ ಸಕಲ ಸಮಸ್ಯೆಗಳೂ ಇಲ್ಲಿ ಪ್ರತಿಬಿಂಬಿತವಾಗುತ್ತಿವೆ. ಇಂತಹ ಸಮಯಗಳಲ್ಲೆಲ್ಲೆ ನಗರದ ಶ್ರೀಮಂತ ಮಧ್ಯಮ ವರ್ಗದ ಪೋಷಕರು ತಮ್ಮ ಮಕ್ಕಳನ್ನು ಜೋಪಾನ ಮಾಡುವ ಚಿತ್ರ ನನ್ನ ಕಣ್ಮುಂದೆ ಬರುತ್ತದೆ.



ಪಿಯುಸಿ ವಿಜ್ಞಾನಕ್ಕೆ ಸೇರಿದ ಮಕ್ಕಳಿಗೆ ತಂದೆ ತಾಯಿಗಳು ಟ್ಯೂಷನ್ನಿಗೆ ಕಾಲೇಜಿಗೆ ಕರೆದುಕೊಂಡು ಹೋಗುವ ಬರುವ ಅವರ ಅಗತ್ಯಗಳನ್ನು ಪೂರೈಸುವ ಅವರಿಗೇನೂ ತೊಂದರೆ ಆಗದಂತೆ ಕಾಯುವ ಅವರಿಗೂ ನಮ್ಮ ಈ ಮಕ್ಕಳಿಗೂ ಹೋಲಿಕೆ ಸಾಧ್ಯವೇ? ಈ ಎಲ್ಲ ರೀತಿಯ ಕಾರ್ಪಾಣ್ಯಗಳೆದಿರು ಕನ್ನಡ ಭಾಷಾ ಉಪನ್ಯಾಸಕಗಳಾಗಿ ನಾನು ಯಾವ ಸಾಹಿತ್ಯದ ಸೊಗಸನ್ನು ಬೋಧಿಸಲಿ? ಯಾವ ಮೌಲ್ಯ ಆದರ್ಶಗಳನ್ನು ತಿಳಿಸಲಿ ಎಂದು ತಡವರಿಸುತ್ತೇನೆ. “ಮೂಡಣ ಮನೆಯ ಮುತ್ತಿನ ನೀರಿನ ಎರಕಾವಾ ಹೊಯ್ದಾ” ಕವನಕ್ಕಿಂತ ಅವರ ಕಿವಿಗಳು ”ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು ನನ್ನ ಜನಗಳು, ಒದೆಸಿಕೊಂಡು ಒರಗುತಾರೆ ನನ್ನ ಜನಗಳು” ಎಂಬ ಸಾಲಿಗೆ ಚುರುಕಾಗುತ್ತವೆ....

ಈ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಜಾರಿಗೊಳಿಸಿದ ಕೇಂದ್ರೀಯ ಪಠ್ಯ ಪದ್ಧತಿಯಾಗಲಿ, ಅಲ್ಲಿನ ಹಾಜರಾತಿ, ನಿಯಮಿತ ಟೆಸ್ಟುಗಳಿಗೆ ಇರುವ ಮೌಲ್ಯವಾಗಲಿ ಅರಿವಾಗುವುದು ಹೇಗೆ? ಇವರನ್ನೂ ನಗರದ ಮಧ್ಯಮ ವರ್ಗದ ಪ್ರತಿಷ್ಠಿತ ಕಾಲೇಜುಗಳ ಮಕ್ಕಳನ್ನು ಒಂದೇ ಪದ್ಧತಿಯಲ್ಲಿ ಅಳವಡಿಸಿ ಅಳೆಯುವುದು ಸೂಕ್ತವೇ? ಶಿಕ್ಷಣ ಹಕ್ಕು ಕಾಯ್ದೆಯ ಅರ್ಥವೇನು? ಎಂದೆಲ್ಲಾ ನನ್ನ ಮನಸ್ಸು ಚಿಂತಿಸಿ ತಳಮಳ–ಸಂಕಟಕ್ಕೀಡಾಗುತ್ತದೆ. ಈ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ ಹುಡುಕುತ್ತಾ ಹೋದರೆ, ಹಿಂದೆಲ್ಲಾ ಎಸ್.ಎಸ್.ಎಲ್.ಸಿ.ಗೆ ಓದು ನಿಲ್ಲಿಸುತ್ತಿದ್ದ ಮಕ್ಕಳು ಇಂದು ಅನೇಕ ಕೆಲಸಕ್ಕೆ ಪಿಯುಸಿ ಅವಶ್ಯಕವಾಗಿರುವುದರಿಂದ ಆಸಕ್ತಿ ಇಲ್ಲದ್ದಿದ್ದರೂ ಅನಿವಾರ್ಯವಾಗಿ ಕಾಲೇಜಿಗೆ ಸೇರಿರುವುದು ಗೊತ್ತಾಗುತ್ತದೆ. ಜೊತೆಗೆ,. ಪಠ್ಯ ಕ್ರಮದಲ್ಲಿ, ಬೋಧನೆಯಲ್ಲಿ ಹೊಸತನ ಸೃಜನಶೀಲತೆ ಮಾಯವಾಗಿರುವುದು. ನೀರಸ ಪಠ್ಯಗಳು ಅವರನ್ನು ಆಕರ್ಷಿಸುತ್ತಿಲ್ಲ ಎಂಬುದೂ.

ಈ ಎಲ್ಲಾ ಸಮಸ್ಯೆಗಳನ್ನೂ ಸುಧಾರಿಸಲು ಮೊದಲಿಗೆ ಹೈಸ್ಕೂಲಿನ ತನಕ ಮಾತ್ರ ಇರುವ ಬಿಸಿಯೂಟದ ಯೋಜನೆಯನ್ನು ಈ ಹಂತಕ್ಕೂ ವಿಸ್ತರಿಸಿದರೆ ಒಳ್ಳೆಯದನೋ ಅನ್ನಿಸುತ್ತದೆ. ಜೊತೆಗೆ ಪಠ್ಯಕ್ರಮ ಸುಧಾರಣೆಯಾಗಬೇಕು ಮತ್ತು ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಮಕ್ಕಳು ಬರುವ ಕಾಲೇಜುಗಳಲ್ಲಾದರೂ ಆಪ್ತ ಸಲಹೆಯ ಸೌಲಭ್ಯದ ಅವಶ್ಯಕತೆಯೂ ಇದೆ. ಈ ನಿಟ್ಟಿನಲ್ಲಿ ಸಂಬಂಧಿಸಿದವರು, ಶಿಕ್ಷಣ ತಜ್ಞರೂ ಕಾರ್ಯ ಪ್ರವೃತ್ತವಾಗುವ ಜರೂರು ಇದೆ. *

**ಪ್ರಿಯ ಓದುಗರೇ,**

**ಪತ್ರಿಕೆಗೆ ಚಂದಾ ಅಥವಾ ಜಾಹೀರಾತು ನೀಡಬಯಸುವವರು ಚಂದಾ ಮೊತ್ತ/ಜಾಹೀರಾತು ಶುಲ್ಕವನ್ನು ಈಗ ಶಿವಮೊಗ್ಗ ವಿನೋಬ ನಗರದ ಸ್ಟೇಟ್ ಬ್ಯಾಂಕ್ ಮೈಸೂರ್ ಶಾಖೆಯಲ್ಲಿ 'ಸಂಪಾದಕರು: ಹೊಸ ಮನುಷ್ಯ' ಹೆಸರಿನಲ್ಲಿ ತೆರೆಯಲಾಗಿರುವ ಚಾಲ್ತಿ ಖಾತೆ (ಕರೆಂಟ್ ಅಕೌಂಟ್) ಸಂಖ್ಯೆ: ೬೪೧೧೦೩೫೮೩೦ ಇಲ್ಲಿಗೆ ಹಣ ವರ್ಗಾವಣೆ ಮಾಡಿ ಒಂದು ಕಾರ್ಡ್ ಹಾಕಿರಿ ಅಥವಾ ದೂರವಾಣಿ ಸಂದೇಶ ಕಳಿಸಿ. ಎಂ.ಓ./ಕ್ರಾಸ್ ಮಾಡಿದ ಡಿ.ಡಿ./ಚೆಕ್(ಕಮೀಶನ್ ಸೇರಿಸಿ) ಪತ್ರಿಕೆಯ ಮುಖಪುಟದಲ್ಲಿರುವ ವಿಳಾಸಕ್ಕೂ ಹಣ ಕಳಿಸಬಹುದು.**–ಸಂಪಾದಕ

## ಪ್ರೊ. ಬಿ. ಕೃಷ್ಣಪ್ಪ ನೆನೆಪಿನ ಮಾಲೆ – ೩

–ಇಂದಿರಾ ಬಿ. ಕೃಷ್ಣಪ್ಪ

# ಮದುವೆ ನಂತರ ಸಮಾಜವಾದಿ ಶಿಕ್ಷಣ!



**ನಾ**ವು ಮದುವೆಯಾಗಿ ಒಂದು ತಿಂಗಳಾಗಿತ್ತು. ಒಂದು ಔತಣ ಕೂಟ ಇಟ್ಟುಕೊಳ್ಳೋಣವೆಂದು ಗೆಳೆಯರೆಲ್ಲಾ ನಿರ್ಧರಿಸಿದರು. ಈಗಾಗಲೇ ಆಗಿರುವ ನಮ್ಮ ಮದುವೆ ಸಾರ್ವತ್ರೀಕರಣ–ಗೊಳಿಸಿದಂತಾಗುತ್ತದೆ ಎಂಬುದು ಅವರೆಲ್ಲರ ಸಮಯೋಚಿತವಾದ ಸಲಹೆಯಾಗಿತ್ತು. ದಿನಾಂಕ ೧೫.೬.೭೪ರಂದು ಒಂದು ಸಂತೋಷ ಕೂಟವನ್ನು ಏರ್ಪಡಿಸಲು ಆಮಂತ್ರಣ ಪತ್ರವನ್ನು ಮುದ್ರಿಸಲಾಯಿತು. ಭದ್ರಾವತಿ ನ್ಯೂಟೌನ್‌ನಲ್ಲಿ ಖಾಲಿ ಇದ್ದ ವಸತಿಗೃಹವೊಂದರಲ್ಲಿ (ನಮ್ಮ ಮನೆ ಹತ್ತಿರದಲ್ಲೇ ಇತ್ತು) ಸಂತೋಷ ಕೂಟ ನಡೆಸಲಾಯಿತು. ಆತ್ಮೀಯರು, ಗೆಳೆಯರು ಹಾಗೂ ಕುತೂಹಲಿಗಳು ಎಲ್ಲಾ ಬಂದಿದ್ದರು. ಅಲ್ಲಿ ಕೃಷ್ಣಪ್ಪ ಎಲ್ಲರನ್ನೂ ಸ್ವಾಗತಿಸಿದರು. ಉಪನ್ಯಾಸಕರಾದ ಕುಮಾರಸ್ವಾಮಿ, ಶಿವಲಿಂಗಪ್ಪ, ಶಿಷ್ಯ–ಗೆಳೆಯರಾದ ಮಹಾರುದ್ರ ಮತ್ತು ಸಮಾಜವಾದಿ ಗೆಳೆಯರು ಸಂದರ್ಭೋಚಿತ ಮಾತುಗಳನ್ನಾಡಿದರು.

ಆ ಸಂದರ್ಭದಲ್ಲಿ ಅಲ್ಲಲ್ಲಿ ಏನೇನೋ ಗುಸುಗುಸು ಮಾತನಾಡುವಂತೆ ಕಾಣಿಸಿತು. ಬಂದವರೆಲ್ಲ ನಮಗೆ ಕೈಕುಲುಕಿ ಹಾರೈಸುತ್ತಿದ್ದರು. ಆತುರಾತುರದಲ್ಲಿ ಸಿಹಿ ಹಂಚಿಕೆ, ಸರಬರ ಓಡಾಟ, ತುರಾತುರಿಯಲ್ಲಿ ವಂದನಾರ್ಪಣೆಯಾಗಿಯೇ ಬಿಟ್ಟಿತು. ಎಲ್ಲರೂ ಸೇರಿ ತುರ್ತಾಗಿ ನನ್ನನ್ನು ಮನೆಗೆ ಕಳುಹಿಸಿಯೇ ಬಿಟ್ಟರು. ನನಗೆ ಆ ಹೊತ್ತಿನಲ್ಲಿ ಏನಾಗುತ್ತಿದೆ ಎಂದು ತಿಳಿಯಲೇ ಇಲ್ಲ. ಸ್ವಲ್ಪ ಹೊತ್ತಿಗೆ ಕೃಷ್ಣಪ್ಪ ಸಂಗಾತಿಗಳೊಂದಿಗೆ ವಾಪಸಾಗಿದ್ದರು. ನಂತರದಲ್ಲಿ ನಾನು, ಈ ಗಡಿಬಿಡಿಗೆ ಕಾರಣವೇನೆಂದು ಕೇಳಿದ್ದೆ. ನಮ್ಮ ತಂದೆಯ ಮನೆಯಿಂದ ನನ್ನನ್ನು ಇಲ್ಲಿಂದು ಕರೆದುಕೊಂಡು ಹೋಗಲು ಕೆಲವರು ಬರುತ್ತಿದ್ದಾರೆಂದೂ ಸುದ್ದಿ ಬಂದ ಕಾರಣ ಗಲಾಟೆಗೆ ಅವಕಾಶ ಕೊಡಬಾರದೆಂದು, ಆತುರಾತರವಾಗಿ ಕಾರ್ಯಕ್ರಮ ಮುಗಿಸಬೇಕಾಯಿತೆಂದು ಕೃಷ್ಣಪ್ಪ ತಿಳಿಸಿದರು. ಹೀಗೆ ಗೊಂದಲದಲ್ಲಿ ಸಂತೋಷ ಕೂಟ ಮುಕ್ತಾಯವಾಗಿತ್ತು.

ಅದು ೧೯೭೪ – ೭೫ನೇ ಸಾಲು. ಕೇಂದ್ರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿತ್ತು. ಆ ಸಂದರ್ಭದಲ್ಲಿ, ಸಮಾಜವಾದಿ ಯುವಜನ ಸಭಾದ ರಾಜ್ಯ ಸಮಿತಿ, ಸರ್ಕಾರಗಳು ಪುರೋಯಿತಶಾಹೊಯನ್ನು ಪೋಷಿಸುತ್ತಿವೆ. ಪ್ರಸಾರ ಮಾಧ್ಯಮವನ್ನು ಸಂಸ್ಕೃತ ಭೂಯಿಷ್ಠಗೊಳಿಸಲು ಹೊರಟಿವೆ. ಪ್ರಬಲ ಸುದ್ದಿ ಮಾಧ್ಯಮವಾದ ಆಕಾಶವಾಣಿಯಿಂದ ಬೆಳಿಗ್ಗೆ ೬.೫೫ ಗಂಟೆಗೆ ಹಾಗೂ ಸಂಜೆ ಸಂಸ್ಕೃತದಲ್ಲಿ ವಾರ್ತೆಗಳನ್ನು ಪ್ರಸಾರ ಮಾಡುತ್ತಿರುವುದರ ವಿರುದ್ಧ ಎಲ್ಲಾ ಆಕಾಶವಾಣಿ ಕೇಂದ್ರಗಳ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕೆಂದು ಕರೆ ನೀಡಿತ್ತು. ಅದರಂತೆ ಭದ್ರಾವತಿಯ ಕಾರ್ಯದರ್ಶಿಯಾಗಿದ್ದ ಕೃಷ್ಣಪ್ಪನವರ ನೇತೃತ್ವದಲ್ಲಿ ಆಕಾಶವಾಣಿಯ ಮುಂದೆ ಮೂರು ದಿನಗಳ ಕಾಲ ಪ್ರತಿಭಟನೆಯನ್ನು ಯಶಸ್ವಿಯಾಗಿ ನಡೆಸಿದ್ದರು.

ಯುವಜನ ಸಭಾದ ಕಾರ್ಯಾಲಯವನ್ನು ಭದ್ರಾವತಿಯ ಬಿ.ಹೆಚ್. ರಸ್ತೆಯಲ್ಲಿನ ಮಾರುಕಟ್ಟೆಯ ಒಂದನೇ ಮಹಡಿಯನ್ನು ಖ್ಯಾತ ವಕೀಲರಾಗಿದ್ದ ಸಾಲೇರ ಸಿದ್ದಪ್ಪನವರು ಸಮಿತಿಯ ಕಾರ್ಯ ಚಟುವಟಿಕೆಗಳಿಗಾಗಿ ಬಿಟ್ಟುಕೊಟ್ಟಿದ್ದರು. (ಸಮಾಜವಾದಿ ಹಿನ್ನೆಲೆಯ ಸಾಲೇರ ಸಿದ್ದಪ್ಪನವರೇ ಮುಂದೆ ಜನತಾಪಕ್ಷದಿಂದ ಎಂಎಲ್ಎ ಆಗಿ ಆಯ್ಕೆಯಾದರು.) ಅಲ್ಲಿಗೆ ಕೃಷ್ಣಪ್ಪನವರು ಪ್ರತಿದಿನ ಸಂಜೆ ಹಾಗೂ ಭಾನುವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ಹೋಗುತ್ತಿದ್ದರು. ಅಲ್ಲಿ ಗೆಳೆಯರೆಲ್ಲಾ ಸೇರಿ ಪ್ರಸ್ತುತ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳು, ಗಾಂಧಿ–ಲೋಹಿಯಾ–ಅಂಬೇಡ್ಕರ್ ಚಿಂತನೆಗಳು, ಕೇಂದ್ರ ಸಮಿತಿಯ ನಿರ್ಣಯಗಳನ್ನು ಕುರಿತು ಚರ್ಚೆ–ಸಂವಾದಗಳನ್ನು ನಡೆಸುತ್ತಿದ್ದರು.



**ಸುಂದರೇಶ್, ಕೋಟಿ ಮುಂತಾದ ಸಮಾಜವಾದಿ ಗೆಳೆಯರೊಂದಿಗೆ**

ಇದರೊಂದಿಗೆ ಮನೆಯಲ್ಲಿ ಜಾತಿಮತಗಳ ನಿರ್ಮೂಲನ, ಕಂದಾಚಾರ–ಗೊಡ್ಡು ಮೂಢನಂಬಿಕೆಗಳ ವಿರುದ್ಧ ಬಂಡಾಯ, ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ, ಸಮ ಸಮಾಜ ರಚನೆಯ ಅನೇಕ ಸಿದ್ಧಾಂತಗಳ ಕುರಿತಾದ ಹೊತ್ತಿಗೆಗಳನ್ನು ಕ್ರಷ್ಣಪ್ಪ ತಾನೂ ಓದುತ್ತಾ, ನನಗೂ ಓದಲು ತಿಳಿಸುತ್ತಿದ್ದರು. ಅನೇಕ ವೈಚಾರಿಕ ವಿಚಾರಗಳತ್ತ ನನ್ನ ಗಮನ ಸೆಳೆಯುತ್ತಿದ್ದರು. ಅವರು ಈಗಾಗಲೇ ಬರೆದಿದ್ದ 'ಟಾಗೂರ್ ವಿಚಾರವಾದ' ಪುಸ್ತಕವನ್ನು ಪೂರ್ಣಚಂದ್ರ ತೇಜಸ್ವಿಯವರು ಬಿಡುಗಡೆ ಮಾಡಿದ ವಿಷಯ ಹೇಳಿ, ಅದನ್ನೂ ಓದಲು ಕೊಟ್ಟಿದ್ದರು. ಅದರೊಂದಿಗೆ 'ಚಿಂತನಾ' ಎಂಬ ಪುಸ್ತಕ, ಮೈಸೂರಿನ ವೆಂಕಣ್ಣಯ್ಯ ಸ್ಮಾರಕ ಮಾಲೆಯವರು ಪ್ರಕಟಿಸಿರುವುದನ್ನು, "ನನ್ನ ಸುಖ ದುಃಖದ ಪಾಲುದಾರಳಾದ ನನ್ನ ಸಹಧರ್ಮಿಣಿ ಇಂದಿರೆಗೆ" ಅರ್ಪಿಸಿರುವುದಾಗಿ ನನ್ನೊಂದಿಗೆ ಹೇಳಿದ್ದರು.

ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ೧೯೭೪ರಲ್ಲಿ ಮೈಸೂರಿನಲ್ಲಿ ಉದ್ಘಾಟನೆಯಾದ ಸಂದರ್ಭದಲ್ಲಿ ಶ್ರೀ ಕುವೆಂಪುರವರು ಮಾಡಿದ ಉದ್ಘಾಟನಾ ಭಾಷಣದ ಧ್ವನಿಮುದ್ರಿಕೆಯನ್ನು ಕೃಷ್ಣಪ್ಪನವರು ಮಾಡಿಕೊಂಡಿದ್ದರು. ಅದನ್ನು ಹಲವಾರು ಬಾರಿ ಹಾಕಿ ನನಗೆ ಕೇಳಿಸುತ್ತಿದ್ದರು. ಕರ್ನಾಟಕದಲ್ಲಿ ಆಗ ಸಮಾಜವಾದಿ ಚಳುವಳಿಯ ನೇತೃತ್ವ ವಹಿಸಿದ್ದ ಪ್ರೊ. ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ಶಿವಮೊಗ್ಗಾದವರಾದ ಕಡಿದಾಳ ಶಾಮಣ್ಣ, ಎನ್.ಡಿ. ಸುಂದರೇಶ್‌ರವರ ಪರಿಚಯ ಕೃಷ್ಣಪ್ಪನವರ ಮಾತುಗಳಿಂದಲೇ ನನಗಾಗಿತ್ತು. ಆಗಿನ ಸಾಹಿತ್ಯ ಪತ್ರಿಕೆಗಳಾಗಿದ್ದ ಗೋಪಾಲಕೃಷ್ಣ ಅಡಿಗರ 'ಸಾಕ್ಷಿ', ಚಂದ್ರಶೇಖರ ಪಾಟೀಲರ 'ಸಂಕ್ರಮಣ' ಹಾಗೂ ಆಂಗ್ಲ ಭಾಷೆಯ ಸಮಾಜವಾದಿ ಪತ್ರಿಕೆ 'ಮ್ಯಾನ್‌ಕೈಂಡ್'ಗಳನ್ನು ಅವರು ತರಿಸುತ್ತಿದ್ದರು. 'ಸಂಕ್ರಮಣ'ದ ಒಂದು ವಿಶೇಷ ಸಂಚಿಕೆಯೊಂದರಲ್ಲಿ ಕುವೆಂಪುರವರ ಭಾಷಣ ಹಾಗೂ ಒಕ್ಕೂಟದ ಸಂಪೂರ್ಣ ಕಾರ್ಯಕ್ರಮದ ವಿವರವನ್ನು ಪ್ರಕಟಿಸಿದ್ದರು. ಕ್ರಷ್ಣಪ್ಪ ಅವುಗಳನ್ನು ನನಗೆ ಹೇಳುತ್ತಾ ಬರಹಗಾರರ – ಕಲಾವಿದರ ಒಕ್ಕೂಟದ ಸಂಪೂರ್ಣ ಚಿತ್ರಣವನ್ನು ನೀಡಿದರು.

ನಾನು, ಕೃಷ್ಣಪ್ಪನವರನ್ನು ಮದುವೆಯಾಗುವ ಪೂರ್ವದಲ್ಲಿ, ಆಗಲೇ ಅಂತರ್ಜಾತಿ ವಿವಾಹಿತರಾಗಿ ಸಾಹಿತ್ಯ ದಿಗ್ಗಜರೆನಿಸಿದ್ದ ' ಶಿವರಾಮ ಕಾರಂತರು ಮತ್ತು ಉದಯೋನ್ಮುಖ ಸಾಹಿತಿಗಳಾಗಿದ್ದ ಅನಂತಮೂರ್ತಿಯವರನ್ನು ನಾನು ನಮ್ಮ ಜಾತ್ಯತೀತ ಮದುವೆಯ ಬಗ್ಗೆ

ಸಲಹೆಗಳನ್ನು, ಅಭಿಪ್ರಾಯಗಳನ್ನು ಪತ್ರ ಮುಖೇನ ಕೇಳಿದ್ದ ವಿಚಾರ ಹಾಗೂ ಅವರಿಂದ ಬಂದಿದ್ದ ಪತ್ರಗಳನ್ನು ಕೃಷ್ಣಪ್ಪನವರಿಗೆ ತೋರಿಸಿದೆ. ಶಿವರಾಮ ಕಾರಂತರು ೧೯೭೩ರ ಜುಲೈ ೯ರ ತಮ್ಮ ಪತ್ರದಲ್ಲಿ–

**ನಾನು ಅಂತರ್ಜಾತಿ ವಿವಾಹದ ಬಗ್ಗೆ ಮೆಚ್ಚುಗೆ, ಸಹಾನುಭೂತಿ ಉಳ್ಳವನೇ.**

**ಉಳಿದ ಮಾತು: ಅದಕ್ಕಾಗಿಯೇ ಯಾರೂ ಲಗ್ನವಾಗಬೇಕಿಲ್ಲ. ಗಂಡು ಹೆಣ್ಣು ಕೂಡಿ ನಡೆಯುವುದು, ವಿವಾಹವಾಗುವುದು ಸಂಸಾರ ಮಾಡಲು. ಅದರ ಬಗ್ಗೆ ಹಿತವಾದ ಮನೋಭಾವ ಇದ್ದು ಒಟ್ಟಿಗೆ ಬಾಳುವ ಹಠ, ಸಾಮರ್ಥ್ಯ ಇದ್ದರೆ ಸರಿ! ಮನಸ್ಸಿನ ಬೆಸುಗೆ ಮುಖ್ಯ.**

**ಇನ್ನು ಅದರಿಂದ ಸಮಜಸೇವೆ ಮಡುವ ಇರಾದೆ ಬೇಡ! ಸಮಾಜಸೇವೆ ಮಾಡಲು ಮದುವೆ ಅವಶ್ಯವಲ್ಲ. ಅವರವರ ಬದುಕನ್ನು ಎದುರಿಸುವಾಗ ಸಮಾಜ ಸೇವೆಯ ಹಂಬಲ ಬಲು ಬೇಗ ಕಣ್ಮರೆಯಾಗಲೂಬಹುದು. ಸಮಾಜ ಸದ್ಯ ಇಂತಹ ಮದುವೆಯನ್ನು ಮೆಚ್ಚಲಾರದು. ಸಮಾಜ ನಿಮ್ಮನ್ನು ದೂರ ಸರಿಸಬಾರದೆಂತಿಲ್ಲ...**

ಮುಂತಾಗಿ ಬರೆದು ಸಲಹೆ, ಮಾರ್ಗದರ್ಶನ, ಎಚ್ಚರಿಕೆ ನೀಡಿದ್ದರು . ಅನಂತಮೂರ್ತಿಯವರು ತಮ್ಮ ಪತ್ರದಲ್ಲಿ,

**ನಿಮ್ಮ ಧೈರ್ಯ ಉತ್ಸಾಹಗಳನ್ನು ಮಮಮವನಾನು ಗೌರವದಿಂದ ಮೆಚ್ಚುತ್ತೇನೆ ಹಾಗೂ ನಿಮ್ಮಿಬ್ಬರ ಜೀವನ ಅರ್ಥಪೂರ್ಣವಾಗಲಿ ಎಂದು ಆಶಿಸುತ್ತೇನೆ**

ಎಂದು ಹಾರೈಸಿದ್ದರು.

ನಾವು ಮದುವೆಯಾದ ವೇಳೆ ಕಾಲೇಜಿಗೆ ಬೇಸಿಗೆ ರಜವಿದ್ದಿತುತು. ನಮ್ಮ ಮದುವೆಯ ಬಗೆಗೆ ಕಾಲೇಜು, ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಹ ಉಪನ್ಯಾಸಕರುಗಳ ಅಭಿಪ್ರಾಯ, ಭಿನ್ನಾಭಿಪ್ರಾಯಗಳ ಯಾವ ವಿಚಾರಗಳು ರಜಾ ವೇಳೆಯಲ್ಲಿ ತಿಳಿದು ಬರಲಿಲ್ಲ. ನಮ್ಮ ಬಗ್ಗೆ ಕೆಲವು ಹುಸಿ ಸುದ್ದಿಗಳು, ಕಾಗೆ–ಗುಬ್ಬಕ್ಕನ ಕಥೆಗಳು ಸುತ್ತೆಲ್ಲಾ ಶರವೇಗದಲ್ಲಿ ಹರಿದಾಡಿ, ನಮ್ಮನ್ನೂ ತಲುಪುತ್ತಿದ್ದವು. "ಕೃಷ್ಣಪ್ಪ ಹೆಂಡತಿಗೆ ಹೊಡೆಯುತ್ತಾನೆ, ಮಾಂಸ ತಿನ್ನು ಅಂತ ಜುಲ್ಮೆ ಮಾಡ್ತಾನೆ" ಎಂಬ ಗಾಳಿ ಸುದ್ದಿಗಳು ಬಂದಾಗ, ಅವುಗಳನ್ನು ಆಸ್ವಾದಿಸುತ್ತಲೇ ನಾವು ಸಂತೋಷದಿಂದ ಊಟ ಮಾಡುತ್ತಿದ್ದೆವು. ಅದಕ್ಕಾಗಿ ಕೃಷ್ಣಪ್ಪ ಎಂದೂ ವ್ಯಗ್ರರಾದವರಲ್ಲ. "ಗಾಳಿಯಲ್ಲಿ ಬಂದಿದ್ದು, ಹಾಗೆಯೇ ಗಾಳಿಯಲ್ಲಿ ತೂರಿಕೊಂಡು ಹೋಗುತ್ತೆ, ನಮ್ಮ ಮಾರ್ಗ ನಿಚ್ಚಳ" ಎಂದು ಹೇಳುತ್ತಿದ್ದರು. ಅಲ್ಲೇ ನಮ್ಮೊಂದಿಗಿದ್ದ ಅವರ ಶಿಷ್ಯ ಚನ್ನಿಗರಾಮಯ್ಯನನ್ನು ಕರೆದು "ಅವಳು ನಾಳೆ ಪೂರಿ–ಸಾಗು ಮಾಡ್ತಾಳಂತೆ, ತರಕಾರಿ ತಂದುಕೊಡು ಎಂದು ಹೇಳ್ತಾ ಇದ್ರು.

ಕೃಷ್ಣಪ್ಪ ಕೆಲಸ ಮಾಡುತ್ತಿದ್ದ (ನಾನೂ ಓದಿದ) ಭದ್ರಾ ಕಾಲೇಜು, ಖಾಸಗಿ ಕಾಲೇಜಾಗಿದ್ದರಿಂದ ಮೂರು ತಿಂಗಳಿಗೊ, ಆರು ತಿಂಗಳಿಗೊ ಒಮ್ಮೆ ಸಂಬಳ ಬರುತ್ತಿತ್ತು. ಬೇಸಿಗೆಯ ರಜಾ ಅವಧಿಯಲ್ಲಿ ವೇತನ ನಿಜಕ್ಕೂ ಇರುತ್ತಿರಲಿಲ್ಲ. ಖಾಲಿ ಜೇಬಿನ ವಿಚಾರವನ್ನು ಅವರು ನನ್ನ ಮುಂದೆ ಎಂದೂ ಎತ್ತಿರಲಿಲ್ಲ. ಆದರೆ ಮನೆಯ ಖರ್ಚುವೆಚ್ಚಗಳು ಬಲು ಹಿಡಿತದಲ್ಲಿ ಸಾಗುವಾಗ ಒಮ್ಮೊಮ್ಮೆ ನನಗೆ ಅದರ ಬಿಸಿ ತಟ್ಟುತ್ತಿತ್ತು. ನಾನು ತಂದೆ ಮನೆ ಬಿಟ್ಟು ಬಂದಾಗ ಉಟ್ಟ ಒಂದು ಸೀರೆ, ಕೃಷ್ಣಪ್ಪ ತಂದ ಮೂರು ಸೀರೆಗಳೇ ನನ್ನ ಮನೆ ಒಳ ಹಾಗೂ ಹೊರಗಿನ ಪ್ರಪಂಚವನ್ನು ಸುತ್ತಾಡಿಸಿತ್ತು.

ಅತಿಥಿಗಳಿಗೆ ಕೊಟ್ಟ ನೀರಿನ ಲೋಟವನ್ನು ಅವರು ಕುಡಿದ ನಂತರ ಅದನ್ನೇ ಕಾಫಿ ಹಾಕಿಕೊಡಬೇಕಾದ ಸ್ಥಿತಿ. ಆದರೆ ಇದ್ಯಾವುದೂ ನಮ್ಮನ್ನು ದೊಡ್ಡ ಸಮಸ್ಯೆಯಾಗಿ ಕಾಡಿದ್ದೇ ಇಲ್ಲ. ಕೃಷ್ಣಪ್ಪ ಹೇಳುತ್ತಿದ್ದ "ಜೀವನದ ಸುಖ ದುಃಖಗಳನ್ನು ಸಮಾನವಾಗಿ ಹಂಚಿಕೊಳ್ಳೋಣ. ಹೊಟ್ಟೆಗಿಲ್ಲದಿದ್ದರೆ, ಒಟ್ಟಿಗೇ ಹೋರಾಡಿ ಸಾಯೋಣ" ಎಂಬ ಮಾತು, ಈಗಲೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. ಇದೇ ಸಂದರ್ಭದಲ್ಲಿ ಇವರ ತಂದೆಯ ಮನೆ ಹರಿಹರಕ್ಕೆ ಬರಬೇಕೆಂದು ಕರೆ ಬಂದಿತು. ಆಗ ಇವರು ಎಲ್ಲಿಂದ ಸಾಲ ತಂದರೋ ಗೊತ್ತಿಲ್ಲ, ಊರಿಗೆ ಹೊರಟೆವು.

**(ಮುಂದುವರೆಯುವುದು)**

# ಇದು ಭಾರತ! ಇದು ಭಾರತ!!

೨೦೦೪ರಲ್ಲಿ ನಮ್ಮ ಸರ್ಕಾರ ದಿನವೊಂದಕ್ಕೆ ೨೦೦ ಕೋಟಿ ರೂಪಾಯಿಗಳ ಸಾಲ ಮಾಡುತ್ತಿದ್ದರ; ಈಗ ೧೮೦೦ ಕೋಟಿ ರೂಪಾಯಿಗಳ ಸಾಲ ಮಾಡುವ ಸ್ಥಿತಿ ತಲುಪಿದೆ.

ಈಗ ಪ್ರತಿ ಭಾರತೀಯನ(ಮಕ್ಕಳೂ, ಮುದುಕರೂ ಸೇರಿದಂತೆ) ತಲೆ ಮೇಲೂ ೨೨,೦೦೦ ರೂಪಾಯಿಗಳ ಸಾಲವಿದೆ.

ಈ ದೇಶದಲ್ಲಿ ಪ್ರತಿ ೨೨ ನಿಮಿಷಕ್ಕೆ ಒಂದಲ್ಲ ಒಂದು ಕಡೆ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿರುತ್ತದೆ.

ಯೂನಿಸೆಫ್‌ನ ೨೦೦೯ರ 'ಜಗತ್ತಿನ ಮಕ್ಕಳ ಸ್ಥಿತಿಗತಿ' ವರದಿಯ ಪ್ರಕಾರ ಶೇ. ೪೭ರಷ್ಟು ಭಾರತೀಯ ಹೆಣ್ಣುಮಕ್ಕಳ ವಿವಾಹ, ಕಾನೂನಿಗೆ ವಿರುದ್ಧವಾಗಿ ೧೮ ವರ್ಷದೊಳಗೇ ನಡೆಯುತ್ತಿದೆ. ಇದರಲ್ಲಿ ಶೇ. ೫೬ ರಷ್ಟು ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು. ವಿಶ್ವದಲ್ಲಿ ನಡೆಯುವ ಬಾಲ್ಯ ವಿವಾಹಗಳಲ್ಲಿ ಶೇ. ೪೦ರಷ್ಟು ಭಾರತದಲ್ಲೇ ನಡೆಯುತ್ತವೆ'

ಮಾಹಿತಿ ಹಕ್ಕು ಕಾಯ್ದೆಯಡಿ ದೊರೆತ ಮಾಹಿತಿಯ ಪ್ರಕಾರ ಸದ್ಯಕ್ಕೆ ದೇಶದಲ್ಲಿ ೬.೮ ಲಕ್ಷ 'ದಾಖಲಾದ' ಲೈಂಗಿಕ ಕಾರ್ಯಕರ್ತೆಯರಿದ್ದಾರೆ. ಇವರಲ್ಲಿ ಶೇಕಡ ೪೦ ರಷ್ಟು ಅಪ್ರಾಪ್ತ ಹೆಣ್ಣುಮಕ್ಕಳು! 'ದಾಖಲಾಗದೇ' ಹೊರಗುಳಿದವರ ಸಂಖ್ಯೆ ಇದರ ಮೂರರಷ್ಟಿದೆ ಎಂಬ ಅಂದಾಜಿದೆ. ಇದರಲ್ಲಿ ಕಾಲ್‌ಗರ್ಲ್‌ಗಳು, ಹೈಟೆಕ್ ವೇಶ್ಯಾವಾಟಿಕೆ, ವ್ಯಾಪಾರಿಕರಣದ ಲೇಬಲ್ ಇಲ್ಲದ 'ಸಭ್ಯ–ನಾಗರಿಕ' ವ್ಯಭಿಚಾರವೂ ಸೇರುತ್ತದೆ.

. ವಿಶ್ವದಲ್ಲಿ ಮೂರನೇ ಅತಿ ಹೆಚ್ಚು ವಹಿವಾಟನ್ನು ಹೊಂದಿರುವ ದಂಧೆ ಎಂದರೆ ಸೆಕ್ಸ್ ದಂಧೆ! ಮೊದಲೆರಡು ಸ್ಥಾನಗಳಲ್ಲಿರುವುದು ಮಾರಕಾಸ್ತ್ರ ಮತ್ತು ಮಾದಕ ದ್ರವ್ಯಗಳ ದಂಧೆ.

ಈ ದೇಶದಲ್ಲಿ ಪ್ರತಿ ಅತಿ ಪ್ರತಿಷ್ಠಿತ ವ್ಯಕ್ತಿಯ(ವಿ.ಐ.ಪಿ) ರಕ್ಷಣೆಗೆ ಮೂವ್ವರು ಪೋಲೀಸರು ನಿಯೋಜಿತರಾಗಿದ್ದರೆ, ಪ್ರತಿ ೨೭೦ ಸಾಮಾನ್ಯ ಪ್ರಜೆಗಳಿಗೆ ಒಬ್ಬ ಪೋಲೀಸ್ ಇದ್ದಾನೆ.

ಅಧ್ಯಾಪಕ ಮಿತ್ರರೊಬ್ಬರು ತಮ್ಮ ಮಗನ ಬಗ್ಗೆ ಹೆಮ್ಮೆಯಿಂದ ಹೇಳಿದ ಪ್ರಸಂಗವಿದು:

ಅವರ ಪತ್ನಿಯೂ ಕಾಲೇಜೊಂದರಲ್ಲಿ ಪ್ರಾಧ್ಯಾಪಕರು. ಹುಟ್ಟಿನಿಂದ ಇಬ್ಬರೂ ಬ್ರಾಹ್ಮಣರಾದರೂ ಈ ಪ್ರಾಧ್ಯಾಪಕರು ಉಪನಯನ ಅಗತ್ಯವಿಲ್ಲವೆಂದು ಅದನ್ನು ಮಾಡಿಸಿಕೊಂಡಿಲ್ಲವಂತೆ. ದಂಪತಿಗಳಿಬ್ಬರೂ ಆಗಾಗ ಮದ್ಯ ಸೇವಿಸುವುದೂ ಉಂಟು. ಅದು ಆಧುನಿಕ ಆಲೋಚನೆಗಳ ಕುಟುಂಬ. ಅವರ ಮಗನೂ ಅಷ್ಟೆ, ಅವರಿಗೆ ಅರ್ಥವಾಗಲು ಕಷ್ಟವಾಗುವಷ್ಟು ಅತ್ಯಾಧುನಿಕ. ಚೆನ್ನಾಗಿ ಓದಿದ್ದಾನೆ. ಜಗತ್ತಿನ ಸಾಹಿತ್ಯವನ್ನೆಲ್ಲ ಅರೆದು ಕುಡಿದಿದ್ದಾನೆ. ಗಿಟಾರ್ ನುಡಿಸುವುದರಲ್ಲಿ ಪ್ರವೀಣ. ಅವನದೇ ಒಂದು ವಾದ್ಯ ತಂಡವಿದ್ದು, ಅದರೊಂದಿಗೆ ವರ್ಷಕ್ಕೊಮ್ಮೆ ಗೋವಾಗೆ ಹೋಗಿ ವಿಹರಿಸಿ ಬರುತ್ತಾನೆ. ಹೀಗೇ ಒಂದು ದಿನ ಗೋವದಿಂದ ಆತ ಹಿಂದಿರುಗಿ ಬಂದಾಗ ಅವನ ವಿದೇಶಿ ಚಪ್ಪಲಿಯ ಮೇಲೆ ತಮ್ಮ ಯೌವ್ವನದ ಹೀರೋ ಚೆಗೆವಾರಾನ ಚಿತ್ರವಿದ್ದುದನ್ನು ಕಂಡು ಈ ಪ್ರಾಧ್ಯಾಪಕರು ಹೌಹಾರಿ ಮಗನನ್ನು ಈ ಚಿತ್ರ ಯಾರದ್ದು ಗೊತ್ತೇನಯ್ಯ ಎಂದು ಕೇಳಿದಾಗ ಆತ ಚೆಗೆವಾರಾನ ಪ್ರವರವನ್ನೆಲ್ಲ ಪಟಪಟನೆ ಹೇಳಿ ತಾನು ಚೆ'ಯನ್ನು ಪ್ರೀತಿಸುವ ಬಗೆಯಿದು ಎಂದು ಹೇಳಿ ಇವರನ್ನು ನಿಬ್ಬೆರಗಾಗಿಸಿದನಂತೆ.

ಈ ಹುಡುಗ ಒಂದು ದಿನ ಬಂದು ತನ್ನ ಅಪ್ಪನಿಗೆ ತನಗೆ ಉಪನಯನ ಮಾಡಿಸು ಎಂದು ಕೇಳಿದನಂತೆ. ಅವಾಕ್ಕಾದ ಅಪ್ಪ ಮರು ಮತಾಡದೆ ಇದು ತಂದೆಯಾಗಿ ತನ್ನ ಕರ್ತವ್ಯವೆಂದು ಕೂಡಲೇ ತಾನೂ ಉಪನಯನ ಮಾಡಿಸಿಕೊಂಡು ನಂತರ ಮಗನಿಗೆ ದಾರ ಹಾಕಿಸಿ ನಿಟ್ಟಿಸಿರು ಬಿಟ್ಟರಂತೆ!

# ಅಂದಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು




ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವದ ಕಾಂಗ್ರೆಸ್ ಎಂಬ ಅತಿ ದೊಡ್ಡ ಪ್ರಜಾಸತ್ತಾತ್ಮಕ ಪಕ್ಷ ಮೋತಿಲಾಲ ನೆಹ್ರೂ ಎಂಬ ಅಲಹಬಾದಿ ರಾಜನ ಐದನೇ ಕುಡಿಯನ್ನು ಮೊನ್ನೆ ಜೈಪುರವೆಂಬ ಮಾಜಿ ರಾಜ ಸಂಸ್ಥಾನದ ರಾಜಧಾನಿಯಲ್ಲಿ ಸಿಂಹಾಸನಕ್ಕೇರಿಸುವ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿ ರಾಜಮಾತೆಯ ಬಹುದಿನಗಳ ಅಭೀಪ್ಸೆಯನ್ನು ಈಡೇರಿಸಿ ಕೃತಾರ್ಥರಾಗಿಯೇಬಿಟ್ಟಿತಂತಲ್ಲಾ!


ಈ ಸಂದರ್ಭದಲ್ಲಿ ಮನಮೋಹನ್ ಸಿಂಗ್, ದಿಗ್ವಿಜಯ ಸಿಂಗ್ ಮುಂತಾದ ಮುದಿ ಸಿಂಹಗಳೆಲ್ಲ ಬಾಲ ಮುದುರಿ ಕೂತು ಆ ಶುದ್ಧಶುಂಠಿಗೆ ಜೈಹಾಕಾರ ಹಾಕಿದ್ದನ್ನು ನೋಡುವುದೇ ಒಂದು ಮೋಜಾಗಿತ್ತಂತಲ್ಲಾ!



ಇದೇ ಸಂದರ್ಭದಲ್ಲಿ ನೆರೆದವರ ಮನರಂಜನೆಗಾಗಿ ಏರ್ಪಡಿಸಲಾಗಿದ್ದ 'ಚಿಂತನ ಗೋಷ್ಠಿ'ಗೆ ವಿದೇಶ ವ್ಯವಹಾರ ಕುರಿತ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಆಹ್ವಾನಿತರಾಗಿದ್ದ ಮಾಜಿ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣರೆಂಬ ಆಕ್ಸ್‌ಫರ್ಡ್ ಪದವೀಧರರು ಈಗ ತಮ್ಮ ಪಕ್ಕದಲ್ಲಿ ಟಿಪ್ಪಣಿ ಬರೆದುಕೊಡಲು ವಿದೇಶಾಂಗ ಕಾರ್ಯದರ್ಶಿಗಳು ಯಾರೂ ಇಲ್ಲ ಎಂದು ಅರಿತೊಡನೆ ಚಿಂತಾಜಕನ ಸ್ಥಿತಿ ತಲುಪಿ ಯಾವುದೋ ಹೆಸರು ಕೇಳದ ದೇಶಕ್ಕೆ ತಲೆ ತಪ್ಪಿಸಿಕೊಂಡು ಓಡಿದರಂತಲ್ಲಾ!



ಚಿಂತನ ಗೋಷ್ಠಿಯಲ್ಲಿ ಈ ಎಸ್. ಎಂ. ಕೃಷ್ಣರೆಂಬ ಬುದ್ಧಿಶಾಲಿ ಇಲ್ಲದಿದ್ದುದೇ ಕಾರಣವಾಗಿ ರೆಹಮಾನ್ ಖಾನ್ ಎಂಬ ವಕ್ಫ್ ಗಿರಾಕಿಗೆ ಇದ್ದಕ್ಕಿದ್ದಂತೆ ತಲೆ ಓಡಲಾರಂಭಿಸಿ, ಈ ವಕ್ಫ್‌ಗೆ ಇನ್ನಷ್ಟು ಆಸ್ತಿ ಸೇರಿತೆಂದು ಲೆಕ್ಕ ಹಾಕಿ ಶ್ರೀರಂಗಪಟ್ಟಣದಲ್ಲಿ ಸಾಬರ ಸಂಸ್ಕೃತಿ ಅಧ್ಯಯನ ನಡೆಸಲು ಟಿಪ್ಪು ವಿಶ್ವವಿದ್ಯಾಲಯ ಸ್ಥಾಪನೆಯ ಯೋಜನೆ ಹಾಕುತ್ತಿದ್ದಂತೆ, ಈ ಸಾಬರು ಸಂಸ್ಕೃತಿ ಅಧ್ಯಯನ ನಡೆಸದೆ ಈ ರಾಜ್ಯದಲ್ಲಿ ಇಷ್ಟು ಹಾವಳಿ ಮಾಡುತ್ತಿರುವಾಗ ಇನ್ನು ಅಧ್ಯಯನ ನಡೆಸಿದರೆ ಗತಿಯೇನು ಎಂದು ತರತರ ನಡುಗಿ ಹೋದ ನಮ್ಮ ವೀರ ಹಿಂದೂ ಯೋಧರಾದ ನಮ್ಮ ಚಿಮೂ–ಭೈರಪ್ಪ ಜೋಡಿ ರಾಜ್ಯಾದ್ಯಂತ 'ಹಿಂದೂ ವೀರರೆ ಏಳಿ, ಎದ್ದೇಳಿ!' ಎಂದು ವಿವೇಕಾಂದರ ಶೈಲಿಯಲ್ಲಿ ಕೂಗುತ್ತಾ, ಅರಚುತ್ತಾ ಅಲೆಯುತ್ತಿರಲು ಪ್ರಮೋದ ಮುತಾಲಿಕನ ಹೊರತಾಗಿ ಅತ್ತಾರೂ ಅತ್ತ ತಿರುಗಿ ನೋಡುತ್ತಿಲ್ಲವಂತಲ್ಲಾ!!







ಇತ್ತ ರಾಜ್ಯದಲ್ಲಿ ಚುನಾವಣೆಗಳ ದಿನ ಸನ್ನಿಹಿತವಾಗುತ್ತಿದ್ದಂತೆ ಮಾಂಸದ ವಾಸನೆಗೆ ನಾಯಿ ಬಾಲ ಎತ್ತಿ ಏಳುವಂತೆ ನಮ್ಮ ಸರ್ವೋದಯ ಕರ್ನಾಟಕ ಪಕ್ಷದ ನಾಯಕರು ಐದು ವರ್ಷಗಳ ದೀರ್ಘ ನಿದ್ರೆಯಿಂದೆದ್ದು ಆ ನಿದ್ದೆಯಲ್ಲಿ ಬಿದ್ದಿದ್ದ ಕರ್ನಾಟಕವನ್ನು ಆಳುತ್ತಿದ್ದ ಕನಸಿನ ಮಂಪರಿನಲ್ಲಿಯೇ ರಾಜ್ಯದ ಎಲ್ಲ ವಿಧಾನಸಭಾ ಸ್ಥಾನಗಳಿಗೂ ಸ್ಪರ್ಧಿಸಲಿದ್ದೇವೆ ಎಂದು ಘೋಷಿಸಿ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಜನ ಮರೆತೇ ಹೋಗಿದ್ದ 'ತಿರುಕನ ಕನಸು' ಎಂಬ ಪದ್ಯವನ್ನು ನೆನಪಿಸಿಕೊಳ್ಳುವಂತೆ ಮಾಡಿದ್ದಾರಂತಲ್ಲಾ!



ಇತ್ತ ಕಳೆದೇ ಹೋದಂತಿದ್ದ ಗಿರಡ್ಡಿ ಗೋವಿಂದರಾಜರೆಂಬ ನವ್ಯದ 'ತೀರ್ಥ'ರೂಪವೊಬ್ಬರು ಇದ್ದಕ್ಕಿದ್ದಂತೆ ನವ್ಯ ಕಾಲದ ನಶೆ ಏರಿದವರಂತೆ ಸುಭಾಷ್ ರಸ್ತೆಯಲ್ಲಿ ನಾಗರಹಾವು ಚಿತ್ರದ 'ಸಂಭ್ರಮಾ... ಸಂಭ್ರಮಾ...' ಶೈಲಿಯಲ್ಲಿ 'ಸಂಭ್ರಮಾ... ಸಂಭ್ರಮಾ... ಸಾಹಿತ್ಯ ಸಂಭ್ರಮಾ...' ಎಂದು ಗುನುಗುತ್ತಾ ಬೆಂಗಳೂರಿಂದ ಕರ್ನಾಡರು ಕಳಿಸದಂತಿದ್ದ ಯಾರೋ ಅನಾಮಿಕ ಸಾಹುಕರರ ಹೆಗಲ ಮೇಲೆ ಕೈಹಾಕಿ ಬರುತ್ತಿದುದನ್ನು ಕಂಡ ಧಾರವಾಡದ ಹಾಳುಭಾವಿ, ನೀರುಭಾವಿ, ಸೂಳೆಭಾವಿ ಮುಂತಾದ ಡಂಬಾಯ ಸಾಹಿತಿಗಳಿಗೆ ಈ ಕ್ಷಾಮ–ಢಾಮರಗಳ ಕಾಲದಲ್ಲಿ ಸಾಹಿತಿಗಳು ಸಾಹುಕಾರರ ಹೆಗಲ ಮೇಲೆ ಕೈ ಹಾಕುವುದೆಂದರೇನು, 'ಸಂಭ್ರಮ ಸಂಭ್ರಮಾ' ಎಂದು ಹಾಡುವುದೆಂದರೇನು ಎಂದು ಸಾಹಿತ್ಯ ಗರತಿಯರಂತೆ ಸೊಂಟಕ್ಕೆ ಸೀರೆ ಸಿಗಿಸಿ ನಿಂತ ಕೂಡಲೇ ಆ ಗಿರಡ್ಡಿ ಎಂಬುವವರು ಪಾಪ 'ಸರೋಜಾ... ಸರೋಜಾ...' ಎಂದು ಕೂಗಿಕೊಂಡು ನವ್ಯದ ಸ್ಮಶಾನ ಭೂಮಿಯತ್ತ ಓಡಿದರಂತಲ್ಲಾ!




ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ಸಾವಿರದ ಒಂದು ಪುಟಗಳ ಪ್ರಥಮ ಮಾಹಿತಿ ವರದಿಯನ್ನು ನ್ಯಾಯಾಲಯದಲ್ಲಿ ದಾಖಲು ಮಾಡುತ್ತಿದ್ದಂತೆ ಅತ್ಯಾಚಾರ ಆರೋಪಿಗಳ ವಕಾಲತ್ತು ವಹಿಸಿರುವ ವಕೀಲರುಗಳು ಕಾನೂನುಗಳ ಬಿಲ ತೋಡಿ ತಮ್ಮ ಕಕ್ಷಿದಾರರನ್ನು ಅಡಗಿಸಿಡಲು ವಿಸ್ತಾರವಾದ ಹೊಲವೇ ಸಿಕ್ಕಂತಾಗಿ ತಮ್ಮ ಕರಾಮತ್ತುಗಳನ್ನು ಆರಂಭಿಸಿಯೇ ಬಿಟ್ಟಿರುವರಂತಲ್ಲಾ.


ಇದರ ಫಲವಾಗಿ ಒಬ್ಬ ಆರೋಪಿ, ದೆಹಲಿ ನಗರ ಈ ಪ್ರಕರಣದ ಬಗ್ಗೆ ಪೂರ್ವಾಗ್ರಹ ಪೀಡಿತವಾಗಿರುವುದರಿಂದ ಪ್ರಕರಣವನ್ನು ಕೃಷ್ಣ ಪರಮಾತ್ಮನ ಹುಟ್ಟೂರಾದ ಮಥುರೆಗೆ ವರ್ಗಾಯಿಸಬೇಕೆಂದು ಅರ್ಜಿ ಸಲ್ಲಿಸಿದ್ದಾನಂತಲ್ಲಾ.



ಇದಕ್ಕೆಲ್ಲಾ ಸಾಥ್ ನೀಡುವವರಂತೆ ನಮ್ಮ ಮಠಾಧಿಪತಿಗಳೂ, ಗುರೂಜಿಗಳೂ ಎಲ್ಲೋ ನಮ್ಮ ಹಳೆ ಕನ್ನಡದ ಸಿನಿಮಾ ಹಾಡು ಕೇಳಿದವರಂತೆ 'ಹೆಣ್ಣು ಎಂದರೆ ಹೀಗಿರಬೇಕು' ಎಂದು ಗುನುಗುತ್ತಾ ಮುಂದಿನ ಸಾಲು ಮರೆತುಹೋದ ಕಸಿವಿಸಿಯಲ್ಲಿ ಒಬ್ಬರು ಅದನ್ನು 'ತೆಪ್ಪಗೆ ಅಡಿಗೆ ಮನೆಯಲ್ಲಿ ಬಿದ್ದಿರಬೇಕು...' ಎಂದೂ, ಇನ್ನೊಬ್ಬರು, 'ಸೀರೆಯ ಎಳೆಯೋನ ಎದುರು ಕೈಮುಗಿದು ನಿಲ್ಲಲು ಬೇಕು...' ಎಂದೂ ತಾವೇ ರಚಿಸಿಕೊಂಡು ಅದರ ಲಯಕ್ಕೆ ಹೆಜ್ಜೆ ಹಾಕುತ್ತಿರಲು ದೇಶದ ಪ್ರಜೆಗಳೆಲ್ಲ ಇದನ್ನು ಮನರಂಜನೆಯಂತೆ ನೋಡಿ ಚಪ್ಪಾಳೆ ತಟ್ಟುತ್ತಿದ್ದಾರಂತಲ್ಲಾ!



### ಕೊನೆಯ ಹನಿ:



ಪತ್ರಕರ್ತ ಲಂಕೇಶರ ವಿಚಿತ್ರ ಲಹರಿಗೆ ಒಂದು ಉದಾಹರಣೆ:

ಉತ್ತರ ಕರ್ನಾಟಕದ ಕಡೆಯ ವಿಶ್ವವಿದ್ಯಾನಿಲಯವೊಂದಕ್ಕೆ ಕುಲಪತಿಗಳಾಗಿ ಹೋಗಿದ್ದ ರಾಜಗಾಂಭೀರ್ಯಕ್ಕೆ ಹೆಸರಾಗಿ, ತಾವು ಈ ಮೊದಲು ಮುಖ್ಯಸ್ಥರಾಗಿದ್ದ ಅಧ್ಯಯನ ಸಂಸ್ಥೆಯನ್ನು ಶಿಸ್ತಿನಿಂದ ಆಳಿದರೆಂದು ಹೇಳಲಾಗುವ ಕನ್ನಡದ ಹಿರಿಯ ಸಾಹಿತಿಯೊಬ್ಬರು ಓರ್ವ ಮುದಿ ಮಹಿಳಾ ಸಾಹಿತಿಯೊಂದಿಗೆ 'ವ್ಯವಹಾರ' ಶುರು ಮಾಡಿರುವ ಗುಸು ಗುಸು ಆರಂಭವಾಗಿ, ಲಂಕೇಶ್ ಪತ್ರಿಕೆಯ ಸ್ಥಳೀಯ ವರದಿಗಾರ ತನಗೆ ದೊರೆತ ಸಂಬಂಧಿತ 'ಸಾಕ್ಷ್ಯ'ದೊಂದಿಗೆ ಅದನ್ನು ಲಂಕೇಶರಿಗೆ ತಲುಪಿಸಿದಾಗ ಅವರು ಅದನ್ನು ಪ್ರಕಟಿಸಲು ನಿರಾಕರಿಸಿದ್ದು ಈ ಕಾರಣದ ಮೇಲೆ:

'ಬೇಡ. ಆತ ಜೀವನದಲ್ಲಿ ಮೊದಲ ಬಾರಿಗೆ ಮನುಷ್ಯನಂತೆ ವರ್ತಿಸುತ್ತಿದ್ದಾನೆ. ಆತನನ್ನು ಹಾಗೇ ಬಿಡುವುದು ಲೇಸು. ಅದರಿಂದ ವಿಶ್ವವಿದ್ಯಾಲಯಕ್ಕೆ ಮನುಷ್ಯ ಆಡಳಿತ ದೊರಕೀತು

–ಕಿಡಿಗೇಡಿ

# ತಿಂಗಳ ವಿಶೇಷ ಕಾಶ್ಮೀರ : ಇತಿಹಾಸದ ಒಂದು ಇಣುಕು ನೋಟ



**ಕಾ**ಶ್ಮೀರ ಸ್ವತಂತ್ರ ಭಾರತದ ನಿರಂತರ ತಲೆನೋವಾಗಿ ಪರಿಣಮಿಸಿದೆ. ೧೯೪೭ರಲ್ಲಿ ಈ ಮುಸ್ಲಿಂ ಬಹುಸಂಖ್ಯಾತ ರಾಜ್ಯದ ಹಿಂದೂ ದೊರೆ ಹರಿಸಿಂಗ್‌ನಿಂದ ಕೆಲವು ಷರತ್ತುಗಳ ಮೇಲೆ ಭಾರತದ ಒಕ್ಕೂಟಕ್ಕೆ ಸೇರಿಕೊಂಡ ಕಾಶ್ಮೀರ ತನ್ನದೇ ವಿಶಿಷ್ಟ ಧಾರ್ಮಿಕ, ಸಾಂಸ್ಕೃತಿಕ ವೈವಿಧ್ಯಗಳ ಕಾರಣದಿಂದಾಗಿ ಈ ೬೫ ವರ್ಷಗಳಲ್ಲಿ ಭಾರತದೊಳಕ್ಕೆ ರಾಜಕೀಯವಾಗಿ ಸಂಪೂರ್ಣ ವಿಲೀನಗೊಳ್ಳಲು ನಿರಾಕರಿಸುತ್ತಾ ಈ ಉಪಖಂಡದ ನಿರಂತರ ಅಶಾಂತಿಗೆ ಕಾರಣವಾಗಿದೆ. ಸ್ವತಃ ಕಾಶ್ಮೀರದೊಳಗಿನ ಅಶಾಂತಿ, ಸಾವು ನೋವುಗಳಲ್ಲದೆ ಕಾಶ್ಮೀರ ಸಮಸ್ಯೆಯನ್ನು ಉಲ್ಬಣಗೊಳಿಸುತ್ತಿರುವ ನೆರೆಯ ಪಾಕಿಸ್ತಾನದೊಡನೆ ಯಾವಾಗ ಬೇಕಾದರೂ ಯುದ್ಧ ಸಂಭವಿಸುವ ಸಾಧ್ಯತೆಗಳನ್ನು ಸದಾ ನಮ್ಮ ಮುಂದೆ ತೆರೆದಿಟ್ಟಿದೆ. ನಿನ್ನೆ ಮೊನ್ನೆ ಗಡಿ ನಿಯಂತ್ರಣ ರೇಖೆಯ ಬಳಿ ಸಂಭವಿಸಿದ ಘರ್ಷಣೆ ಮತ್ತು ಭಾರತೀಯ ಸೈನಿಕನೊಬ್ಬನ ಶಿರಚ್ಛೇದದ ಘಟನೆ ಇಂತಹುದೊಂದು ಸಾಧ್ಯತೆಯನ್ನು ಪ್ರಚೋದಿಸಿತ್ತು ಮತ್ತು ಎರಡೂ ಕಡೆ ಕೆಲವರು ಇದಕ್ಕೆ ಸಾಕಷ್ಟು ಪ್ರೋತ್ಸಾಹದ ಬೀಜಗಳನ್ನು ಬಿತ್ತಲೆತ್ನಿಸಿದ್ದನ್ನು ಓದುಗರು ಗಮನಿಸಿರಬಹುದು. ಈಗಾಗಲೇ ಈ ಎರಡೂ ದೇಶಗಳ ನಡುವೆ ಎರಡು ಯುದ್ಧಗಳು ನಡೆದು ಎರಡೂ ದೇಶಗಳು ಅಪಾರ ಪ್ರಮಾಣದ ಜೀವ ಮತ್ತು ಆಸ್ತಿಪಾಸ್ತಿ ಮತ್ತು ಆರ್ಥಿಕ ನಷ್ಟವನ್ನನುಭವಿಸಿವೆ.

ರಾಷ್ಟ್ರ ವಿಭಜನೆ ಮತೀಯ ಆಧಾರದ ಮೇಲೆ ನಡೆದ ದುರಂತ ಸಂಭವಿಸಿದಾಗ ಈ ದುರಂತದ ಸರಳ ತರ್ಕಕ್ಕೆ ತಕ್ಕಂತೆ ಪಾಕಿಸ್ತಾನಕ್ಕೆ ಸೇರಬೇಕಿದ್ದ ಕಾಶ್ಮೀರ ಹಿಂದೂ ರಾಜನೊಬ್ಬನ ಆಳ್ವಿಕೆಯಲ್ಲಿದ್ದ ಕಾರಣದಿಂದಾಗಿ ಮತ್ತು ಅದಕ್ಕಿಂತ ಹೆಚ್ಚಾಗಿ ಅದರ ವಿಶಿಷ್ಟ ಪಾರಂಪರಿಕ ಸಾಂಸ್ಕೃತಿಕ ಅಸ್ಮಿತೆಗನುಗುಣವಾಗಿ ಭಾರತಕ್ಕೆ ಸೇರಿ, ಈ ರಾಷ್ಟ್ರ ನಂಬಿರುವ ಧರ್ಮನಿರಪೇಕ್ಷತೆಯ ತತ್ವಕ್ಕೆ ಉಜ್ವಲ ಸಾಕ್ಷಿಯಾಗಿ ಉಳಿದಿದೆ. ಆದರೆ ಈ ವಿದ್ಯಮಾನದ ಸಾಂದರ್ಭಿಕ ಸಂಕೀರ್ಣತೆಯನ್ನರಿಯದ ಭಾರತ ಮತ್ತು ಪಾಕಿಸ್ತಾನಗಳೆರಡರ ರಾಜಕಾರಣಿಗಳೂ–ರಾಜಕೀಯ ಮುತ್ಸದ್ದಿ ಎಂದು ಹೆಸರಾದ ನಮ್ಮ ಮೊದಲ ಪ್ರಧಾನಿ ನೆಹ್ರೂ ಕೂಡಾ ಸೇರಿದಂತೆ–ಅದನ್ನು ತಂತಮ್ಮದೇ ರಾಜಕೀಯ ಕಾರಣಗಳಿಗಾಗಿ ವಿವಾದ ವಿಷಯವನ್ನಾಗಿಸಿದರು. ಪಾಕಿಸ್ತಾನ ಮತೀಯ ದೃಷ್ಟಿಯಿಂದಲೇ ಆಲೋಚಿಸಿ ಅದು ತನ್ನ ರಾಷ್ಟ್ರದ ಭಾಗ ಎಂದು ವಾದಿಸುತ್ತಿದ್ದರೆ, ನೆಹ್ರೂ ಅದನ್ನು ವಿಶ್ವಸಂಸ್ಥೆಯ ವೇದಿಕೆಗೆ ಒಯ್ದು ಜನಮತ ಗಣನೆಯ ಪ್ರಸ್ತಾಪ ಮಾಡಿ ಅದನ್ನು ಅಂತಾರಾಷ್ಟ್ರೀಯ ವಿವಾದವನ್ನಾಗಿ ಮಾಡಿದರು. ಅದನ್ನೇ ಪಟ್ಟಾಗಿ ಹಿಡಿದು ಕೂತಿರುವ ಪಾಕಿಸ್ತಾನ, ಭಾರತದ ಸೇನಾ ಬೆಂಬಲದಿಂದಲೇ ತಾನು ಪೂರ್ವ ಪಾಕಿಸ್ತಾನವನ್ನು ಕಳೆದುಕೊಂಡೆನೆಂಬ ಸಂಕಟ ಮತ್ತು ಅದರಿಂದ ಹುಟ್ಟಿದ ಸೇಡಿನಲ್ಲಿ ಇಸ್ಲಾಮಿ ಭಯೋತ್ಪಾದನೆಗೆ ಕುಮ್ಮಕ್ಕು ಕೊಟ್ಟು ಕಾಶ್ಮೀರದಲ್ಲಿ ಸತತವಾಗಿ ರಕ್ತ ಚೆಲ್ಲಾಡುತ್ತಾ ಭಾರತವನ್ನು ನಿರಂತರ ಕಿರುಕುಳಕ್ಕೆ ಈಡು ಮಾಡಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಕಾಶ್ಮೀರವೆನ್ನುವುದು ಜಗತ್ತಿನ ಅತ್ಯಂತ ಅಭದ್ರತೆಯ, ಅಶಾಂತಿಯ ಮತ್ತು ಅಪಾಯದ ಸ್ಥಳವೆನ್ನಿಸಿದೆ ಇದರೆಲ್ಲ ದುಃಖ–ಸಂಕಷ್ಟ–ಹಿಂಸೆಗಳನ್ನು ಅನುಭವಿಸುತ್ತಿರುವವರು ಮಾತ್ರ ಕಾಶ್ಮೀರದ ಜನ. ಭಾರತದ ಏಳು ಲಕ್ಷ ಜನ ಸೈನಿಕರು, ಒಂದು ಕಾಲದಲ್ಲಿ ಭೂಮಿಯ ಮೇಲಿನ ಸ್ವರ್ಗವೆನಿಸಿದ್ದ ಕಾಶ್ಮೀರದಲ್ಲಿ ಈ ನಿರಂತರ ದುಃಖ–ಸಂಕಷ್ಟಗಳಿಗೆ ಪರಿಹಾರ ಕಾಣದ ಹತಾಶೆಯಲ್ಲಿ ಸಿಡಿದೆದ್ದಿರುವ ಸ್ಥಳೀಯ ಬಂಡಾಯಗಾರರಿಂದ ಮತ್ತು ಅವರಿಗೆ ಹೊರಗಿಂದ ಬೆಂಬಲ ನೀಡುತ್ತಿರುವ ಪಾಕಿಸ್ತಾನಿ ಪ್ರಚೋದಕರಿಂದ ಅದನ್ನು 'ರಕ್ಷಿಸಲು' ಕಳೆದ ಸುಮಾರು ಇಪ್ಪತ್ತೈದು ವರ್ಷಗಳಿಂದ ನಿರಂತರ ಕಾವಲು ಕಾಯುತ್ತಿದ್ದಾರೆ. ಅಪಾರ ಸಾವು ನೋವುಗಳಿಗೂ ಕಾರಣರಾಗಿದ್ದಾರೆ. ನಾಗರಿಕ ಪ್ರಜಾಪ್ರಭುತ್ವವೆನಿಸಿದ ಭಾರತದ ಮಟ್ಟಿಗೆ ಇದೊಂದು ವಿಪರ್ಯಾಸದ ಮತ್ತು ಮುಜುಗರದ ಸಂಗತಿಯಾಗಿದೆ. ಒಂದು ಕಾಲದಲ್ಲಿ ಹಿಂದೂ–ಮುಸ್ಲಿಂ–ಬೌದ್ಧ ಮನಸ್ಸುಗಳ ಸುಮಧುರ ಸಂಗಮವೆನಿಸಿದ್ದ ಕಾಶ್ಮೀರ ಇಂದು ಮತೀಯತೆಯ ಬಾಹುಗಳಿಗೆ ಸಿಕ್ಕಿದೆ. ಹೀಗಾಗಿ ಅದರ ಸ್ವಾಯತತ್ತೆಯ ಕೂಗು ರಾಜಕೀಯವಾಗಿ ಅನುಮಾನಾಸ್ಪದವೆನಿಸಿ, ಅಗ್ಗದ ದೇಶಭಕ್ತರ ಗಂಟಲು ಶಕ್ತಿಯನ್ನು ಹೆಚ್ಚಿಸಿದೆ. ಕಾಶ್ಮೀರದ ಜನತೆಯ ಧ್ವನಿಯನ್ನು ದಮನಗೊಳಿಸಿ ಯಾವ ಷರತ್ತುಗಳ ಮೇಲೆ ಅದು ಭಾರತಕ್ಕೆ ಸೇರಲು ಒಪ್ಪಿಕೊಂಡಿತ್ತೋ ಆ ಷರತ್ತುಗಳನ್ನು ರದ್ದುಗೊಳಿಸಿ ಅದನ್ನು ಬಲಪ್ರಯೋಗದ ಮೂಲಕ ಭಾರತದೊಳಕ್ಕೆ ರಾಜಕೀಯವಾಗಿ ಸಂಪೂರ್ಣ ವಿಲೀನಗೊಳಿಸಬೇಕೆಂಬ ಕೂಗು ಬಲ ಪಡೆಯುತ್ತಿದೆ. ಇದು, ಸಮಸ್ಯೆಯ ಇನ್ನಷ್ಟು ಜಟಿಲತೆಗೆ ಮತ್ತು ಹಿಂಸೆಗೆ ದಾರಿಯೇ ಸರಿ.

ಕಾಶ್ಮೀರದ ಸಮಸ್ಯೆ ಯುದ್ಧಗಳಿಂದಾಗಲೀ, ಸಂಧಾನಗಳ ಮೂಲಕವಾಗಲೀ ಪರಿಹಾರವಾಗದೆ ದಿನೇ ದಿನೇ ಹೊಸ ಹೊಸ ಜಟಿಲತೆಗಳನ್ನು ಆಹ್ವಾನಿಸಿಕೊಂಡು ಹೆಚ್ಚೆಚ್ಚು ಅಪರಿಹಾರ್ಯವೆನ್ನಿಸತೊಡಗಿದೆ. ಎರಡೂ ರಾಷ್ಟ್ರಗಳು ರಾಷ್ಟ್ರ ವಿಭಜನೆಯ ಕಹಿಯಲ್ಲಿ ಕಟ್ಟಿಕೊಂಡ ತಂತಮ್ಮ ರಾಷ್ಟ್ರೀಯ ಅಹಂಕಾರಗಳಲ್ಲಿ ಕಾಶ್ಮೀರವನ್ನು ಒಂದು ಭೂಭಾಗ ಮಾತ್ರವಾಗಿ ನೋಡಿ, ಅದು ಐದು ಸಾವಿರ ವರ್ಷಗಳ ಕಾಲದ ಒಂದು ಇತಿಹಾಸ ಕಮ್ಮಟದಲ್ಲಿ ಸಂಯೋಜಿತವಾದ ಒಂದು ಅತಿ ವಿಶಿಷ್ಟ ಜೀವನಕ್ರಮದಲ್ಲಿ ಮೂಡಿದ ಒಂದು ಜೀವಂತ ಸಮುದಾಯ ಎಂಬುದನ್ನು ಮರೆತಿರುವುದೇ ಇದಕ್ಕೆ ಕಾರಣವೇ? ಅದರ ಇತಿಹಾಸದ ಒಂದು ಇಣಕು ನೋಟ, ಇರಬಹುದು ಎಂದು ಹೇಳುತ್ತದೆ. ಕಾಶ್ಮೀರವನ್ನು ಇಂದು ದಿನ ಬೆಳಗಾದರೆ ದೇಶಭಕ್ತಿಯ ಆವೇಶದಲ್ಲಿ ಚರ್ಚಿಸುವ ವಿವಿಧ ರಂಗಗಳ ಜನ ಕಾಶ್ಮೀರ ಸಂಸ್ಕೃತಿಯಲ್ಲಿ ಮಿಂದು ಬೆಳೆದ ರಾಜಕೀಯ ಕಾರ್ಯಕರ್ತ ಮತ್ತು ವಿಶ್ಲೇಷಕ ಬಲರಾಜ ಪುರಿಯವರು ಒದಗಿಸಿರುವ ಈ ಇಣುಕು ನೋಟವನ್ನೊಮ್ಮೆ ಗಮನಿಸಬೇಕಿದೆ. ಆಗ ಕಾಶ್ಮೀರ ಸಮಸ್ಯೆ ಬೇರೆಯೇ ಪರಿಪ್ರೇಕ್ಷ್ಯದಲ್ಲಿ ಕಾಣಿಸಿಕೊಳ್ಳತೊಡಗುತ್ತದೆ.



–**ಸಂಪಾದಕ**

**ಕಾ**ಶ್ಮೀರ ಐದು ಸಾವಿರ ವರ್ಷಗಳಿಗಿಂತ ಹಿಂದಿನಿಂದಲೂ ಇದ್ದಿರಬೇಕು. ಆದರೆ, ಸರಿ ಸುಮಾರು ಈ ಅವಧಿಯಲ್ಲಿ ನಾಗರಿಕತೆಗೊಳಪಟ್ಟ ಜನತೆ ಅಲ್ಲಿದ್ದಿತು ಎನ್ನುವುದನ್ನು ನಿಖರವಾದ ವೈಜ್ಞಾನಿಕ ಪುರಾವೆಗಳು ಸಾಬೀತುಪಡಿಸುತ್ತವೆ. ಈ ನಾಗರೀಕತೆಯ ಒಂದು ಅಸಮಾನ್ಯವೆನ್ನಬಹುದಾದ ಈ ದೀರ್ಘಕಾಲಿಕ ಅಸ್ತಿತ್ವ ಮತ್ತು ನಿರಂತರತೆಗೆ ಹಲವು ಸಂಗತಿಗಳು ಕಾರಣವಾಗಿವೆ.

ಈ "ಭೂಮಿಯ ಮೇಲಿನ ಸ್ವರ್ಗ", ಭೌಗೋಳಿಕವಾಗಿ, ಭವ್ಯವೆನಿಸುವ ಪ್ರತ್ಯೇಕತೆಯಲ್ಲಿದ್ದರೂ, ಆಂತರಿಕವಾಗಿ ಒಳ್ಳೆಯ ಒಳ ಸಂಪರ್ಕವುಳ್ಳದ್ದಾಗಿದೆ. "ಜಗತ್ತಿನ ಅತ್ಯಂತ ಹಿರಿದಾದ ಪರ್ವತಗಳ ತೊಡೆಯ ಮೇಲೆ ವಿಸ್ತಾರವಾದ ಕಣಿವೆ"ಯಂತಿರುವ ಈ ಕಾಶ್ಮೀರ, ಒಂದೇ ರೀತಿಯ, ೧೦೦೦೦ ದಿಂದ ೧೮೦೦೦ ಅಡಿಗಳ ಎತ್ತರದ ಪರ್ವತ ಶ್ರೇಣಿಗಳು, ಸುಮಾರು ೧೯೦೦ ಚದುರ ಮೈಲುಗಳ ಸಮತಲ ಪ್ರದೇಶವನ್ನು ಸಮುದ್ರ ಮಟ್ಟದಿಂದ ೫೦೦೦ ಅಡಿಗಳ ಎತ್ತರದಲ್ಲಿ, ೮೪ ಮೈಲುಗಳ ಉದ್ದ ಮತ್ತು ೨೦ರಿಂದ ೨೫ ಮೈಲುಗಳ ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದೆ.

ಕಾಶ್ಮೀರದಲ್ಲಿ, ಯಾವುದೇ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೇವಲ ಕೆಲವೇ ಘಂಟೆಗಳ ಪ್ರಯಾಣ. ದಂತಕಥೆಯಾಗಿರುವ ಕಾಶ್ಮೀರದ ಸೌಂದರ್ಯವನ್ನು, ಜಗತ್ತಿನೆಲ್ಲೆಡೆಯ ಕವಿಗಳು, ಲೇಖಕರು ಮತ್ತು ಯಾತ್ರಿಕರು ಹೋಲಿಕೆಗೆ ನಿಲುಕದ್ದೆಂದು ಬಣ್ಣಿಸಿದ್ದಾರೆ. ಇದು ಆತ್ಮೀಯ ಒಳಸಂಬಂಧಗಳುಳ್ಳ ಸಮುದಾಯ ಇರುವ ಈ ಪ್ರದೇಶದ ಬಗ್ಗೆ ಇನ್ನೂ ಹೆಚ್ಚಿನ ಆಳವಾದ ಪ್ರೀತಿಗೆ ಪ್ರೇರಣೆ ನೀಡುತ್ತದೆ.

ಕಾಶ್ಮೀರ ತನ್ನದೇ ಆದ ಏಕರೂಪದ ಸಂಸ್ಕೃತಿಯನ್ನು ಹೊಂದಿದೆ, ಜನಸಂಖ್ಯೆಯಲ್ಲಿ ಸರಿ ಸುಮಾರು ಶೇ. ೯೫ರಷ್ಟು ಮುಸ್ಲಿಮರು. ಶೇಕಡಾ ೮೯ ಕ್ಕಿಂತಲೂ ಹೆಚ್ಚಿನವರು ಮಾತಾಡುವುದು ತಮ್ಮ ಮಾತೃಭಾಷೆ ಕಾಶ್ಮೀರಿಯಲ್ಲಿ. ಅದು ಕಶೂರ್ ಎಂದು ಕಾಶ್ಮೀರಿಗಳು ಕರೆಯುವ ಭಾಷೆ, ಆಧುನಿಕ ಭಾರತದ ಬಹಳ ಪ್ರಾಚೀನವಾದ ಆಡು ಮಾತಿನ ಮತ್ತು ಸಾಹಿತ್ಯವನ್ನೂ ಸೃಷ್ಟಿಸಿರುವ ಆಧುನಿಕ ಭಾರತದ ಭಾಷೆಗಳಲ್ಲೊಂದು. ಒಂದು ವೇಳೆ, ಲಲ್ಲಾ ಡೇಡ್(ದೇವಿ)ಳನ್ನು ಮೊದಲ ಕಾಶ್ಮೀರೀ ಕವಯತ್ರಿ ಎಂದು ಪರಿಗಣಿಸುವುದಾದರೆ, ಆ ಭಾಷೆಗೆ ೬೦೦ ವರ್ಷಗಳ ಸಾಹಿತ್ಯ ಪರಂಪರೆಯ ದಾಖಲೆ ಇದೆ. ಭಾರತೀಯ ಭಾಷೆಗಳ ಬಗ್ಗೆ ಅಧ್ಯಯನ ಮಾಡಿದ ಮೊದಲಿಗರಲ್ಲಿ ಒಬ್ಬರಾದ ಸರ್ ಜಾರ್ಜ್ ಗ್ರಿಯರ್‌ಸನ್ ಪ್ರಕಾರ, "ಉತ್ತರ ಭಾರತದ ಭಾಷೆಗಳ ತಾಯಿ ಸಂಸ್ಕೃತವಲ್ಲ. ಅವು ಡಾರ್ಡಿಕ್ ಮೂಲದಿಂದ ಬಂದವುಗಳು." ಬ್ರಿಟಾನಿಕಾ ವಿಶ್ವಕೋಶ ಹೇಳುವುದೇನೆಂದರೆ, "ಕಾಶ್ಮೀರಿ ಇರಾನಿ ಮೂಲದ್ದೂ ಅಲ್ಲ ಇಲ್ಲವೆ ಇಂಡೋ-ಆರ್ಯನ್ ಕೂಡ ಅಲ್ಲ." ಈ ಅಭಿಪ್ರಾಯ ಸರಿ ಅನ್ನುವುದಾದರೆ, ಕಾಶ್ಮೀರಿಗಳು ಢಾಕಾದಿಂದ (ಬಾಂಗ್ಲಾದೇಶ) ಪೇಷಾವರ್‌ವರೆಗೆ (ಪಾಕಿಸ್ತಾನ), ಉಪಖಂಡದ ಪೂರ್ವದ ಕೊನೆಯಿಂದ ಹಿಡಿದು ಪಶ್ಚಿಮದ ಕೊನೆಯವರೆಗೂ ಮಾತಾಡುವ ಕುಟುಂಬಗಳ



ಭಾಷೆಗೆ ಸೇರುವುದಿಲ್ಲ. ಆದಾಗ್ಯೂ, 'ಕಾಶ್ಮೀರ' ಅನ್ನುವ ಐತಿಹಾಸಿಕ ಮಹತ್ವದ ಕೃತಿಯ ಲೇಖಕ ಜಿ.ಎಂ.ಡಿ ಸೋಫಿ, ಕಾಶ್ಮೀರಿ ಭಾಷೆ ಡಾರ್ಡಿಕ್ ಮೂಲದಿಂದ ಬಂದಿದೆ-ಯಾದರೂ, ಅದರ ಮೇಲೆ ಇಂಡೋ-ಆರ್ಯನ್ ಭಾಷೆಗಳನ್ನಾಡುವ ದಕ್ಷಿಣ ಪ್ರಾಂತ್ಯಗಳ ಪ್ರಭಾವವಿದೆಯೆಂದು ಹೇಳುತ್ತಾನೆ. ಅವನ ಗ್ರಹಿಕೆಯ ಪ್ರಕಾರ, "ಮೂಲ ಡಾರ್ಡಿಕ್ ಭಾಷೆ ಅಸ್ಥಿಪಂಜರವನ್ನು ಒದಗಿಸಿದೆ, ಸಂಸ್ಕೃತ ಮಾಂಸ



ಮಜ್ಜೆ ನೀಡಿದೆ, ಇಸ್ಲಾಂ ಅದಕ್ಕೆ ಜೀವ ನೀಡಿದೆ." ಕೇವಲ ಡಾರ್ಡಿಕ್ ಭಾಷೆ ಮಾತ್ರ ಲಿಖಿತ ಸಾಹಿತ್ಯವನ್ನು ಒಳಗೊಂಡಿದೆಯೆಂದೂ ಅವನು ಹೇಳುತ್ತಾನೆ.

**ಪ್ರಾಚೀನತೆ-ಬೌದ್ಧ ಮಹಾಯಾನದ ನೆಲೆ**

ಕಾಶ್ಮೀರ ಒಂದು ಅಪರೂಪದ ನಾಗರಿಕತೆಯ ಪ್ರಯೋಗಕ್ಕೆ ಒಳಪಟ್ಟಿತ್ತೆಂದು ಹೇಳಬಹುದು. ಹೆಸರಾಂತ ಕಾಶ್ಮೀರದ ಇತಿಹಾಸ ಗ್ರಂಥ 'ರಾಜತರಂಗಿಣಿ'ಯ ಅನುವಾದಕ ಸರ್ ಔರೆಲ್ ಸ್ಟೆನ್ ಪ್ರಕಾರ, "ಇತಿಹಾಸದ ನಿರಂತರ ಲಿಖಿತ ದಾಖಲೆಯುಳ್ಳ ಭಾರತದ ಏಕಮೇವ ಪ್ರದೇಶ ಇದೊಂದೇ ಆಗಿದೆ." ಅರವತ್ತರ ದಶಕದಲ್ಲಿ, ಶ್ರೀನಗರದಿಂದ ೧೫ ಕಿಲೋಮೀಟರ್ ದೂರದಲ್ಲಿರುವ ಬೌರ್ಜಹಾಮ ಬಳಿ ಪುರಾತತ್ವ ಇಲಾಖೆ ನಡೆಸಿದ ಉತ್ಖನನದಿಂದ ಕಾಶ್ಮೀರದ ಪ್ರಾಚೀನತೆ ಕ್ರಿಸ್ತಪೂರ್ವ ೩೦೦೦ ಎಂದು ಸಿದ್ಧವಾಗಿದೆ. ಅದು ಮೊಹೆಂಜೊದಾರೊ ನಾಗರಿಕತೆಗೆ ಸಮಕಾಲೀನವಾದದ್ದೇ ಆದರೂ, ಬಹುಶಃ ಅದಕ್ಕೆ ತನ್ನದೇ ಆದ ಸ್ವತಂತ್ರ ಲಕ್ಷಣಗಳಿವೆ. ಮೊದಲಿನಿಂದಲೂ ಎಲ್ಲೆಡೆ ನಾಗಪೂಜೆ ಇತ್ತು ಮತ್ತು ಬೌದ್ಧರ ಕಾಲದ ನಂತರವೂ ಅದು ಉಳಿದು ಬಂತು. ಉಪಖಂಡಕ್ಕೆ ಆರ್ಯರ ಆಗಮನದ ಮೊದಲೇ, ನಾಗ ಮತ್ತು ಇತಿಹಾಸಪೂರ್ವ ಬುಡಕಟ್ಟು ಜನಾಂಗ ಕಾಶ್ಮೀರದಲ್ಲಿ ವಾಸಿಸುತ್ತಿದ್ದರೆನ್ನುವ ಸೂಚನೆಗಳಿವೆ. ಜೇಮ್ಸ್ ಫೆರ್‌ಗೂಸೊನ್ ಪ್ರಕಾರ, ನಾಗ ಜನಾಂಗ ಸರ್ಪಗಳ ಆರಾಧಕರಾಗಿದ್ದರು ಮತ್ತು ಉತ್ತರ ಭಾರತದಲ್ಲಿ ವಾಸಿಸುತ್ತಿದ್ದ ಮೂಲ ಟುರಾನಿಯನ್ ಸಂತತಿಗೆ ಅವರು ಸೇರಿದ್ದರು. ಇವರನ್ನು ಆರ್ಯರು ಸೋಲಿಸಿ, ಜಯಶಾಲಿಗಳಾಗಿದ್ದರು. ದುರ್ಲಭವರ್ಧನ ಎಂಬುವವನು ಕಾಶ್ಮೀರವನ್ನು ಕ್ರಿ.ಶ. ೬೭೭ರಿಂದ ೬೬೩ ರವರೆಗೆ ಆಳುತ್ತಿದ್ದನು ಎನ್ನಲಾಗಿದೆ. ಇವನು ನಾಗನೊಬ್ಬನ ಮಗನಾಗಿದ್ದನು.

ಮೂಲ ನಾಗ ಬುಡಕಟ್ಟು ಜನಾಂಗಗಳು ಆರ್ಯರ ವೇದ ಕಾಲದ ನಾಗರಿಕತೆಯಲ್ಲಿ ವಿಲೀನಗೊಳ್ಳುವುದಕ್ಕೆ ಪ್ರತಿರೋಧವೊಡ್ಡಿದರು. ದಂತಕಥೆಗಳ ಪ್ರಕಾರ, ಕೆಲವು ನಾಗಾಗಳು ಬೌದ್ಧ ಅಧ್ಯಯನ ಪೀಠವಿದ್ದ ನಳಂದದಲ್ಲಿ ನಾಗಾರ್ಜುನನು ನಡೆಸುತ್ತಿದ್ದ ಧಾರ್ಮಿಕ ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದರು. ನಾಗಾರ್ಜುನನು ವೇದ ಸಿದ್ಧಾಂತಗಳನ್ನು ನಿರಾಕರಿಸುವ ರೀತಿ ಅವರಿಗೆ ಮನದಟ್ಟಾದ್ದರಿಂದ, ಅವನನ್ನು ಕಾಶ್ಮೀರಕ್ಕೆ ಆಮಂತ್ರಿಸಿದ್ದರು. ಜಿ.ಎಂ.ಡಿ. ಸೂಫಿಯ ಪ್ರಕಾರ, ಅವನ ನಾಗಾಗಳ ಜೊತೆಗಿನ ಸಂಬಂಧದಿಂದಾಗಿಯೇ, ಅವನಿಗೆ ನಾಗಾರ್ಜುನ ಎಂಬ ಹೆಸರು ಬಂತು. ಅವನ ನಾಯಕತ್ವದಲ್ಲೆ, ಕ್ರಿ.ಶ. ೧೦೦ ರಲ್ಲಿ, ಬೌದ್ಧ ಸಿದ್ಧಾಂತದ ನಾಲ್ಕನೇ ಮಹಾಸಭೆ ಶ್ರೀನಗರದ ಸಮೀಪದಲ್ಲಿರುವ ಹರ್ವಾನ್‌ನಲ್ಲಿ ನಡೆಯಿತು. ಅಲ್ಲಿಯೇ ಬೌದ್ಧ ಸಿದ್ಧಾಂತದ ಮಹಾಯಾನ ಮಾರ್ಗ ಆರಂಭಗೊಂಡದ್ದು. ಕಾಶ್ಮೀರದ ನಾಗ-ಪ್ರಾಚೀನ ಬುಡಕಟ್ಟುಗಳ ಚಿಂತನೆಯ ಪ್ರಭಾವದಿಂದಾಗಿ, ಬೌದ್ಧ ಸಿದ್ಧಾಂತ ಪರಿವರ್ತನೆಗೊಂಡು ಕಾಶ್ಮೀರಿ ರೂಪ ಪಡೆಯಿತು. ಒಂದು ರೀತಿಯಲ್ಲಿ ಬೌದ್ಧ ಚಿಂತನೆ ಕಾಶ್ಮೀರೀಕರಣಗೊಂಡ ನಂತರವೇ ಅದನ್ನು ಕಾಶ್ಮೀರಿಗಳು ಸ್ವೀಕರಿಸಿದ್ದು. ಬೌದ್ಧರ ಮಹಾಯಾನ ಪಂಥವೇ ಟಿಬೆಟ್ಟಿನ ಮುಖಾಂತರ ಚೀನಾ ಮತ್ತು ಜಪಾನಿಗೆ ಹರಡಿದ್ದು.



**ಶ್ರೀನಗರದ ಶಂಕರಾಚಾರ್ಯರ ದೇವಾಲಯ**


ಭಾರತದಲ್ಲಿ ಬೌದ್ಧ ಸಿದ್ಧಾಂತ ದುರ್ಬಲವಾಗುತ್ತ ಹೋದಂತೆ ಮತ್ತು ಅದು ಮುಖ್ಯವಾಹಿನಿ ಧರ್ಮಗಳ ಚಿಂತನೆಗಳಲ್ಲಿ ಹಿಂಗಿ ಹೋಗುತ್ತಿದ್ದಂತೆ, ಕಾಶ್ಮೀರದಲ್ಲೂ ಆ ರೀತಿಯ ಪ್ರಕ್ರಿಯೆ ಆರಂಭವಾಯಿತು. ಆದರೆ ಕಾಶ್ಮೀರದಲ್ಲಿ, ಇದು ಪ್ರಜ್ಞಾಪೂರ್ವಕ ಅನುಸಂಧಾನ ರೂಪದಲ್ಲಿ ನಡೆಯಿತು. ಕಾಶ್ಮೀರ ಶೈವತ್ವವನ್ನು ಸ್ವೀಕರಿಸಿತು. ಶಿವ ವೇದಗಳ ದೇವರಲ್ಲ, ಆದರೆ ಅವನು ಆರ್ಯರಿಗಿಂತ ಮುಂಚಿನ ಬುಡಕಟ್ಟಿನವ. ಶ್ರೇಷ್ಠ ಕಾಶ್ಮೀರಿ ತತ್ವಜ್ಞಾನಿ ಅಭಿನವಗುಪ್ತ, ಕ್ರಿ.ಶ. ಒಂದರಿಂದ ಮತ್ತು ಐದನೆಯ ಶತಮಾನದವುಗಳೆಂದು ಹೇಳಲಾಗುವ ಕಾಶ್ಮೀರದ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ಆಗಮಗಳಿಗೆ ವೇದಗಳಿಗಿಂತ, ಕಾಲ ಮತ್ತು ಆಚರಣೆಗಳ ದೃಷ್ಟಿಯಿಂದ, ಹೆಚ್ಚಿನ ಮಹತ್ವವಿತ್ತೆಂದು ಹೇಳುತ್ತಾನೆ. ಕಾಲಾಂತರದಲ್ಲಿ, ವೇದ ಮತ್ತು ಕಾಶ್ಮೀರಿ ಸಂಪ್ರದಾಯಗಳ ನಡುವೆ ಅನುಸಂಧಾನವೇರ್ಪಟ್ಟಿತು. ಆದರೆ, ಕಾಶ್ಮೀರಿ ಧಾರ್ಮಿಕ ಸಾಹಿತ್ಯದಲ್ಲಿ, ವೇದಗಳ ಇಂದ್ರನಿಗಿಂತಲೂ ಶಿವ ಅತಿ ಶ್ರೇಷ್ಠನಾಗಿರುವುದು ಕಂಡು ಬರುತ್ತದೆ. ಉದಾಹರಣೆಗೆ, *ಮಾರ್ಗೇಂದ್ರ ತಂತ್ರ* ಒಂದು ಕಥೆಯನ್ನು ಉಲ್ಲೇಖಿಸುತ್ತದೆ, ಅಲ್ಲಿ ಶಿವ ಪರಮಗುರು ಆಗುತ್ತಾನೆ. ಈ ಶಿವನಿಂದ ಇಂದ್ರ ತಂತ್ರದ ಅತ್ಯುಚ್ಚ ಜ್ಞಾನವನ್ನು ಪಡೆದು ಜಗತ್ತಿಗೆ ತರುತ್ತಾನೆ. ಇಲ್ಲಿ ಇಂದ್ರನನ್ನು ಶಿವನ ಜ್ಞಾನವನ್ನು ತಲುಪಿಸುವ ಕೇವಲ ಒಬ್ಬ ದೂತನ ಮಟ್ಟಕ್ಕೆ ಇಳಿಸಲಾಗಿದೆ. ಪಿ.ಎನ್ ದರ್ಬ್ ಅವರ ಪ್ರಕಾರ, ವೇದಪೂರ್ವ ಕಾಶ್ಮೀರಿಗಳನ್ನು, ಅವರ ಬದುಕಿನ ವಿಶಿಷ್ಟತೆಗಳೊಂದಿಗೆ ವೇದಕಾಲದ ಬೇರೆ ಬೇರೆ ಕಾಲಘಟ್ಟಗಳಲ್ಲಿ ಸಮಾಜದಲ್ಲಿ ಸಂಯೋಜಿಸಿಕೊಳ್ಳಲಾಯಿತು. ಕಟ್ಟಕಡೆಗೆ, ಶ್ರೇಷ್ಠ ಕಾಶ್ಮೀರಿ ತತ್ವಜ್ಞಾನಿಗಳಾದ ವಸುಗುಪ್ತ (ಕ್ರಿ.ಶ. ೮ನೇ ಶತಮಾನ) ಮತ್ತು ಅಭಿನವಗುಪ್ತ(೧೦ನೇ ಶತಮಾನ) ಇವರು ಪ್ರಾದೇಶಿಕ ಧಾರ್ಮಿಕ ನಂಬಿಕೆಗಳನ್ನು ಮತ್ತು ಬೌದ್ಧ ಸಿದ್ಧಾಂತಗಳನ್ನು ಸಂಶ್ಲೇಷಣೆಗೊಳಪಡಿಸಿ ತ್ರಿಕಾ ತತ್ವಜ್ಞಾನವೆಂದು ಕರೆಯಲಾಗುವ ಕಾಶ್ಮೀರಿ ಶೈವ ತತ್ವವನ್ನು ರೂಪಿಸಿದರು. ಇದರಲ್ಲಿ ಬೌದ್ಧ ಸಿದ್ಧಾಂತದ ಕಾಶ್ಮೀರಿ ಹಿಂದೂಗಳ ಅನೇಕ ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಇವತ್ತೂ ಕಂಡುಬರುವ ಬೌದ್ಧ ಪ್ರಭಾವವನ್ನು ಗುರುತಿಸಬಹುದಾಗಿದೆ.

## ಸಂಪ್ರದಾಯಗಳ ಕ್ರೋಢೀಕರಣ

ಜಿ.ಎಂ.ಡಿ. ಸೂಫಿಯ ಪ್ರಕಾರ, ಏಕದೇವೋಪಾಸನೆಯ 'ಕಾಶ್ಮೀರಿ ಶೈವತ್ವ ಇಸ್ಲಾಂಗೆ ತುಂಬಾ ಹತ್ತಿರವಾದದ್ದು.' ಅವನು "ಅನ್'ಲ್ ಹಕ್" (ನಾನೇ ಆ ದೇವರು, ಮತ್ತು ಬೇರಾವ ದೇವರೂ ಇಲ್ಲ.) ಎಂದು ಘೋಷಿಸಿದ ಸುಪ್ರಸಿದ್ಧ ಮುಸ್ಲಿಂ ಅನುಭಾವಿ ಮನ್ಸೂರ್ ಅಲ್ ಹಿಲ್ಲಜ್(ಕ್ರಿ.ಶ. ೮೫೮ ರಿಂದ ೯೨೨)ನ ತತ್ವಗಳ ಜೊತೆ ನಿರ್ದಿಷ್ಟವಾಗಿ ತುಲನೆ ಮಾಡುತ್ತಾನೆ. ಹೀಗಾಗಿ, ಕಾಶ್ಮೀರ, ಇಸ್ಲಾಂಅನ್ನು ನೇತ್ಯಾತ್ಮಕವಾಗಿ ಸ್ವೀಕರಿಸಲಿಲ್ಲ, ಬದಲಿಗೆ ಅದು ಸ್ವೀಕರಿಸಿದ್ದು, ತನ್ನ ಹೆಮ್ಮೆಯ ಅಧ್ಯಾತ್ಮಿಕ ಪರಂಪರೆಯ ಆತ್ಯಂತಿಕ ಪರಿಣಾಮದ ರೂಪದಲ್ಲಿ. ಅದು ಸೋತು, ಎಲ್ಲ ಮುಗಿದುಹೋದ ವ್ಯಕ್ತಿತ್ವವಾಗಿ ಇಸ್ಲಾಂಗೆ ಶರಣಾಗಲಿಲ್ಲ, ಆದರೆ ಅದನ್ನು ಒಬ್ಬ ಸ್ನೇಹಿತನ ಆತ್ಮೀಯ ಅಪ್ಪುಗೆಯೊಂದಿಗೆ ಬರಮಾಡಿಕೊಂಡಿತು. ಇಸ್ಲಾಂ ಕಾಶ್ಮೀರಕ್ಕೆ ಗೆದ್ದವರ ಒಂದು ನಂಬುಗೆಯಾಗಿ ಬರಲಿಲ್ಲ. ಆದ್ದರಿಂದ ಅದು ಯಾರನ್ನೂ ನೋಯಿಸಲಿಲ್ಲ, ಅಥವ ಕಾಶ್ಮೀರದ ಹೆಮ್ಮೆಯನ್ನು ಕೆಣಕಲಿಲ್ಲ. ಹಾಗೇ ಮುಸ್ಲಿಂ ಆಡಳಿತ ಹೊರಗಿನಿಂದ ಆಮದು ಮಾಡಿಕೊಂಡದ್ದು ಅನ್ನಿಸಲಿಲ್ಲ, ಏಕೆಂದರೆ ಅದು ಸಂಭವಿಸಿದ್ದು ಸ್ಥಳೀಯ ಆಳ್ವಿಕೆದಾರನ ಮತಾಂತರದ ಮೂಲಕ. ಕಾಶ್ಮೀರಿ ಜನರ ಸಾಮೂಹಿಕವಾಗಿ ಇಸ್ಲಾಂಗೆ ಮತಾಂತರಗೊಂಡಿದ್ದರ ಹಿಂದೆ ನುಂದ ಋಷಿ ಎಂದೇ ಜನಪ್ರಿಯನಾದ ಕಾಶ್ಮೀರದ ಪಿತೃ ಸಂತನೆನಿಸಿದ ಅಲಮ್‌ದರ್-ಎ-ಕಾಶ್ಮೀರ್ ಷೇಕ್ ನೂರುದ್ದೀನ್ ನೂರಾನಿ(೧೪ನೇ ಶತಮಾನ)ಯವರಂತಹ ಈ ಮಣ್ಣಿನಿಂದ ಹೊಮ್ಮಿದ ಅನನ್ಯ ವ್ಯಕ್ತಿತ್ವದ ಪ್ರಭಾವವಿದೆ. ಈತ ಇಸ್ಲಾಂನ್ನು ಕಾಶ್ಮೀರಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ನುಡಿಗಟ್ಟುಗಳಿಗೆ ಅನುವಾದಿಸಿ, ಒಂದು ಬೃಹತ್ ಭಾವ ಸ್ಫೋಟಕ್ಕೆ ಕಾರಣನಾದ. ರೂಕ್ ನಜ್ಕಿ, ಈತನನ್ನು ಮುಸ್ಲಿಂ ಶೈವವಾದಿ ಎಂದು ಕರೆದಿದ್ದಾರೆ. ಡಾ. ಬಿ.ಎನ್. ಪಂಡಿತ್ ಪ್ರಕಾರ, ಈತನ ಕಾವ್ಯ ಶೈವತ್ವ ಮತ್ತು ಸೂಫಿಸಂನ ಮಿಶ್ರಣವಾಗಿದೆ.

ಇಸ್ಲಾಂ ಪೂರ್ವದ ಕಾಶ್ಮೀರದ ಆಧ್ಯಾತ್ಮಿಕ ಪರಂಪರೆಯ ಪ್ರತಿನಿಧಿಯಾದ ಲಲ್ಲಾ ಡೇಡ್‌ಳ ಆಧ್ಯಾತ್ಮಿಕ ಪುತ್ರನೆಂದು ಘೋಷಿಸಿಕೊಂಡ ನುಂದ್ ಋಷಿ ಅದನ್ನು ಅದರ ಋಷಿ ಪರಂಪರೆಯಂತೆಯೇ (ಸೂಫಿಸಂಅನ್ನು ಕಾಶ್ಮೀರದಲ್ಲಿ ಕರೆಯುವುದು ಹಾಗೆ) ಬೆಳೆಸಿದ. ಅದು "ಕಾಶ್ಮೀರದ ಸ್ವಾತಂತ್ರ್ಯದ ಮೇಲೆ ಅಥವಾ ಮೊದಲಿಗೆ ಅದರ ಸಾಂಸ್ಕೃತಿಕ, ರಾಜಕೀಯ ಪರಿಸ್ಥಿತಿಯ ಮೇಲೆ ಯಾವುದೇ ಪರಿಣಾಮವನ್ನುಂಟು ಮಾಡಲಿಲ್ಲ." (ಸೋಫಿ) ಹಲವು ಸೂಫಿ ವಿದ್ವಾಂಸರು ಕಾಶ್ಮೀರಿ ಇಸ್ಲಾಂನಲ್ಲಿ ಇಸ್ಲಾಂ ಪೂರ್ವ ಪ್ರಭಾವಗಳನ್ನು ಗುರುತಿಸಿದ್ದಾರೆ. ಅಬ್ದುಲ್ಲಾ ಯೂಸೂಫ್ ಅಲಿ ಪ್ರಾಚೀನ ಪವಿತ್ರ ಅವಶೇಷಗಳ ಆರಾಧನೆಯಲ್ಲಿ–ಪ್ರವಾದಿಯ ಕೂದಲನ್ನು ಸಂರಕ್ಷಿಸಿಟ್ಟಿರುವ ಹಜ್ರತ್‌ಬಾಲ್ ಮಸೀದಿಯಂತೆ–ಬೌದ್ಧ ಪ್ರಭಾವದ ಸುಳಿವುಗಳನ್ನು ಕಾಣುತ್ತಾನೆ. ಅದು. ಡಾ. ಅರ್ಥರ್ ನೆವೆ ಗಮನಿಸಿದಂತೆ, "ಕಾಶ್ಮೀರಿ ಮುಸಲ್ಮಾನನು ಹಿಂದೂಗಳ ಮೂರ್ತಿಪೂಜೆಯ ಸಂಪ್ರದಾಯವನ್ನು ಮುಸ್ಲಿಂ ಸ್ಮಾರಕಗಳ ಪೂಜೆಯಾಗಿ ಮಾರ್ಪಡಿಸಿಕೊಂಡಿದ್ದಾನೆ. ಅದೇ ರೀತಿಯಲ್ಲಿ, ಮುಸ್ಲಿಂ ಸಂತರನ್ನು ಹಿಂದೂಗಳ ದೇವತೆ ಮತ್ತು ಯಕ್ಷಿಣಿಯರಂತೆ ಆರಾಧಿಸಲಾಗುತ್ತಿದೆ." ಹಾಗಾಗಿ ಇಸ್ಲಾಂ, ಸೂಪಿಸಂ ರೂಪದಲ್ಲಿ ಕಾಶ್ಮೀರಕ್ಕೆ ಬಂದದ್ದು, ಬೇರೆಡೆ ನಡೆದಂತೆ ಪರಂಪರೆಯ ಸಂಪ್ರದಾಯದ ವಿನಾಶಕನಾಗಿ ಅಲ್ಲ; ಬದಲಿಗೆ ಅದರ ಸಂರಕ್ಷಕನಾಗಿ, ಸಂಘಟಕನಾಗಿ ಮತ್ತು ಶಾಶ್ವತವಾಗಿ ಕಾಪಾಡುವವನಾಗಿ. ಇಸ್ಲಾಂ, ಕಾಶ್ಮೀರಿ ಪರಂಪರೆಯಲ್ಲಿ ಬೇರುಬಿಟ್ಟಿದೆ ಮತ್ತು ಈ ಪರಂಪರೆ ಇಸ್ಲಾಮೀ ಚೈತನ್ಯವನ್ನು ಆವಾಹಿಸಿಕೊಂಡಿದೆ ಎಂಬ ಸಂಗತಿ ಕಾಶ್ಮೀರಿ ಜನ ಪ್ರಾದೇಶಿಕ ರಾಷ್ಟ್ರೀಯತೆಗೆ ಬದ್ಧವಾಗಿದ್ದರೂ ಲೋಕವೈಶಾಲ್ಯತೆಯೊಡನೆಯೂ ಹೊಂದಿಕೊಳ್ಳುವ ಸಾಮರ್ಥ್ಯ ನೀಡಿದೆ. ಕಾಶ್ಮೀರಿ ಮುಸ್ಲಿಂ, ಕಾಶ್ಮೀರಿಯಾಗಿ, ಜೊತೆಗೆ ಮುಸ್ಲಿಮನಾಗಿಯೂ. ಉಳಿದಿದ್ದು ಅವನು ಯಾವತ್ತೂ ದ್ವಂದ್ವ ವ್ಯಕ್ತಿತ್ವದ ಮನೋವಿಹ್ವಲತೆಯಿಂದ ನರಳುವುದಿಲ್ಲ. ಬೇರೆಡೆಯಲ್ಲಾಗುವಂತೆ ಇಸ್ಲಾಮೀ ಸಂಬಂಧಗಳು ಮತ್ತು ಸ್ಥಳೀಯ ದೇಶಭಕ್ತಿ ಮುಸ್ಲಿಮನೊಬ್ಬನನ್ನು ಕಾಡುವಂತೆ ಅವನನ್ನು ಕಾಡಿ ವಿಚಲಿತಗೊಳಿಸುವುದಿಲ್ಲ.

ಕಾಶ್ಮೀರ, ಯಾವಾಗಲೂ ಹಲವು ವಿಚಾರಗಳ ಮತ್ತು ಜನಾಂಗಗಳ ಕುದಿಯುವ ಮಡಕೆಯಾಗಿದೆ. ಎಲ್ಲಾ ಹೊಸ ಮತ, ನಂಬಿಕೆಗಳನ್ನು ಅದು ವಿವೇಚನೆಯೊಂದಿಗೆ ಸ್ವೀಕರಿಸಿದೆ. ಹಾಗೆ ಮಾಡುವಾಗ, ತನ್ನ ಬಳಿ ಈ ಮೊದಲೇ ಪಡೆದವುಗಳನ್ನು ದೂರ ಮಾಡದೆ, ತನ್ನದೇ ಕಾಣ್ಕೆಗಳೊಂದಿಗೆ ಅವುಗಳನ್ನು ಶ್ರೀಮಂತಗೊಳಿಸಿದೆ. ವಿದ್ವಾಂಸ ಸೋಫಿ ಗಮನಿಸಿದಂತೆ, "ಬುದ್ಧ ಮತ, ವೇದಾಂತದ ಬೋಧನೆಗಳು, ಇಸ್ಲಾಂನ ಪವಾಡಗಳು ಒಂದರ ನಂತರ ಇನ್ನೊಂದರಂತೆ ಕಾಶ್ಮೀರದಲ್ಲಿ ಸುಮಧುರ ಸಹಬಾಳ್ವೆಯ



**ಶ್ರೀನಗರದ ಹಜ್ಜರತ್‌ಬಾಲ್ ಮಸೀದಿ**

ಬದುಕಿನ ಎರಕವೊಂದನ್ನು ರೂಪಿಸಿವೆ." ಅದೇ ರೀತಿಯಲ್ಲಿ, ತನ್ನ ಏಕರೂಪದ ಸಂಸ್ಕೃತಿ ಮತ್ತು ಆವೃತವಾದ ಭೌಗೋಳಿಕತೆಗಳಿಂದಾಗಿ ಪ್ರಾಚೀನ ಕಾಲದಿಂದಲೂ ಕಾಶ್ಮೀರಕ್ಕೆ ಬಂದ ಎಲ್ಲಾ ಜನಾಂಗಳೂ ಸಂಮಿಶ್ರಗೊಂಡು, ಬೆರೆತು ಅವುಗಳ ಗುರುತುಗಳೆಲ್ಲ ಒಂದಾಗಿ, ಒಂದು ಅಖಂಡತೆ ಸೃಷ್ಟಿಯಾಗಿದೆ.

**ಸಾಧನೆಗಳು**

ಒಂದು ಕಾಲಘಟ್ಟದಲ್ಲಿ, ಕಾಶ್ಮೀರ "ಅನೇಕ ನಾಗರಿಕತೆಗಳ ಮತ್ತು ಈ ನೈಸರ್ಗಿಕ ವಿಹಾರ ಸ್ಥಳದಲ್ಲಿ ಬಂದು ನೆಲೆಸಿದ ಸಮುದಾಯಗಳ ಪ್ರಭಾವಗಳ ಸಂಸ್ಕರಣೆಯ ಕೇಂದ್ರವಾಗಿತ್ತು." ಈ ರೂಪದಲ್ಲಿ ಅದು ಭಾರತದ ಸಂಸ್ಕೃತಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದೆ. ಭಾರತದೊಳಗೆ ಅದರ ಸ್ಥಾನ ಯೂರೋಪಿನ ನಾಗರಿಕತೆಯಲ್ಲಿ ಪ್ರಾಚೀನ ಗ್ರೀಸ್‌ನಂತೆ ಇತ್ತು. ಅದು ಭಾರತದ ಸಂಸ್ಕೃತಿ ಮತ್ತು ಜ್ಞಾನ ಸಾಧನೆಯ ಅತಿ ದೊಡ್ಡ ಪೀಠವಾಗಿತ್ತು. ಜವಾಹರಲಾಲ್ ನೆಹರೂರವರ ಮಾತುಗಳಲ್ಲಿ ಹೇಳುವುದಾರೆ, "ಸುಮಾರು ೨೦೦೦ ವರ್ಷಗಳ ಕಾಲ ದೇಶದ ಬೌದ್ಧಿಕ ಕಾರ್ಯಕ್ಷೇತ್ರದ ಅಧಿಪತ್ಯವನ್ನು ಅದು ವಹಿಸಿಕೊಂಡಿತ್ತು." ಕಾಶ್ಮೀರದ ರಾಜಕೀಯ ಸಾಧನೆಗಳಲ್ಲಿ ಉಲ್ಲೇಖಿಸಬಹುದಾದದ್ದು, ಲಲಿತಾದಿತ್ಯ–ಮುಕ್ತಪದಿಯ(ಕ್ರಿ.ಶ. ೭೨೪–೭೬೦) ದಿಗ್ವಿಜಯ. ಅವನನ್ನು ಶ್ರೇಷ್ಠ ಕಾಶ್ಮೀರಿ ಇತಿಹಾಸ ತಜ್ಞ ಕಲ್ಹಣ ಬಣ್ಣಿಸುವುದು, "ಈ ವಿಶ್ವ ಚಕ್ರವರ್ತಿ ಸೂರ್ಯನಂತೆ ಜಗತ್ತನ್ನೇ ಸುತ್ತುತ್ತಾನೆ." ಸೋಫಿಯ ಪ್ರಕಾರ, "ಅವನು ಈ ದೇಶದ ವೈಭವವನ್ನು ಹಿಂದೆ ಎಂದೂ ಕಾಣದಷ್ಟು ಉತ್ತುಂಗಕ್ಕೆ ಕೊಂಡೊಯ್ದವನು." ಮೊಹಿಬ್ಬುಲ್ ಹುಸನ್ ಪ್ರಕಾರ, "ಭಾರತದೆಲ್ಲೆಡೆಯಿಂದ ಬಂದ ವಿದ್ವಾಂಸರ ಸಮೂಹವೇ ಅವನ ದರ್ಬಾರಿನಲ್ಲಿತ್ತು."

ಕಾಶ್ಮೀರಿಗಳು ತಮ್ಮ ಇತಿಹಾಸದಲ್ಲಿ ಅಂಥದ್ದೇ ಇನ್ನೊಂದು ಸುವರ್ಣಾವಧಿಯನ್ನು ಹೊಂದಿದ್ದರೆ, ಅದು ಮುಸ್ಲಿಂ ದೊರೆ ಜೈನುಲ್–ಅಬ್ದಿನ್, ಜನರ ಬಾಯಲ್ಲಿ ಬಾದ್ ಶಾ (ಮಹಾರಾಜ) ಎಂದು ಕರೆಸಿಕೊಳ್ಳುತ್ತಿದ್ದವನ ಆಳ್ವಿಕೆಯ ಕಾಲ (೧೪೭೦ ರಿಂದ ೧೪೭೦). "ಅದು ಕಾಶ್ಮೀರ ಉನ್ನತಿಯ ತುತ್ತತುದಿ ತಲುಪಿದ ಕಾಲ, ಅದು ಬೇರೆ ಇನ್ನಾವ ಸ್ವತಂತ್ರ ಕಾಶ್ಮೀರಿ ದೊರೆಯೂ ತಲುಪಲಾಗದ ಶೃಂಗ." ರೊಡ್ಜೆರ್‌ನ ಮಾತುಗಳಲ್ಲಿ ಹೇಳುವುದಾದರೆ, "ಅವನು ಇಂಗ್ಲೆಂಡಿಗಿಂತಲೂ ೩೦೦ ವರ್ಷ ಮುಂದಿದ್ದನು." ಜೈನುಲ್–ಅಬ್ದಿನ್‌ನು ಚಕ್ರವರ್ತಿ ಅಕ್ಬರ್‌ನಲ್ಲಿಲ್ಲದಿದ್ದ ಜ್ಞಾನ ಸಾಧನ ಮತ್ತು ಸಂಪತ್ತುಗಳನ್ನು ಹೊಂದಿದ್ದ. ಅವನ ಅಭಿಪ್ರಾಯಗಳು ಆ ಚಕ್ರವರ್ತಿಗಿಂತಲೂ ಹೆಚ್ಚಿನ ಅರಿವನ್ನು ಹೊಂದಿದ್ದವು. ಅವನು ಅಕ್ಬರ್ ಕೇವಲ ಬೋಧಿಸುತ್ತಿದ್ದ ತಾಳ್ಮೆ ಮತ್ತು ಸಹಿಷ್ಣುತೆಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದನು." ಆಧುನಿಕ ಕಾಲದ ಶ್ರೇಷ್ಠ ಕಾಶ್ಮೀರಿ ಕವಿ ಮೆಹ್‌ಜುರ್ ಪ್ರಕಾರ, ಅವನಿಂದ (ಬಾದ್ ಶಾ) ಅಕ್ಬರ್ ದೇಶವನ್ನು ಆಳುವ ಕಲೆಯನ್ನು ಕಲಿತುಕೊಂಡ. ಆದರೆ ಅದೇ ಅಕ್ಬರ್‌ನಿಂದಲೇ, ೨೫೦ ವರ್ಷಗಳಿಗಿಂತಲೂ ದೀರ್ಘವಾದ ಸ್ಥಳೀಯ ಕಾಶ್ಮೀರಿ ಮುಸ್ಲಿಂ ಆಳ್ವಿಕೆಗೆ ಅಂತ್ಯ ಕಂಡದ್ದು ಕೂಡಾ.

ಕಾಶ್ಮೀರದ ಇತಿಹಾಸದ ನಿರ್ಣಾಯಕ ಘಟ್ಟ ಉಪಖಂಡ ನಂಬಿರುವಂತೆ ಮುಸ್ಲಿಂ ಆಳ್ವಿಕೆಯ ಆರಂಭವಲ್ಲ; ಬದಲಿಗೆ ಆಳ್ವಿಕೆ ಕಾಶ್ಮೀರಿಗಳಿಂದ ಕಾಶ್ಮೀರೇತರರ ಕೈಗೆ ಬದಲಾದ ಕಾಲ. ಕಾಶ್ಮೀರ ೧೬೬ ವರ್ಷಗಳ ಕಾಲ ಮುಘಲ್ ಚಕ್ರಾಧಿಪತ್ಯದ ಭಾಗವಾಗಿ ಉಳಿದಿತ್ತು. ಅದು ನಿಜಕ್ಕೂ ಭಾರತದ ಇತಿಹಾಸದಲ್ಲಿ ವೈಭವಪೂರಿತ ಕಾಲ. ಕೆಲವು ವಿಚಾರಗಳಲ್ಲಿ, ಕಾಶ್ಮೀರ ಹೆಚ್ಚಿನ ಲೌಕಿಕ ಪ್ರಗತಿ ಸಾಧಿಸಿದ ಕಾಲ. ಆದರೆ, ಕಾಶ್ಮೀರಿ ಆಳ್ವಿಕೆಯಲ್ಲಿ–ಅದು ಮುಸ್ಲಿಮ್‌ರದೇ ಆಗಿರಲಿ ಅಥವಾ ಮುಸ್ಲಿಮೇತರರದ್ದೇ ಆಗಿರಲಿ–ಕಾಶ್ಮೀರಿಗಳಲ್ಲಿದ್ದ ಹೆಮ್ಮೆ, ಆತ್ಮವಿಶ್ವಾಸಗಳು ಮುಘಲರ ಆಳ್ವಿಕೆಯ ಕಾಲದಲ್ಲಿ ಇರಲಿಲ್ಲ. ಒಂದು ಜನಪ್ರಿಯ ನಂಬಿಕೆಯ ಪ್ರಕಾರ ಕಾಶ್ಮೀರಿಗಳು ಸೇನೆಗೆ ಸೇರುವುದನ್ನು ಮುಘಲರು ನಿರ್ಬಂಧಿಸಿದ್ದು, ಕಾಶ್ಮೀರದಲ್ಲಿ ಯೋಧ ಸಂತತಿ ಅವನತಿ ಹೊಂದಲು ಕಾರಣವಾಯಿತು. ಲೆ॥ ನೆವೆಲ್ ಪ್ರಕಾರ, "ಬಹುಶಃ ನಿರಂತರ ನಡೆದ ವ್ಯವಸ್ಥಿತ ದಬ್ಬಾಳಿಕೆ ಮತ್ತು ಚೈತನ್ಯ ಕುಗ್ಗಿಸುವ ದಮನಕಾರಿ ಕ್ರಮಗಳು ಒಂದು ಕಾಲದಲ್ಲಿ ಶೌರ್ಯ ಸ್ಥೈರ್ಯಗಳಿಗೆ ಹೆಸರಾಗಿದ್ದ ಜನಾಂಗದ ಗುಣ ಲಕ್ಷಣಗಳಲ್ಲಿನ ಬದಲಾವಣೆಗೆ ಕಾರಣವಾಗಿರಬೇಕು."



ಐತಿಹಾಸಿಕ ಶಾಲಿಮಾರ್ ಉದ್ಯಾನವನ

೧೭೫೨ರಲ್ಲಿ ಅಹಮದ್ ಶಾ ದುರ್ರಾನಿ ಅಫ್ಘಾನಿಸ್ತಾನಕ್ಕೆ ಕಾಶ್ಮೀರವನ್ನು ಸೇರಿಸುತ್ತಿದ್ದಂತೆಯೇ, ಕಾಶ್ಮೀರದಲ್ಲಿ ಮುಘಲರ ಆಳ್ವಿಕೆ ಕೊನೆಗೊಂಡಿತು. ಹೆರಾತ್, ಕಂದಹಾರ್ ಮತ್ತು ಕಾಬೂಲ್‌ನಿಂದ ನಡೆಸಿದ ಆಳ್ವಿಕೆ, ಡೆಲ್ಲಿ ಮತ್ತು ಆಗ್ರಾದಿಂದ ನಡೆಸಿದ ಆಳ್ವಿಕೆಗಿಂತಲೂ ಹೆಚ್ಚು ಕೆಟ್ಟದ್ದಾಗಿತ್ತು. ಸೋಫಿ ಅದಕ್ಕೆ ಅಫ್ಘನ್ನರ ಮೂರ್ಖ ಆಡಳಿತ, ದುರಾಶೆ ಮತ್ತು ಬಲವಂತದ ಸುಲಿಗೆ ಕಾರಣವೆನ್ನುತ್ತಾನೆ. ಅವರ ಅಸಹಿಷ್ಣುತೆ ಮತ್ತು ಸೂರೆಗಳಿಂದಾಗಿ ತಮ್ಮ ಹಿರೀಕರು ನೋವುಂಡದ್ದು, ಈಗಲೂ ಈ ತಲೆಮಾರಿನವರ ಸ್ಮರಣೆಯಲ್ಲಿದೆ. ೬೭ ವರ್ಷಗಳ ಅಫ್ಘನ್ ಆಳ್ವಿಕೆಯ ನಂತರ, ೨೭ ವರ್ಷಗಳ ಕಾಲ, ಪಂಜಾಬಿನ ಸಿಖ್ ಆಳ್ವಿಕೆದಾರ ಮಹಾರಾಜ ರಣ್‌ಜಿತ್ ಸಿಂಗ್ ಆಡಳಿತ ಮತ್ತು ಮುಂದೆ ಸುಮಾರು ೧೦೦ ವರ್ಷಗಳ ಕಾಲ, ಜಮ್ಮುವಿನ ಡೋಗ್ರಾ ಕುಟುಂಬ ಕಾಶ್ಮೀರವನ್ನು ಆಳಿತು. ಕಾಶ್ಮೀರಿಗಳ ಅಭಿಪ್ರಾಯದಲ್ಲಿ, ೧೫೮೬ ರಿಂದ ೧೯೪೭ರವರೆಗಿನ ಇಡೀ ಅವಧಿ ಹೊರಗಿನವರ ಆಳ್ವಿಕೆಯೇ–ಆಳಿದವನು ಹಿಂದೂ, ಮುಸ್ಲಿಂ ಅಥವ ಸಿಖ್ ಆಗಿದ್ದರೂ ಕೂಡ. ಕಾಶ್ಮೀರದಲ್ಲಿ ಸಂಘಟಿತ ಆಧುನಿಕ ರಾಜಕೀಯ ಆಂದೋಲನಗಳು ಆರಂಭವಾದದ್ದು ೧೯೩೧ರಲ್ಲಿ ಮತ್ತು ಕೊನೆಗೊಂಡದ್ದು ೧೯೪೬ರ 'ಕಾಶ್ಮೀರ ಬಿಟ್ಟು ತೊಲಗಿ' ಆಂದೋಲನದಲ್ಲಿ. ಅದು ನಿರ್ದಿಷ್ಟವಾಗಿ ಕೊನೆಯ ಆಳ್ವಿಕೆದಾರ ಮಹಾರಾಜ ಹರಿಸಿಂಗ್ ಅವರನ್ನು ಕುರಿತಾಗಿದ್ದರೂ, ತಮ್ಮದೇ ಆದ ಅಸ್ಮಿತೆ ಮತ್ತು ಸ್ವಯಮಾಡಳಿತದ ಪ್ರೇರಣೆಯೊಂದು ೧೫೮೬ರಲ್ಲಿ ಆರಂಭವಾಗಿತ್ತು ಎಂದು ಅದರ ಮುಖಂಡರು ಗುರುತಿಸುತ್ತಾರೆ.

–೨–

ಈ ಮೇಲೆ ನಿರೂಪಿಸಲಾದ ವಿಶಾಲ ಭೌಗೋಳಿಕೆ, ಜನಾಂಗೀಯ ಮತ್ತು ರಾಜಕೀಯ ಸಂಗತಿ–ಸಂದರ್ಭಗಳ ಅಸಾಮಾನ್ಯ ಕಲಸುಮೇಲೋಗರ ನಿಜಕ್ಕೂ ಈ ಆಧುನಿಕ ಕಾಲದಲ್ಲಿ ಅಲ್ಲಿನ ಜನರನ್ನು ತಮ್ಮದೇ ಆದ ಅಸ್ಮಿತೆಯನ್ನು ಕಂಡುಕೊಳ್ಳಲು ಹಂಬಲಿಸುವಂತೆ ಮಾಡಿರುವುದರಲ್ಲಿ ಆಶ್ಚರ್ಯವೇನಿದೆ? ನಲವತ್ತರ ದಶಕದಲ್ಲಿ ಅವಿಭಜಿತ ದೇಶದಲ್ಲಿ ಯಾರನ್ನು ಮುಸ್ಲಿಂ ರಾಷ್ಟ್ರೀಯವಾದಿಗಳೆಂದು ಕರೆಯಲಾಗುತ್ತಿತ್ತೋ ಅವರ ಭದ್ರಕೋಟೆಗಳನ್ನು ಛಿದ್ರಮಾಡಿದ ಮುಸ್ಲಿಂ ಸಂಘಟನೆಯ ಪ್ರವೃತ್ತಿಯಾಗಲೀ ಅಥವಾ ಹೆಚ್ಚೂ ಕಡಿಮೆ ಮತೀಯ ಆಧಾರದ ಮೇಲೆ ನಡೆದ ರಾಷ್ಟ್ರ ವಿಭಜನೆಯ ನಂತರ ಉದಯಾವಾದ ಪಾಕಿಸ್ತಾನ ಎಂಬ ತಡೆದುಕೊಳ್ಳಲಾಗದ ಆಕರ್ಷಣೆಯಾಗಲೀ ಅಸ್ಮಿತೆಯ ಈ ಹಂಬಲಿಕೆಯನ್ನು ದುರ್ಬಲಗೊಳಿಸಲಾಗಲಿಲ್ಲ.

ಹಿಂದೂ ಮಹಾರಾಜನೊಬ್ಬನ ವಿರುದ್ಧ ಕಾಶ್ಮೀರಿ ಜನರು ನಡೆಸಿದ ಹೋರಾಟಕ್ಕೆ ಕಾಂಗ್ರೆಸ್ ನೀಡಿದ ಬೆಂಬಲ ಮತ್ತು ಅದರಲ್ಲಿ ಅದು ವಹಿಸಿದ ಪಾತ್ರ ಮತ್ತು ಮುಸ್ಲಿಂ ಲೀಗ್‌ನಿಂದ ನಡೆದ ಇದರ ಬಹಿರಂಗ ಖಂಡನೆ ಕಾಶ್ಮೀರಿ ಜನರ ಮತ್ತು ಕಾಂಗ್ರೆಸ್ ನಡುವೆ ಒಂದು ಆಳವಾದ ತಾತ್ವಿಕ ಸಂಬಂಧ ಸ್ಥಾಪಿತವಾಗಲು ಕಾರಣವಾಯಿತು. ಮೇಲಾಗಿ, ರಾಜಾಡಳಿತದ ರಾಜ್ಯವೊಂದು ಯಾವ ರಾಷ್ಟ್ರಕ್ಕೆ ಸೇರಬೇಕೆಂಬ ಆಯ್ಕೆಯ ಹಕ್ಕಿರುವುದು ಅದರ ಜನತೆಗೇ ಹೊರತು ಅದರ ರಾಜನಿಗಲ್ಲ ಎಂದು



**ಕಾಶ್ಮೀರದ ವಿವಿಧ ಮುಖಗಳು**

ನೆಹರೂ ಮತ್ತು ಗಾಂಧಿ ಘೋಷಿಸಿದರೆ, ಪಾಕಿಸ್ತಾನದ ನಾಯಕರು ಅದು ರಾಜರ ಪರಮಾಧಿಕಾರಕ್ಕೆ ಸೇರಿದ ಆಜನ್ಮಸಿದ್ಧ ಹಕ್ಕೆಂದು ಪ್ರತಿಪಾದಿಸಿದರು. ಇಂತಹ ನಿಲುವು ಮತ್ತು ಬಲಪ್ರಯೋಗದ ಮೂಲಕ ಕಾಶ್ಮೀರವನ್ನು ತನ್ನ ಜೊತೆ ಸೇರಿಸಿಕೊಳ್ಳಲು ಆದಿ ಬುಡಕಟ್ಟು ಸಮುದಾಯಗಳ ಆಕ್ರಮಣಕ್ಕೆ ನೆರವು ನೀಡಿ ನಂತರ ಅದಕ್ಕೆ ತನ್ನ ಸೇನಾ ಬೆಂಬಲ ನೀಡುವ ಮೂಲಕ ಪಾಕಿಸ್ತಾನ ನಡೆಸಿದ ನಿರಂತರ ಪ್ರಯತ್ನಗಳು ಆತ್ಮಗೌರವವುಳ್ಳ ಕಾಶ್ಮೀರಿ ಜನರಿಗೆ ಮತ್ತಷ್ಟು ತೀವ್ರ ನೋವುಂಟು ಮಾಡಿದವು.

೧೯೪೭ರಲ್ಲಿ, ಭಾರತವನ್ನು ಒಪ್ಪಿಕೊಳ್ಳುವ ಜನಪ್ರಿಯ ಕಾಶ್ಮೀರಿ ನಾಯಕತ್ವದ ತೀರ್ಮಾನಕ್ಕೆ ಕಾಶ್ಮೀರಿ ಜನತೆ ಒಕ್ಕೊರಲಿನಿಂದ ಅಪಾರ ಬೆಂಬಲ ಸೂಚಿಸಿತು. ಹಾಗೆ ನೋಡಿದರೆ, ಹಲವು ವಿಚಾರಗಳು, ಸಂಸ್ಕೃತಿಗಳು ಮತ್ತು ಜನಾಂಗಗಳು ಮಿಳಿತವಾಗಿ ನಿರಂತರತೆ, ಬದಲಾವಣೆ ಮತ್ತು ಸಂಯೋಜನೆಗಳ ಪರಸ್ಪರ ಅನುಸಂಧಾನದ ಅನನ್ಯ ಪ್ರತಿಭಾಶಕ್ತಿಯ ಮೂಲಕ ೫೦೦೦ ಸಾವಿರ ವರ್ಷಗಳ ಕಾಲಪ್ರವಾಹದಲ್ಲಿ ಸಂಘಟಿಸಿಕೊಂಡ ಆಳದ ವಿಶಿಷ್ಟ ಅಸ್ಮಿತೆ ಮತ್ತು ಪರಂಪರೆಯನ್ನು ಸಂರಕ್ಷಿಸಿಕೊಳ್ಳಲು ಅದಕ್ಕಿದ್ದುದು ಇದೊಂದೇ ದಾರಿ ಕೂಡ.

ಒಂದು ಸಂಪ್ರದಾಯ ಉಳಿದು ಬೆಳೆಯಬೇಕಾದರೆ, ಅದು ಬದಲಾವಣೆಯನ್ನು ಒಳಗೊಳ್ಳುತ್ತಲೇ ಹೋಗಬೇಕಾಗುತ್ತದೆ. ಕಾಶ್ಮೀರಿ ಸಂಪ್ರದಾಯಗಳು ಉಳಿಯುವುದಕ್ಕಾಗಿ ವಿಕಾಸಗೊಳ್ಳುತ್ತಲೇ ಹೋಗಿವೆ. ನಿರಂತರತೆ ಮತ್ತು ಬದಲಾವಣೆ ಪರಸ್ಪರ ಸಜೀವ ಸಂಬಂಧವುಳ್ಳವು. ಇಂದು ಕಾಶ್ಮೀರಕ್ಕೆ ಬೇಕಾದ ಅತಿ ಮುಖ್ಯವಾದ ಬದಲಾವಣೆಯೆಂದರೆ, ಈವರೆಗೂ ಸಾಧ್ಯವಾಗದಿರುವ ಸಂಗತಿಯಾದ ಭಿನ್ನಾಭಿಪ್ರಾಯಕ್ಕೆ ಜಾಗ ಮಾಡಿಕೊಡುವುದು. ನಾಗಪಂಥ ಸಾರಾಸಗಟಾಗಿ ಬೌದ್ಧ ಮತಕ್ಕೆ ಮತಾಂತರಗೊಂಡ ಹಾಗೇ ಅದು ನಂತರ ಅದೇ ರೀತಿಯಲ್ಲಿ ಶೈವ ತತ್ವವನ್ನು ಅಪ್ಪಿಕೊಂಡಿತು. ಕಾಶ್ಮೀರಿಗಳು ಮುಸ್ಲಿಮರಾಗಿದ್ದೂ ಹಾಗೇ, ಹೆಚ್ಚೂ ಕಡಿಮೆ ಸಾರಾಸಗಟಾಗಿಗಿಯೇ–ಶೇ. ೯೫ರಷ್ಟು. ಕಾಶ್ಮೀರಿಗಳು ತಮ್ಮ ಪರಂಪರೆಯ ಸಂಪ್ರದಾಯದ ಸಾರವನ್ನು ಉಳಿಸಿಕೊಂಡರೂ ಸಹಿತ ಮಾರ್ಪಾಡುಗಳಿಗೂ ಅಲ್ಲಿ ಅವಕಾಶ ಮಾಡಿಕೊಳ್ಳಲಾಯಿತು.

ವಿಭಿನ್ನ ಆಯ್ಕೆಗಳನ್ನು ಎದುರಿಸುತ್ತಿರುವ–ಬಹುಶಃ ಮೊತ್ತಮೊದಲಿಗೆ–ಇಂದಿನ ಸಂದರ್ಭದಲ್ಲಿ ಕಾಶ್ಮೀರದ ಉಳಿವು ನಿಂತಿರುವುದು ಭಿನ್ನಾಭಿಪ್ರಾಯಕ್ಕೆ ಗೌರವ ನೀಡುವ ಮನೋಭಾವ ಬೆಳೆಸಿಕೊಳ್ಳುವುದರ ಮೇಲೆ. ಕಾಶ್ಮೀರಿ ಪಂಡಿತರಿಲ್ಲದೆ, ಕಾಶ್ಮೀರಿ ಅಸ್ಮಿತೆಯೇ ಅಪೂರ್ಣವಾಗುತ್ತದೆ ಎನ್ನುವುದನ್ನು ಕಾಶ್ಮೀರಿಗಳು, ಅದರಲ್ಲೂ ನಿರ್ದಿಷ್ಟವಾಗಿ, ಮುಸಲ್ಮಾನರು ತಿಳಿದುಕೊಳ್ಳಬೇಕಾಗಿದೆ. ಕೇವಲ ಶೇ. ೫ರಷ್ಟು ಇರುವ ಕಾಶ್ಮೀರಿ ಪಂಡಿತರು ೧೯೯೦ರಲ್ಲಿ ಸಾರಾಸಗಟಾಗಿ ವಲಸೆ ಹೋದರೂ, ಅದು ಅತ್ಯಂತ ಅಲ್ಪ ಪ್ರಮಾಣದ ಸಂಖ್ಯೆ ಅನ್ನಿಸಿದರೂ, ಅವರು ಅತಿ ಮಹತ್ವದ, ಕಾಶ್ಮೀರಿ ಅಸ್ಮಿತೆಯ ಭಾಗವಾಗಿದ್ದವರು ಎನ್ನುವುದನ್ನು ಮರೆಯುವಂತಿಲ್ಲ. ಇದಲ್ಲದೆ, ಕಾಶ್ಮೀರಿಗಳ ಬೌದ್ಧಿಕತೆ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದವರು.

ವಾಸ್ತವಿಕ ಸಂಗತಿಯೆಂದರೆ, ಕಾಶ್ಮೀರಿ ಬುದ್ಧಿಜೀವಿಗಳಲ್ಲಿ, ನಾಯಕರುಗಳಲ್ಲಿ ಜಮ್ಮುವಿನ ಐತಿಹಾಸಿಕ ವೀರರ ಬಗ್ಗೆ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ, ಜಹಗೀರ್‌ದಾರಿ ಪದ್ಧತಿ ಮತ್ತು ದಬ್ಬಾಳಿಕೆಯ ವಿರುದ್ಧದ ಆಂದೋಲನಗಳ ಬಗ್ಗೆ, ಸೂಫಿಗಳ ಬಗ್ಗೆ, ಸಂತರ ಬಗ್ಗೆ, ಶ್ರೇಷ್ಠ ಕಲೆ ಮತ್ತು ಸಂಗೀತದ ಗುರುಗಳ ಬಗ್ಗೆ ಬಹುದೊಡ್ಡ ಉಪೇಕ್ಷೆಯಿದೆ. ಜಮ್ಮುವಿನಲ್ಲಿ ವಾಸಿಸುವ ಡೋಗ್ರಾಗಳು, ಗುಜ್ಜರರು ಮತ್ತು ಪಹರಿ ಸಮುದಾಯಗಳ ನಡುವೆ ಭಾಷೆಯ ಸಂಬಂಧದಿಂದಾಗಿ ಪರಸ್ಪರ ಉತ್ತಮ ಬಾಂಧವ್ಯ ಇದೆ. ಎಲ್ಲ ಗುಜ್ಜರರು ಈ ರಾಜ್ಯದಲ್ಲಿ ಮುಸಲ್ಮಾನರಾಗಿದ್ದು ಅವರೆಲ್ಲ, ತಮ್ಮ ಪುರಾತನತೆಯನ್ನು ಶ್ರೀ ಕೃಷ್ಣನ ಕಾಲದಲ್ಲಿ ಗುರುತಿಸಿಕೊಳ್ಳುತ್ತಾರೆ. ಮತ್ತು ಉತ್ತರ ಭಾರತದಲ್ಲಿ ಮಹಾ ಸಾಮ್ರಾಜ್ಯಗಳನ್ನು ನಿರ್ಮಿಸಿದ್ದಾಗಿ ಹೇಳಿಕೊಳ್ಳುತ್ತಾರೆ. ಅವರಲ್ಲಿ ಶ್ರೀಮಂತವಾದ ಜಾನಪದ ಸಾಹಿತ್ಯವಿದೆ. ಹಿಂದೂ ಮತ್ತು ಮುಸ್ಲಿಮರಿಬ್ಬರೂ ಇರುವ ಪಹರಿ ಜನಾಂಗ ತಮ್ಮ ಯುದ್ಧ ಕೌಶಲ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತಾರೆ. ಇವರು ಕಾಶ್ಮೀರ ರಾಜ್ಯದ ಭಾರತ ಮತ್ತು ಪಾಕಿಸ್ತಾನ ಭಾಗಗಳನ್ನು ವಿಭಜಿಸುವ ಗಡಿ ನಿಯಂತ್ರಣ ರೇಖೆಯ ಎರಡೂ ಬದಿಗಳಲ್ಲಿದ್ದಾರೆ.


ದುರದೃಷ್ಟವಶಾತ್, ಜಮ್ಮು ಪ್ರಾಂತ್ಯ ಕಾಶ್ಮೀರದ ಹಾಗೆ ತನ್ನ ಇತಿಹಾಸವನ್ನು ದಾಖಲಿಸಲು ವಿದೇಶಗಳಿಂದ ಇಲ್ಲವೆ ಭಾರತದಿಂದ ವಿದ್ವಾಂಸರ ಸಮೂಹವನ್ನು ಆಕರ್ಷಿಸಲಿಲ್ಲ. ದೊರೆತಿರುವುದು ಮತ್ತು ಸಂರಕ್ಷಿಸಿರುವುದೆಲ್ಲ ಜಾನಪದ ಸಾಹಿತ್ಯವೇ ಆಗಿದೆ. ಇದೇ ಮಾತು ಲಡಾಖ್ ಪ್ರಾಂತ್ಯಕ್ಕೂ ಅನ್ವಯಿಸುತ್ತದೆ. ಲಡಾಖ್, ಉನ್ನತ ಹಿಮಾಲಯ ಶಿಖರ ಶ್ರೇಣಿಯಲ್ಲಿನ ಪ್ರಾಚೀನ ಮತ್ತು ಭಿನ್ನ ಜನಾಂಗದ ವಾಸ ಪ್ರದೇಶ. ಅದು ಭಾರತದ ಇತರೆ ಪ್ರದೇಶಗಳಿಗಿಂತಲೂ ಟಿಬೆಟ್‌ಗೆ ಸಮೀಪದಲ್ಲಿದೆ. ಪ್ರಾಚೀನ ರೇಶ್ಮೆ ಮಾರ್ಗದಲ್ಲಿ(Silk route) ಇರುವ ಅದು, ಒಂದು ಸಾಂಸ್ಕೃತಿಕ ಮತ್ತು ವ್ಯಾಪಾರ ವಸ್ತುಗಳ ವಿನಿಮಯ ಕೇಂದ್ರವೂ ಆಗಿತ್ತು. ಅದರ ರಾಜಧಾನಿ ಲೇಹ್‌ಅನ್ನು ಪ್ರಾಚೀನ ಕಾಲದ ಸಿಂಗಾಪುರ್ ಎಂದು ಕರೆಯಲಾಗಿದೆ.

ಕಾಶ್ಮೀರಿಗಳಿಗೆ ತಮ್ಮ ಶ್ರೀಮಂತ ಪರಂಪರೆಯ ಬಗ್ಗೆ ಹೆಮ್ಮೆಪಡಲು ನ್ಯಾಯಸಮ್ಮತವೇ ಆದ ಹಕ್ಕಿದ್ದರೂ, ಅವರು ಇವತ್ತು ತಾವಿರುವ ಸಂದರ್ಭದಲ್ಲಿ ಕಾಶ್ಮೀರಿಯಲ್ಲದ ಪ್ರಾಂತ್ಯ ಮತ್ತು ಇತರೆ ಜನಾಂಗೀಯ ಸಮುದಾಯಗಳ ಸಂಸ್ಕೃತಿ ಮತ್ತು ಆಶೋತ್ತರಗಳನ್ನು ಗೌರವಿಸುವುದನ್ನು ಕಲಿಯುವ ಅಗತ್ಯವಿದೆ, ಇವರೆಲ್ಲ ಒಟ್ಟಾಗಿ ಕಾಶ್ಮೀರಿಗಳಷ್ಟೇ ಜನಸಂಖ್ಯೆಯಲ್ಲಿದ್ದು ಭೌಗೋಳಿಕವಾಗಿ ಹಲವು ಪಟ್ಟು ಹೆಚ್ಚು ವಿಸ್ತಾರವಾದ ಪ್ರದೇಶಗಳಲ್ಲಿ ಹರಡಿದ್ದಾರೆ.

ಐತಿಹಾಸಿಕವಾಗಿ, ಕಾಶ್ಮೀರಿಗಳು ಆಳ್ವಿಕೆ ನಡೆಸಿದ್ದಾರೆ ಇಲ್ಲವೆ ಆಳಿಸಿಕೊಂಡಿದ್ದಾರೆ. ಲಲಿತಾದಿತ್ಯ ದೊಡ್ಡ ಸಾಮ್ರಾಜ್ಯವೊಂದರ ದೊರೆಯಾಗಿ ಆಳ್ವಿಕೆಯನ್ನು ನಡೆಸಿದ್ದನ್ನು ಅವರು ಈಗಲೂ ಹೆಮ್ಮೆಯಿಂದ ನೆನಪು ಮಾಡಿಕೊಳ್ಳುತ್ತಾರೆ. ಜೊತೆಗೆ ಮುಘಲರ, ಅಫ್ಘನ್ನರ, ಪಂಜಾಬ್ ಮತ್ತು ಡೋಗ್ರ ಆಳ್ವಿಕೆಯ ಅವಧಿಯಲ್ಲಿ ಅನುಭವಿಸಿದ ದಾಸ್ಯತ್ವದ ನೋವನ್ನು ನೆನೆದು ಹಿಡಿ ಶಾಪ ಹಾಕುತ್ತಾರೆ. ಈಗವರಿಗೆ ಒಂದು ಅವಕಾಶ ಒದಗಿ ಬಂದಿದೆ, ತಮ್ಮ ರಾಜ್ಯವನ್ನು ತಾವೇ ಆಳುವುದಕ್ಕೆ. ೧೯೪೭ರಿಂದ, ಒಂದಲ್ಲ ಒಂದು ಪಕ್ಷದ ಕಾಶ್ಮೀರಿ ನಾಯಕರು ಮುಖ್ಯಮಂತ್ರಿಯಾಗಿದ್ದಾರೆ, ಇದಕ್ಕೆ ಅಪವಾದ ಎನ್ನುವಂತೆ ಜಮ್ಮುವಿನ ನಾಯಕ ಜಿ.ಎನ್. ಅಜಾದ್ ಎರಡೂವರೆ ವರ್ಷಗಳ ಕಾಲ ಮಾತ್ರ ಆ ಸ್ಥಾನವನ್ನು ಅಲಂಕರಿಸಿದ್ದರು. ಇವರಲ್ಲಿ ಯಾರೇ ಆಗಲಿ, ಕಾಶ್ಮೀರಿಗಳನ್ನಾಗಲೀ ಇಲ್ಲವೆ ಕಾಶ್ಮೀರಿಗಳಲ್ಲದ ಪ್ರಾಂತ್ಯದ ಜನರನ್ನಾಗಲಿ, ತೃಪ್ತಿಪಡಿಸಲಾಗಲಿಲ್ಲ. ಕಾಶ್ಮೀರದಲ್ಲಿ ಸ್ವಾಯತ್ತತೆ ಅಥವಾ ಆಜಾದಿ ಬಗ್ಗೆ ಜನರಲ್ಲಿ ತೀರ ಭಾವನಾತ್ಮಕ



**ನೆಹ್ರೂ–ಶೇಕ್ ಅಬ್ದುಲ್ಲಾ ಒಪ್ಪಂದ**



ಒಲವಿದೆ. ಆದರೆ ಷೇಕ್ ಅಬ್ದುಲ್ಲಾ ಪಂಡಿತ್ ಜವಾಹರಲಾಲ್ ನೆಹ್ರೂ ಅವರೊಡನೆ ಮಾಡಿಕೊಂಡ ೧೯೫೨ರ (ದೆಹಲಿ)ಒಪ್ಪಂದದಲ್ಲಿ ಇದನ್ನು ಒದಗಿಸುವ ಭರವಸೆಯನ್ನೇ ನೀಡಲಾಗಿತ್ತಾದರೂ ಅದನ್ನು ಯಾವುದೇ ಒಂದು ಪ್ರದೇಶಕ್ಕಾಗಲೀ ಒದಗಿಸಲು ಯಾರೂ ಯಾವುದೇ ಪ್ರಯತ್ನ ಮಾಡಿಲ್ಲ.

ಆಜ಼ಾದಿ ಕುರಿತ ಭಾವಾವೇಶಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅದು ಸ್ವಾತಂತ್ರ್ಯ(Independence) ನಾಗರಿಕ ಬದುಕು(Freedom) ಎಂಬೆರೆಡು ಪರಿಕಲ್ಪನೆಗಳ ಉರ್ದು ಅನುವಾದ. ೧೯೪೭ರಲ್ಲಿ, ರಾಜತ್ವ ರದ್ದುಗೊಂಡು ಕಾಶ್ಮೀರಿಯಲ್ಲದ ಜಮ್ಮು ರಾಜನಿಂದ ಅಧಿಕಾರ ವಹಿಸಿಕೊಂಡಾಗ ಷೇಕ್ ಅಬ್ದುಲ್ಲಾ ತಾನು ದಾಸ್ಯತ್ವದ ನಾಲ್ಕು ಶತಮಾನಗಳ ನಂತರ ಕಾಶ್ಮೀರಕ್ಕೆ ಆಜ಼ಾದಿ ತಂದುಕೊಟ್ಟಿರುವುದಾಗಿ ಹೇಳಿದ್ದರು. ಆದರೆ, ಹೊರಗಿನ ಆಳ್ವಿಕೆದಾರನಿಂದ ಆಜ಼ಾದಿ ದೊರಕಿಸಿಕೊಟ್ಟ ವಿಷಯವಾಗಿ ಅವರ ಆಳ್ವಿಕೆ ಜನಪ್ರಿಯವಾದರೂ, ಜನರಿಗೆ ನಿಜವಾದ ಸ್ವಾತ್ರಂತ್ರ್ಯ ನೀಡಲಿಲ್ಲ. ಯಾವುದೇ ವಿರೋಧವನ್ನು ಅವರು ಸಹಿಸಲಿಲ್ಲ.

ನ್ಯಾಷನಲ್ ಕಾನ್ಫೆರೆನ್ಸ್ ಕಾಶ್ಮೀರದಲ್ಲಿ ಕಾರ್ಯಾಶೀಲವಾಗಿದ್ದ ಏಕೈಕ ಪಕ್ಷವಾಗಿತ್ತು. ಅದರ ನಾಯಕರು ಸರಕಾರ ನಿಯೋಜಿಸಿದ ಅಧಿಕಾರಿಗಳೇ ಆಗಿದ್ದರು ಅಥವಾ ಇದರ ತಿರುವುಮುರುವು ನಿಜವಾಗಿತ್ತು. ಅದೊಂದು ಒಂದು ಸೇನೀಕೃತ ಪಟಾಲಂ ಆಗಿದ್ದು, ಪಕ್ಷದ ಕಾರ್ಯಕರ್ತರು ಆಡಳಿತ ವರ್ಗಕ್ಕೆ ಮಾತ್ರವಲ್ಲದೆ, ನ್ಯಾಯಾಂಗಕ್ಕೂ ನಿರ್ದೇಶನ ನೀಡಬಲ್ಲವರಾಗಿದ್ದರು. ಜನ ತಮ್ಮ ಭಿನ್ನಮತ, ಅಸಮಾಧಾನ, ವಿರೋಧ ವ್ಯಕ್ತಪಡಿಸುವುದಕ್ಕೆ ಯಾವುದೇ ಅವಕಾಶವಿರಲಿಲ್ಲ. ಅಂತಹ ಕಡೆ ಆಳ್ವಿಕೆದಾರರು ದೇವತೆಗಳೇ ಆಗಿದ್ದರೂ ಕೂಡ ವಿರೋಧ ತಲೆಯೆತ್ತುತ್ತದೆ. ಷೇಕ್ ಅಬ್ದುಲ್ಲಾ ಭಾರತದ ವಿರುದ್ಧದ ದನಿ ಎತ್ತುವುದರ ಮೂಲಕ ಜನರ ಈ ಆಕ್ರೋಶ, ಅತೃಪ್ತಿ ಪರೋಕ್ಷವಾಗಿ ಸ್ಫೋಟಗೊಳ್ಳಲು ದಾರಿ ಮಾಡಿಕೊಟ್ಟರು. ಕಟ್ಟಕಡೆಗೆ ಅದು ಆಗಸ್ಟ್ ೧೯೫೩ರ ಬಿಕ್ಕಟ್ಟಿಗೆ ಕಾರಣವಾಯಿತು. ಹೊಸ ಸಂದರ್ಭವೊಂದು ಎದುರಾದಾಗ, ಕಾಶ್ಮೀರದ ನಾಯಕರು ಮತ್ತು ಜನರಿಗೆ, ನಾಗರಿಕ ಹಕ್ಕುಗಳು ಸ್ವಾತಂತ್ರ್ಯದಷ್ಟೇ ಮುಖ್ಯ ಎನ್ನುವ ಅರಿವು ಮೂಡಿತು. ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳುವಲ್ಲಿ ಮತ್ತು ನಿಭಾಯಿಸುವಲ್ಲಿ ವಿಫಲರಾದ ದೆಹಲಿಯ ನಾಯಕರದ್ದೂ ಇದರಲ್ಲಿ ಪಾಲಿದ್ದಿರಲೂಬಹುದು.



ಅಂತಿಮವಾಗಿ, ಕಾಶ್ಮೀರಿಗಳು ತಾವು ಈಗ ಪ್ರತ್ಯೇಕಿಸಲ್ಪಟ್ಟ ಮತ್ತು ಏಕರೂಪದ ಸಮಾಜಕ್ಕೆ ಸೇರಿದವರಲ್ಲ ಹಾಗೂ ಭೂಗೋಳಿಕವಾಗಿ, ಜನಾಂಗೀಯವಾಗಿ, ಧಾರ್ಮಿಕವಾಗಿ ವೈವಿಧ್ಯತೆಯುಳ್ಳ ರಾಜ್ಯದ ಒಂದು ಭಾಗವೆನ್ನುವುದನ್ನು ಅರ್ಥಮಾಡಿಕೊಳ್ಳಲೇಬೇಕಾಗುತ್ತದೆ. ಮೇಲಾಗಿ, ವೈವಿಧ್ಯತೆ ಆಧುನಿಕ ಕಾಲದಲ್ಲಿ ಒಂದು ಉತ್ತಮ ಗುಣವೆಂದು ಮತ್ತು ಅದು ಒಂದು ಶಕ್ತಿಯ ಮೂಲವೆಂದು ಪರಿಗಣಿಸಲಾಗುತ್ತದೆ. ಒಂದು ವೇಳೆ, ಪ್ರತಿ ವೈವಿಧ್ಯತೆಯ ಆಶೋತ್ತರಗಳು ಮತ್ತು ಆಸಕ್ತಿಗಳನ್ನು ಒಂದರೊಡನೊಂದು ಸಮರಸವಾಗಿ ಹೊಂದಿಸಿಕೊಂಡು ನಿರ್ವಹಿಸಲು ಸಾಧ್ಯವಾದರೆ ಈ ರಾಜ್ಯ ಈ ಉಪಖಂಡದಲ್ಲಿ ವೈವಿಧ್ಯತೆಯಲ್ಲಿನ ಏಕತೆ ತತ್ವಕ್ಕೆ ಒಂದು ಮಾದರಿಯಾದೀತು. ಪ್ರಸ್ತುತ ಬಿಕ್ಕಟ್ಟು, ಬಿಗುವು ಮತ್ತು ತಪ್ಪು ತಿಳುವಳಿಕೆಗಳನ್ನು ಪೋಷಿಸುತ್ತಿದ್ದು ಇದು ಯಾರಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಕಾಶ್ಮೀರಿಗಳು ರಾಜ್ಯದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮೂಲಕ ಇತರ ಪ್ರದೇಶಗಳ ವಿಶಿಷ್ಟ ಅನನ್ಯತೆಗಳ ಮತ್ತು ಆಶೋತ್ತರಗಳನ್ನು ಮಾನ್ಯ ಮಾಡಿ ತಮ್ಮ ವಿಶಿಷ್ಟ ಅಸ್ಮಿತೆಯನ್ನು ಉಳಿಸಿಕೊಳ್ಳಬಹುದಾಗಿದೆ

ಇವತ್ತಿನ ಕಾಶ್ಮೀರ ತನ್ನ ವಿಶಿಷ್ಟ ಅಸ್ಮಿತೆ, ರಾಜಕಾರಣ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿ ಹಿಂದೆಂದೂ ಕಾಣದಂತಹ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳ ಸ್ವರೂಪದ ಬಗ್ಗೆ ಮತ್ತು ಅವುಗಳನ್ನು ಎದುರಿಸುವ ಬಗ್ಗೆ ಬುದ್ಧಿಜೀವಿಗಳು ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ನಾಯಕರ ನಡುವೆ ಮುಕ್ತ ಸಂವಾದ ನಡೆಯಲಿ. ಅಂತಿಮವಾಗಿ, ರಾಜ್ಯಕ್ಕೆ ಯಾವ ರೀತಿಯ ಸ್ಥಾನಮಾನ ಬೇಕೆಂದು ಅವರು ಬಯಸುವರೋ ಅದು ಪ್ರತಿ ಪ್ರಜೆಯ ನಾಗರಿಕ ಸ್ವಾತಂತ್ರ್ಯ ಮತ್ತು ಎಲ್ಲ ಪ್ರದೇಶಗಳ ಮತ್ತು ಜನಾಂಗಗಳ ಅಸ್ಮಿತೆ ಮತ್ತು ಆಶೋತ್ತರಗಳನ್ನು ಖಚಿತಪಡಿಸುವಂತಿರಲಿ. *

**ಮೂಲ: ಬಲರಾಜ್ ಪುರಿ**
**ಕನ್ನಡಕ್ಕೆ: ಎಂ.ಎಸ್. ರುದ್ರೇಶ್ವರಸ್ವಾಮಿ**
**(ಕೃಪೆ: 'ಜನತಾ')**

## ಸಾಹಿತ್ಯ-ಸಂಸ್ಕೃತಿ ಇತ್ಯಾದಿ...


# ಇದು ಎದೆಗೆ ಬಿದ್ದ ಬೆಂಕಿಯೋ? ಎದೆಗೆ ಬಿದ್ದ ಅಕ್ಷರವೋ?

-ಕೆ.ಬಿ.ಸಿದ್ದಯ್ಯ

**ದೇವನೂರ ಮಹಾದೇವ ಅವರ ಬಿಡಿ ಲೇಖನಗಳ ಸಂಗ್ರಹ 'ಎದೆಗೆ ಬಿದ್ದ ಅಕ್ಷರ' ಕೇವಲ ಒಂದು ಸಾಹಿತ್ಯ ಕೃತಿಯಲ್ಲ. ಅದು ಕಳೆದ ಮುವ್ವತ್ತು ನಲವತ್ತು ವರ್ಷಗಳ ಕರ್ನಾಟಕ ಕಂಡ ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟಗಳ ದಾಖಲೆಯೂ ಹೌದು. ರಾಜ್ಯದಲ್ಲಿ ಸಮಾಜವಾದಿ ಚಳುವಳಿಯನ್ನೂ ನಂತರ ದಲಿತ ಚಳುವಳಿ ಮತ್ತು ಸಾಹಿತ್ಯವನ್ನೂ ಕಟ್ಟುವಲ್ಲಿ ವಿಶಿಷ್ಟ ಪಾತ್ರ ವಹಿಸಿದ ಮಹಾದೇವ ತಾವು ಕಂಡದ್ದನ್ನು, ಅನುಭವಿಸಿದ್ದನ್ನು, ಕಲ್ಪಿಸಿಕೊಂಡದ್ದನ್ನು ತಮ್ಮ ಸೃಜನಶೀಲತೆಯಲ್ಲಿ ಹೇಗೆ ದಾಖಲಿಸಿದ್ದಾರೆ? ಇದರ ಒಂದು ಕ್ರಿಯಾಶೀಲ ಪರಿಶೀಲನೆ ಇಲ್ಲಿದೆ, ಅವರೊಂದಿಗೆ ಈ ಎಲ್ಲ ಚಳುವಳಿಗಳ ಕಟ್ಟೋಣದಲ್ಲಿ ಕಿರಿಯ ಗೆಳೆಯನಾಗಿ ಭಾಗವಹಿಸಿದ ಕವಿ ಕೆ.ಬಿ. ಸಿದ್ದಯ್ಯನವರಿಂದ**-ಸಂಪಾದಕ

"**ಬೌ**ದ್ಧಧಮ್ಮಕ್ಕೆ ಸೇರಬೇಕೆ ? ಬೇಡವೇ ? ಎಂಬ ಚರ್ಚೆ ಅನಗತ್ಯವಾಗಿದೆ, ಅಂಬೇಡ್ಕರ್ ವಿವೇಕವು ಬುದ್ಧನ ಬೆಳಕನ್ನು ನಮ್ಮ ಮುಂದೆ ಇಟ್ಟಿದೆ. ಈ ದಿಕ್ಕಿನಲ್ಲಿ ಅನೇಕರು ಶ್ರಮಿಸಿರುವುದನ್ನು ನೆನಪಿಸಿಕೊಳ್ಳಬೇಕಾಗಿದೆ. ಕರ್ನಾಟಕದಲ್ಲಿ ಶ್ರೀ ಬಸವಲಿಂಗಪ್ಪನವರ ಪ್ರಯತ್ನಗಳು, ಬುದ್ಧ ಬರಲಿ ನಮ್ಮೂರಿಗೆ ಎಂಬ ಕಿರುಹೊತ್ತಿಗೆಯ ಮೂಲಕ ದಲಿತ ಸಂಘರ್ಷ ಸಮಿತಿ ನಡೆಸಿದ ಜಾಥಾ, ಮೈಸೂರಿನಲ್ಲಿ ಶ್ರೀನಿವಾಸ ಪ್ರಸಾದರ ನೇತೃತ್ವದ ಬುದ್ಧಬರಲಿ ಮರಳಿಮನೆಗೆ ಸಮಾವೇಶವನ್ನು ನೆನಪಿಸಿಕೊಳ್ಳಬೇಕಾಗಿದೆ".

ದೇವನೂರು ಮಹಾದೇವರ 'ಎದೆಗೆ ಬಿದ್ದ ಅಕ್ಷರ' ಕೃತಿಯಲ್ಲಿರುವ 'ಬುದ್ಧನೆಡೆಗೆ ಒಂದು ನಡಿಗೆ' ಅಧ್ಯಾಯದಲ್ಲಿ ಕಣ್ಣಿಗೆ ರಾಚುವ, ಮನಸ್ಸಿಗೆ ನಾಟುವಂತಹ ಸಾಲುಗಳಿವು.. ಈ ವಾಕ್ಯಗಳನ್ನು ಛೇದಿಸಿ, ಛೇದಿಸಿ ಅರ್ಥ ಗೂಢಾರ್ಥಗಳನ್ನು ಹುಡುಕುವುದು ಬೇಡ. ಅವು ಒಡಲೊಳಗೆ ಧರಿಸಿರುವ ಆಶಯ ಮಾತ್ರ ಸಾಕು ಅಂದುಕೊಂಡಿದ್ದೆ ಆದರೆ ಅದೇ ಸಾಲುಗಳು, 'ಕೇಬಿ. ನಮ್ಮ ಎದೆ ಬಗೆದು ನೋಡು' ಎಂದು ಪಾದ ಹಿಡಿದು ಬೇಡುತ್ತವೆ. ಆದ ಕಾರಣ 'ಬೌದ್ಧಧಮ್ಮಕ್ಕೆ ಸೇರಬೇಕೆ? ಬೇಡವೇ? ಎಂಬ ಚರ್ಚೆ ಅನಗತ್ಯ' ಎಂಬ ಮಾತಿನ ಎದೆ




ಬಗೆದು ನೋಡಿದೆ. ಅಲ್ಲಿ ಅರಿವು ಮೈದೋರಿದ ಬುದ್ಧನಿಲ್ಲ, ಬದಲಿಗೆ ಸರ್ವ ಸಮರ್ಪಣಾ ಭಾವವೇ ಮೈವೆತ್ತ ಬುದ್ಧ ಭಕ್ತನ ನುಡಿ ಸ್ಥಾವರಗೊಂಡಿತ್ತು. ಆ ಭಕ್ತನು ದೇವನೂರು ಮಹಾದೇವ. ಮುಂದುವರೆದು ಅವರು ಅಂಬೇಡ್ಕರ್‌ರ ವಿವೇಕ, ಬುದ್ಧನ ಬೆಳಕನ್ನು ನಮ್ಮ ಮುಂದೆ ಇಟ್ಟಿದೆ ಅನ್ನುತ್ತಾರೆ. ಬೌದ್ಧ ಧಮ್ಮ ಅಂಬೇಡ್ಕರ್ ವಿವೇಕದ ಆಯ್ಕೆ. ಅಂಬೇಡ್ಕರ್ ನಂಬಿಕೆ ಕೂಡಾ ಅಂತಿಮವಾಗಿ ಧರ್ಮದ ಆಯ್ಕೆ ಯಾವುದೇ ವ್ಯಕ್ತಿಯ ಸ್ವತಂತ್ರ ಆಯ್ಕೆ ಎಂಬ ಸಂವಿಧಾನಬದ್ಧ ನಿಲುವಿನಲ್ಲಿತ್ತು. ಅಪರೂಪದ ಭಕ್ತಿಯು ಕೆಲವು ಸಲ ಸ್ಪಷ್ಟ ಚಿಂತನೆಯನ್ನು ಮಸುಕಾಗಿಸುತ್ತದೆ ಎಂಬುದಕ್ಕೆ ಲೇಖಕರ ಈ ವಾಕ್ಯರಚನೆಯೇ ಸಾಕ್ಷಿಯಾಗಿದೆ. ಎಲ್ಲಿ ಆಯ್ಕೆಗೆ ಅವಕಾಶವಿರುವುದಿಲ್ಲವೋ ಅಲ್ಲಿ ಪ್ರಜಾಪ್ರಭುತ್ವ ಹೆಣವಾಗಿರುತ್ತದೆ. ಲೇಖಕರ "ಚರ್ಚೆ ಅನಗತ್ಯ" ಎಂಬ ಮಾತು ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯವನ್ನು ಕಡೆಗಣಿಸುತ್ತದೆ. ಇಲ್ಲಿ ವಿಮರ್ಶೆ ಕಣ್ಣು ಕಳೆದುಕೊಂಡಂತೆ ಅಥವಾ ಕಣ್ಣಿದ್ದೂ ಕುರುಡಾದಂತೆ. ಜಾಣ ಕುರುಡು ಅಂದರೂ ಸಲ್ಲುತ್ತದೆ.

ತಮಾಷೆಯೆಂದರೆ ಅಕಸ್ಮಾತ್ ದೇವನೂರು ಮಹಾದೇವರ ಕನಸಿನಲ್ಲಿ ಬುದ್ಧಗುರು ಕಾಣಿಸಿದರು ಅಂದುಕೊಳ್ಳಿ, ಇದೇ ಮಾತುಗಳನ್ನು ಅವರು ಬುದ್ಧ ಗುರುವಿನ ಕಿವಿಯಲ್ಲಿ ಹೇಳುತ್ತಾರೆಂದು ತಿಳಿಯಿರಿ. ಆಗ ಬುದ್ಧ ಗುರುವು ಮುಗುಳ್ನಗೆ ಚೆಲ್ಲಿ ಮಹಾದೇವ ಭಂತೆ, ಬೌದ್ಧ ಧಮ್ಮಕ್ಕೆ ಸೇರಬೇಕೆ ಬೇಡವೇ? ಇದು ನಿನ್ನ ಆಯ್ಕೆಗೆ ಬಿಟ್ಟ ವಿಷಯ. ಆದರೆ ಚರ್ಚೆ ಅನಗತ್ಯ ಎಂಬುದು ಧಮ್ಮಕ್ಕೆ ಹೊರಗು. ಸಂಘಕ್ಕೆ ಸಲ್ಲದ ಮಾತು. ವಿಮರ್ಶೆ ಇಲ್ಲದೆ ಯಾರೂ ಯಾವ ವಿಚಾರವನ್ನೂ ಅನುಭವದ ಒರೆಗಲ್ಲಿಗೆ ಹಚ್ಚದೆ ಒಪ್ಪಬೇಕಾಗಿಲ್ಲ ಅಂದಾಕ್ಷಣ ದೇವನೂರುಮಹಾದೇವ ಕಣ್ಬಿಟ್ಟು ಬೆಚ್ಚುತ್ತಾರೆ. ನಾನೇನಾದರೂ ಎದುರಿಗಿದ್ದ ಪಕ್ಷದಲ್ಲಿ ಹೌದೇನೋ ಕೇಬಿ. ಎಂದು ಮತ್ತೆ ನಿದ್ದೆಗೆ ಮರಳುವರು. ಇದು ಅವರ ನಡೆ ನುಡಿ ಎಂಬುದನ್ನು ನಾನು ಬಲ್ಲೆ.

'ಅಲ್ಲಿ ಅರಿವು ಮೈದೋರಿದ ಬುದ್ಧನಿಲ್ಲ' ಎಂಬ ಮಾತನ್ನು ಮುಂದುವರೆಸಿ, 'ಇನ್ನೇನಿದೆ' ಎಂದು ಹುಡುಕಿದರೆ ಮುಂದಿನ ಸಾಲುಗಳು ದುತ್ತನೆ ಎದ್ದು ನಿಲ್ಲುತ್ತವೆ. "ಈ ದಿಕ್ಕಿನಲ್ಲಿ ಅನೇಕರು ಶ್ರಮಿಸಿರುವುದನ್ನು ನೆನಪಿಸಿಕೊಳ್ಳಬೇಕಾಗಿದೆ, ಶ್ರೀ ಬಸವಲಿಂಗಪ್ಪನವರ ಪ್ರಯತ್ನಗಳು 'ಬುದ್ಧ ಬರಲಿ ನಮ್ಮೂರಿಗೆ' ಎಂಬ ಕಿರುಹೊತ್ತಿಗೆಯ ಮೂಲಕ ದಲಿತ ಸಂಘರ್ಷ ಸಮಿತಿ ನಡೆಸಿದ ಜಾಥಾ (ಯಾವ ಬಣ ಎಂಬುದು ಸ್ಪಷ್ಟವಾಗಿಲ್ಲ, ಎಲ್ಲಾ ಬಣಗಳೂ ಒಗ್ಗಟ್ಟಾಗಿ ನಡೆಸಿದ ಜಾಥಾ ಇದಲ್ಲ) ಮೈಸೂರಿನಲ್ಲಿ ಶ್ರೀನಿವಾಸ್‌ಪ್ರಸಾದ್ ಅವರ ನೇತೃತ್ವದಲ್ಲಿ ಬುದ್ಧಬರಲಿ ಮರಳಿಮನೆಗೆ ಸಮಾವೇಶಗಳನ್ನು ನೆನಪಿಸಿಕೊಳ್ಳಬೇಕು. ಇಷ್ಟೇ ಏಕೆ ಇನ್ನೂ ಸೇರಿಸಬಹುದು. ಕೋಟ್ಯಾಂತರ ಹಣ ಸುರಿದು ದಕ್ಷಿಣ ಭಾರತದಲ್ಲಿ ಅತಿದೊಡ್ಡ ಆಕರ್ಷಣೀಯವೂ, ಪ್ರೇಕ್ಷಣೀಯ ಸ್ಥಳವೂ ಆಗಿರುವ



ಬಿ. ಬಸವಲಿಂಗಪ್ಪ ಮಲ್ಲಿಕಾರ್ಜುನ ಖರ್ಗೆ ಸಿದ್ದಲಿಂಗಯ್ಯ



ಗುಲ್ಬರ್ಗಾದ ಬುದ್ಧವಿಹಾರ ನಿರ್ಮಿಸಿದ ಮಲ್ಲಿಕಾರ್ಜುನ ಖರ್ಗೆಯವರು. ಅಂಬೇಡ್ಕರ್ ಪುಸ್ತಕಗಳನ್ನು ಕರ್ನಾಟಕಕ್ಕೆ ತಂದ ಮೊದಲನೇ ವ್ಯಕ್ತಿ ಇಂಜಿನಿಯರ್ ಶಿವಲಿಂಗಯ್ಯನವರು. ಇವರ ಹೆಸರುಗಳು ಮಹಾದೇವ ಅವರ ಪಟ್ಟಿಯಿಂದ ಮಾಯವಾಗಲು ಕಾರಣವೇನು? ಇವರು ಪಟ್ಟಿ ಮಾಡಿರುವ ಎಲ್ಲ ವ್ಯಕ್ತಿಗಳೂ ಅಸ್ಪೃಶ್ಯ ಜಾತಿಗಳಲ್ಲಿ ಒಂದಾದ ಹೊಲೆಯ ಜಾತಿಗೆ ಸೇರಿದವರು. ಆದ ಕಾರಣ ಕರ್ನಾಟಕದಲ್ಲಿ ಬೌದ್ಧ ಧಮ್ಮದ ರಥ ಎಳೆಯುವವರು ಹೊಲೆಯ ಜಾತಿಗೆ ಸೇರಿದವರು ಎಂದಂತಾಯಿತು.

ದೇವನೂರು ಮಹಾದೇವ ಹೀಗೆ ಹೇಳಲು ಸಾಧ್ಯವೇ? It is impossible ಎಂಬ ಉದಾರತೆಯ ಭಾವ ಇಡೀ ನನ್ನ ವ್ಯಕ್ತಿತ್ವವನ್ನು ಹಿಡಿದು ಅಲ್ಲಾಡಿಸುತ್ತಿದ್ದರೂ ಬೌದ್ಧಧಮ್ಮ ಪ್ರಚಾರಕ್ಕೆ ಕೈಹಾಕಿದವರ ಪಟ್ಟಿ ಮಾಡಿರುವ ಬಗೆ ನನ್ನ ಉದಾರತೆಯನ್ನು ನಡುಗಿಸುತ್ತದೆ, ಗೇಲಿ ಮಾಡುತ್ತದೆ. ಕರ್ನಾಟಕದ ಮಟ್ಟಿಗಾದರೂ ನಾನು ಕಂಡಂತೆ ನೂರು ಮಂದಿ ಅಸ್ಪೃಶ್ಯರು ಅಂಬೇಡ್ಕರ್ ದಾರಿ ಹಿಡಿದು ಬೌದ್ಧಧಮ್ಮ ಸೇರಿದ್ದರೆ ಅದರಲ್ಲಿ ತೊಂಬತ್ತೊಂಬತ್ತು ಮಂದಿ ಹೊಲೆಯ ಜಾತಿಗೆ ಸೇರಿದವರು. ಇಪ್ಪತ್ತೈದು ಬುದ್ಧ ವಿಹಾರಗಳನ್ನು ಕಟ್ಟಿದ್ದರೆ ಇಪ್ಪತ್ತನಾಲ್ಕು ಹೊಲೆಯ ಜಾತಿಗೆ ಸೇರಿದವು. ಇದು ಸಂಶೋಧನೆಯಿಂದಲೂ ಸಾಬೀತಾಗುವ ಸಂಗತಿ. ಈ ಪ್ರಕ್ರಿಯೆ ಹೀಗೇ ಇನ್ನೂ ಕೆಲವು ದಶಕಗಳ ಕಾಲ ಮುಂದುವರಿದರೆ ಕರ್ನಾಟಕದಲ್ಲಿ ಬೌದ್ಧ ಧಮ್ಮ ಹೊಲೆಯ ಧರ್ಮವಾಗಿ ಜಾತ್ಯಾಂತರವಾಗಿಬಿಡುತ್ತದೆ. ಬೌದ್ಧ ಧಮ್ಮಕ್ಕೆ ದಲಿತರು ಮತಾಂತರವಾಗುತ್ತಿದ್ದಾರೋ ಅಥವಾ ಕ್ರಾಂತಿಕಾರಿ ಬಸವಣ್ಣನನ್ನು ಜಾತೀಕರಿಸಲಾಗುತ್ತಿರುವಂತೆ ಬೌದ್ಧ ಧಮ್ಮವನ್ನು ಜಾತೀಕರಿಸಲಾಗುತ್ತಿದೆಯೇ ಎಂಬ ಆತಂಕ 'ಎದೆಗೆ ಬಿದ್ದ ಅಕ್ಷರ'ದ ಈ ಅಧ್ಯಾಯ ಓದಿದ ಬಳಿಕ ನನ್ನ ಎದೆಗೆ ಬಿದ್ದ ಬೆಂಕಿಯಾಗಿದೆ. ದೇವನೂರು ಮಹಾದೇವರ ಕಥೆಯಲ್ಲಿ ಬರುವ ಗಂಡುಬೇರುಂಡ ಪಕ್ಷಿ ಕಟ್ಟಕಡೆಗೂ ವಿಷದ ಹಣ್ಣು ನುಂಗಿದಂತಾಗುತ್ತದೆ!

ಒಂದು ಕಾಲಕ್ಕೆ ಗೋಪಾಲಕೃಷ್ಣ ಅಡಿಗರನ್ನು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಕರೆದಂತೆ ದೇವನೂರು ಮಹಾದೇವ ಒಂದು ಜಾತಿಯ ಕಣ್ಣು ತೆರೆಸಿದ ಲೇಖಕ ಎಂದು ಯಾವ ನಾಲಿಗೆಯಲ್ಲಿ ಹೇಳಲಿ ಶಿವನೇ! ಏಕೆಂದರೆ ದೇಮ ನನ್ನ ಕಣ್ಣು ತೆರೆಸಿದ ಕನ್ನಡದ ಗಣ್ಯ ಲೇಖಕ. ಎಂಬುದನ್ನು ಮರೆಮಾಚುವುದು ನನ್ನ ಆತ್ಮವಂಚನೆಯಾಗುತ್ತದೆ. ಇದು ದೇವನೂರು ಮಹಾದೇವರ ಮೇಲಿನ ಆರೋಪವೆಂದರೂ ಕೂಡ ಆರೋಪ ಪಟ್ಟಿಯನ್ನು ಡಾ. ರವಿವರ್ಮಕುಮಾರ್ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗುತ್ತದೆ. ಆದರೆ ಈ ಕೇಸಿನ ವಿಷಯ ಯಾವುದೇ ಕಾರಣಕ್ಕೂ ನಮ್ಮ ಕ್ರಾಂತಿಕಾರಿ ದಲಿತ ಹಾಸ್ಯ ಕವಿ ಡಾ. ಸಿದ್ದಲಿಂಗಯ್ಯನವರ ಕಿವಿಗೆ ಬೀಳದಂತೆ ಎಚ್ಚರಿಕೆ ವಹಿಸಬೇಕಲ್ಲವೇ?

ಮೇಲೆ ಹೇಳಿದ ಎಲ್ಲಾ ಸಂಗತಿಗಳು ದೇಮನಿಗೆ ಕೆಟ್ಟ ಗಳಿಗೆಯಲ್ಲಿ ಬಿದ್ದ ಕೆಟ್ಟ ಕನಸು ಎಂದು ಮರೆತೂ ಬಿಡಬಹುದು. ಮರೆತೇನೆಂದರೂ ಮರೆಯಲಾಗದುದು ಯಾವುದೆಂದರೆ ದಲಿತ 'ಸಂಘರ್ಷ ಸಮಿತಿ ನಡೆಸಿದ ಜಾಥಾ ಕಾರ್ಯಕ್ರಮಕ್ಕೆ 'ಬುದ್ಧ ಬರಲಿ ನಮ್ಮೂರಿಗೆ' ಎಂಬ ಕಿರುಹೊತ್ತಿಗೆಯನ್ನು ಕಟ್ಟಕಡೆಗೂ ಬರೆದುಕೊಟ್ಟ, ದೇಮನೂ ಕೂಡ 'ಶಂಕರ್‌ಗುರು' ಎಂದು ಒಪ್ಪುವ ಕೆ.ಎಂ.ಶಂಕರಪ್ಪನವರ ಹೆಸರು ಇಲ್ಲ ಏಕೆ ? ಮುನಿಸಿಕೊಂಡು ರೈತ ಮುನಿಯಾಗಿ ದಲಿತರ ಒಡನಾಡಿಯಾಗಿ ದಲಿತಸಂಘರ್ಷಸಮಿತಿಗೆ ಮೊರೆಬಿದ್ದು ಈಗ ಲೋಕವೆಲ್ಲಾ ಬುದ್ಧಮಯ ಆಗಬೇಕೆಂದು ಹಂಬಲಿಸುತ್ತಿರುವ ಮಹಾನ್ ಕಲಾವಿದ ಕೆ.ಟಿ.ಶಿವಪ್ರಸಾದ್‌ರನ್ನು ಯಾವ ಪಟ್ಟಿಗೆ ಸೇರಿಸಬೇಕೆಂದು ದೇಮನೇ ಹೇಳಬೇಕು.



ಕೆ.ಎಂ.ಶಂಕರಪ್ಪ ಕೆ.ಟಿ. ಶಿವಪ್ರಸಾದ್ ಶ್ರೀನಿವಾಸ ಪ್ರಸಾದ್


"ಲೋಹಿಯಾ ನೆನಪಿನ ಸುತ್ತ" ಎಂಬ ಇನ್ನೊಂದು ಅಧ್ಯಾಯದಲ್ಲಿ ಜಾತ್ಯಾತೀತವಾಗಿರುವುದೆಂದರೆ ಏನು? ಎಂಬ ವಿಚಾರವನ್ನು ಮಂಡಿಸಿರುವ ದೇಮ. ಹೇಳುವುದು – "ಜಾತಿ ವಿರುದ್ಧ ಹೋರಾಡುವುದೆಂದರೆ ಒಂದು ಕಾಲು ಜಾತಿಯಲ್ಲಿ ಇನ್ನೊಂದು ಕಾಲು ಜಾತ್ಯಾತೀತತೆಯ ಮೇಲೂ ಇಟ್ಟ ನಡಿಗೆ, ಇದನ್ನು ಹೇಗೆ ನಿಭಾಯಿಸಬೇಕೆಂದು ನಾನು ತುಂಬಾ ಚಿಂತಿಸಿದ್ದೇನೆ. ದ್ವೇಷದ ಸೋಂಕಿಲ್ಲದ ಇದನ್ನು ಪ್ರೀತಿಯ ಕ್ರಿಯೆ ಮಾತ್ರ ಮಾಡುವುದಾದರೆ ಹೇಗೆಂದು ತುಂಬಾ ಚಿಂತಿಸಿದ್ದೇನೆ". ದೇವನೂರು ಮಹಾದೇವರ ಚಿಂತನೆ ಹೀಗೆ ಮುಂದುವರಿಯುವುದೆಂದು ನಂಬಿದ್ದೇನೆ.

–೨–

"ಎದೆಗೆ ಬಿದ್ದ ಅಕ್ಷರ" ಕೃತಿಯಲ್ಲಿರುವ ಲೇಖಕರ "ನನ್ನ ಮಾತು" ಹೀಗೆ ಆರಂಭವಾಗುತ್ತದೆ: "ಇಲ್ಲಿನ ಕೆಲವು ಆರಂಭದ ಬರಹಗಳಿವೆ, ಸುಮಾರು ೪೦ಕ್ಕೂ ಹೆಚ್ಚು ವಯಸ್ಸಾಗಿದೆ. ಎಲ್ಲೆಲ್ಲೋ ಇದ್ದವು, ಯಾರ್‍ಯಾರ ಬಳಿ ಇದ್ದವು, ಇವುಗಳನ್ನು ಹುಡುಕುವುದು, ಸಿಕ್ಕಿದ ಬರಹಗಳಲ್ಲಿ ಕೆಲವು ಕಡೆ ಇಲ್ಲದ ಭಾಗವನ್ನು 'ಅಂದಾಜಿಸಿಕೊಂಡು' ಬರೆಯುವುದು, ಪುನರುಕ್ತಿ ತೆಗೆಯುವುದು ಹೀಗೆ ಒಂದು ಲೇಖನವನ್ನು ಎರಡಾಗಿಸಿದ್ದೂ ಇದೆ. ಜೊತೆಗೆ ಒಂದೆರಡು ಲೇಖನಗಳನ್ನು ಆಧರಿಸಿ ಹೊಸದಾಗಿ ಬರೆದದ್ದೂ ಇದೆ. ಇದೊಂದು ರೀತಿಯ ಉತ್ಖನನ ಗ್ರಂಥ ಸಂಪಾದನೆ, ಸಂಕಲಿಸುವುದು. ಇತ್ಯಾದಿ ಆಗುತ್ತಾ ಪಯಣದ ಜೊತೆಗೆ ಇಂದೊಂದು ಹಳೆಮನೆ ರಿಪೇರಿಯಾಗಿಬಿಟ್ಟಿದೆ". ಲೇಖಕರು ತನ್ನ ಕೃತಿಯನ್ನು ಓದುಗರಿಗೆ ಈ ರೀತಿ ಪರಿಚಯಿಸುವುದೂ ಒಂದು ಕ್ರಮ. ತನ್ನ ಬರವಣಿಗೆಯ ಕಾಲದಲ್ಲಿ ಎಡವಿದ ಹೆಜ್ಜೆಗುರುತುಗಳನ್ನು ಗುರುತಿಸಿಕೊಂಡು ಎಡವಿದ ಅಕ್ಷರಗಳನ್ನು ಎತ್ತಿ ನಿಲ್ಲಿಸಿದ್ದಕ್ಕೆ ಲೇಖಕರ ಸಮರ್ಥನೆಯೂ ನಿವೇದನೆಯೂ ಇಲ್ಲಿದೆ. ಈ ಕೃತಿಯ ಓದುಗನಾದ ನನಗೆ ಕೃತಿ ಪರಿಚಯಕ್ಕೆ ತಕ್ಷಣಕ್ಕೆ ಒದಗಿದ ಜಪಾನೀ ತೋಟಗಾರಿಕೆಯ ಪರಿಭಾಷೆ 'ಬೋನ್ಸಾಯ್' ಸೂಕ್ತವಾಗಿ ಕಾಣುತ್ತದೆ. ಬೋನ್ಸಾಯ್ ಎಂದರೆ Tray Planting, Living dwarf tree or a potted plant (as a tree) dwarfed (as by pruning) and trained to an artistic shape. 'A Brief History of Bonsai'' ಕೃತಿಯಲ್ಲಿ ಓಂಕಾರ್ ಪ್ರಸಾದ್ ಗುರುತಿಸಿರುವಂತೆ, Literary Origin of word Bonsai is in Japanese. Bonsai as a word is "Tray cultivation or rather Tray cultivated trees. Bonsai as a word has an origin in Japanese pronunced as 'Penzai', which also means Tray Plant"

ಬೆಟ್ಟಗುಡ್ಡಗಳಲ್ಲಿ ಬೆಳೆದ ಹಳೆಯ ಕಾಲದ ಮರಗಿಡಗಳನ್ನು ತದ್ರೂಪಿಯಾಗಿ ಮಣ್ಣಿನ ಮಡಕೆ, ಮುಚ್ಚಳ, ಮಣ್ಣಿನ ಕುಂಡಗಳಲ್ಲಿ ಬೆಳೆಸುವುದು. ಅದರ ಕೊಂಬೆ, ರೆಂಬೆ, ಎಲೆ, ಹೂವು, ಕಾಯಿ, ಹಣ್ಣು ಎಲ್ಲವೂ ಮೂಲದಂತೆ ಕಾಣಲು ಕುರುಚಲುಗೊಳಿಸುವುದು. ಆಯಾ ಸಂದರ್ಭ, ಸನ್ನಿವೇಶ, ಸ್ಥಳಾವಕಾಶಕ್ಕೆ ತಕ್ಕಂತೆ ಅಲಂಕರಿಸಲು ಬೆಳೆಸುವ ತೋಟಗಾರಿಕೆ ಕಲೆ 'ಬೋನ್ಸಾಯ್'. ದೇವನೂರು ಮಹಾದೇವನಿಗೂ ಜಪಾನಿನ ಬೋನ್ಸಾಯ್‌ಗೂ ಎತ್ತಣಿಂದೆತ್ತ ಸಂಬಂಧವಯ್ಯಾ? ಸಂಬಂಧವಿದೆ. ಒಂದೊಂದು ಬೋನ್ಸಾಯ್ ಮರವೂ ಒಂದೊಂದು ಕಲಾಕೃತಿಯಂತೆ ರೂಪಿಸಲ್ಪಟ್ಟಿರುತ್ತದೆ. ಇದೊಂದು 'ಉತ್ಖನನ ಗ್ರಂಥ, ಸಂಪಾದನೆ, ಏನೇನು ಹೇಳಿದರೂ ಇಲ್ಲಿನ ಲೇಖನಗಳನ್ನು ಪುನರಚಿಸಿದ ವಿಧಾನ, ಅಂದಾಜಿಸಿಕೊಂಡು ಬರೆದ ರೀತಿ, ಸಂಕಲಿಸಿದ ಬಗೆಯನ್ನು ಒಟ್ಟಾಗಿ ನೋಡಿದರೆ 'ಎದೆಗೆ ಬಿದ್ದ ಅಕ್ಷರ' ಕೃತಿ ದೇವನೂರು ಮಹಾದೇವ ಬೆಳೆಸಿದ ಕನ್ನಡದ ಬೋನ್ಸಾಯ್ ಪಾರ್ಕ್! ಈ ತೋಟದ ಒಂದೊಂದು ಗಿಡ ಒಂದೊಂದು ಕಲಾಕೃತಿಯಾಗಿ ರೂಪಿಸಲ್ಪಟ್ಟಿರುವುದು ಕಾಣುತ್ತದೆ. ಇದು ದೇಮ.ನ ಕಲಾನೈಪುಣ್ಯತೆ. ನಲವತ್ತು ವರ್ಷಗಳಿಂದ ಜಾಗರವಿದ್ದು ಬಗೆ ಬಗೆ ಸಸಿಗಳನ್ನು ಲೇಖಕರು ಸಂರಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಇಂಡಿಯಾದ ಜಾತಿ ವ್ಯವಸ್ಥೆ ದಿನನಿತ್ಯ ರೂಪಿಸುವ ಭಾಷೆಯಲ್ಲಿ ಹೇಳಬೇಕಾದರೆ ಎಲ್ಲಾ ಜಾತಿಯ ಬೋನ್ಸಾಯ್ ಗಿಡಗಳ ತೋಟ ಇದು. ವ್ಯಕ್ತಿ–ವಿಶಿಷ್ಟತೆ, ವ್ಯಕ್ತಿವಿಚಾರ, ತಾತ್ವಿಕ ಹಾಗೂ ಸಂಘಟನಾತ್ಮಕ ತಾಕಲಾಟಗಳು ವೈಯಕ್ತಿಕ ಮತ್ತು ಸಾಮುದಾಯಿಕ ಅನುಭವಗಳು, ಜಾತಿ ಅವಮಾನದ ಸಂಕಟ, ಸಮಕಾಲೀನ ಸಾಂಸ್ಕೃತಿಕ ರಾಜಕೀಯ, ಭಾಷೆ ಹಾಗೂ ಸಾಹಿತ್ಯಿಕ ಬಿಕ್ಕಟ್ಟುಗಳು. ಲೇಖಕರ ಪ್ರತಿಕ್ರಿಯಾತ್ಮಕ ನಿಲುವುಗಳು ಒಳಗೊಂಡಂತೆ, ಮೇಧಾವಿಗಳ, ರಾಷ್ಟ್ರ ನಾಯಕರ, ರಾಷ್ಟ್ರಕವಿಗಳ ಹೇಳಿಕೆಗಳು ಸಕಲವೂ ಬೆರೆತು ಬೆಳೆದು ಬೋನ್ಸಾಯ್ ಸಂದಣಿಯ ಮಾರುಕಟ್ಟೆಯಂತಿರುವ ಕೃತಿ ಇದು.

–೩–




ಯಾವುದೇ ರೀತಿಯ ಶುಭ ಅಶುಭ ಕಾರ್ಯಾರಂಭದಲ್ಲಿ ಮೊದಲು ದೇವರ ಪ್ರಾರ್ಥನೆ ಇರುವಂತೆ, ದೇವನೂರು ಬೋನ್ಸಾಯ್ ಪಾರ್ಕ್‌ನ ಪ್ರವೇಶದ್ವಾರದಲ್ಲಿ ದೇವರುಗಳ ದರ್ಶನವಾಗುತ್ತದೆ. ದೇವರು ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ ಅಂತ ನಂಬುವ ದೈವಭಕ್ತರ ದೇವರುಗಳನ್ನು ಬೋನ್ಸಾಯ್ ದೇವರ ಗಿಡದಲ್ಲಿ ಅಡಗಿಸಲಾಗಿದೆ. ಇಲ್ಲಿ ಎರಡು ರೀತಿಯ ದೇವರುಗಳಿವೆ. ಇವು ದಲಿತ ಚಿಂತಕದ್ವಯರ ಪ್ರಜ್ಞೆಯಿಂದ ಉದ್ಭವಿಸಿದ ಮೂರ್ತಿಗಳು. ಒಂದು ಡಾ. ಸಿದ್ಧಲಿಂಗಯ್ಯನವರ ಜನಪದ ಪ್ರಜ್ಞೆಯಿಂದ ಜನಿಸಿದ ಮನೆಮಂಚಮ್ಮ ದೇವತೆ. ಮಂಚಮ್ಮ ದೇವತೆಯ ಉದರದಿಂದ ಉದಯಿಸಿದ ಇನ್ನೊಂದು ದೇವರು ದೇವನೂರು ಮಹಾದೇವ 'ಅಂದಾಜಿಸಿಕೊಂಡ' ದೇವರು. ಅವರೇ ಹೇಳುವಂತೆ 'ಕವಿ ಸಿದ್ಧಲಿಂಗಯ್ಯ ಒಮ್ಮೆ ಹೇಳಿದ ಕತೆಯಲ್ಲಿನ ಮಂಚಮ್ಮ ದೇವಿಯ ಒಳಗಿಂದ ನನ್ನ ದೇವರು ಒಡಮೂಡುತ್ತದೆ. ಛಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರು.' ಅಕ್ಷರ ಮಾತ್ರದಿಂದ ದೇವರನ್ನು ಚಿತ್ರಿಸಿದರೆ ಅಪೂರ್ಣವೆಂಬಂತೆ ಲೇಖಕರು ನಾನು ಚಿತ್ರಿಸಿದ ನನ್ನ ದೇವರು ಎಂಬ ರೇಖಾಚಿತ್ರ ಬಿಡಿಸಿದ್ದಾರೆ. ಇದೇನು ಹೊಸ ಕ್ರಮವಲ್ಲ, ರವೀಂದ್ರನಾಥ ಠಾಗೂರರು ಬರವಣಿಗೆಯೊಂದಿಗೆ ಬಿಡಿಸಿದ ಚಿತ್ರಕಲೆ. ಖಲೀಲ್ ಗಿಬ್ರಾನ್ ಚಿತ್ರಗಳ ಉದಾಹರಣೆಗಳಿವೆ. ಏನೇ ಇರಲಿ, ದೇವನೂರು ಮಹಾದೇವ ಕಂಡದ್ದು ಕಂಡಂತೆ ಅದಕ್ಕೆ ತಕ್ಕಂತೆ 'ಅಂದಾಜಿಸಿಕೊಂಡು' ಬರೆಯುವ ನಮ್ಮ ನಡುವಿನ ಮಹತ್ವ ಲೇಖಕನೆಂದು ತೋರಿಸುವ ಇನ್ನೊಂದು ದಾಖಲೆ 'ಎದೆಗೆ ಬಿದ್ದ ಅಕ್ಷರ'.

'ಈ ಪುಸ್ತಕ ಓದುತ್ತಿದ್ದಂತೆ ಮಹಾದೇವ ಲೋಕವನ್ನು ನೋಡುವ ಮತ್ತು ಅಭಿವ್ಯಕ್ತಿಸುವ ಕ್ರಮಗಳಲ್ಲಿ ಕನ್ನಡ ಪರಂಪರೆಗೇ ಹೊಸದನ್ನು ನೀಡಿದ ಲೇಖಕ ಎನ್ನಿಸದಿರದು. ಒಟ್ಟಿಗೇ ಒಳ್ಳೆ ಗದ್ಯವೂ ಹೌದು, ಒಳ್ಳೆಯ ಪದ್ಯವೂ ಹೌದು ಎನ್ನಿಸುವ ರೀತಿಯಲ್ಲಿ ಬರೆದ ಮಹಾದೇವ ಅವರ ಈ ಬರಹಗಳ ಹಿಂದೆ ಒಂದು ಕ್ರಿಯೆಯೂ ಇದ್ದುದರಿಂದ ಈ ಬರಹಗಳ ಅಂದಿನ ಓದಿಗೆ ಒಂದು ವಿಶಿಷ್ಟ ಪ್ರಭೆಯೂ ಒದಗಿತ್ತು. ಆದರೆ ಆ ಕ್ರಿಯೆ ಈಗ ನಿಂತು ಹೋಗಿರುವುದರಿಂದ ಈ ಬರಹಗಳು ಈಗ ಕೆಲವರಿಗೆ ಮಾತಿನ ಮಾಟಗಾರಿಕೆಯಾಗಿ ಕಂಡರೂ ಆಶ್ಚರ್ಯವಿಲ್ಲ'. ಡಿ.ಎಸ್.ನಾಗಭೂಷಣ್ ಅವರ ಈ ಅಭಿಪ್ರಾಯ ಕ್ಲೀಷೆಯಂತೆ ಧ್ವನಿಸಿದರೂ ಹೆಚ್ಚುಕಮ್ಮಿ ಸತ್ಯಕ್ಕೆ ಹತ್ತಿರವಾಗಿದೆ. *

## ಪುಸ್ತಕಾವಲೋಕನ

ಪುಸ್ತಕ: **ಗೊಂದಲಿಗ್ಯಾ**(ಆತ್ಮಕಥೆ) ಲೇ: ಎ,.ಎಂ. ಮದರಿ ಪ್ರ: **ಲೋಹಿಯಾ ಪ್ರಕಾಶನ**, ಬಳ್ಳಾರಿ ಪು: ೩೪೦, ಬೆಲೆ:ರೂ.೧೨೫/-

# ಅಲೆಮಾರಿ ಗೊಂದಲಿನ ಬಿಚ್ಚಿಟ್ಟ ಬದುಕು




**ಸಾ**ಲು ಸಾಲು ದಲಿತ ಆತ್ಮಕಥನಗಳು ಹೊರಬಂದ ನಂತರ ಅವಮಾನಿತ ವೃತ್ತಿ ಜಾತಿಗಳ ಆತ್ಮ ಕಥನಗಳು ಬಂದವು. ಆ ಸಾಲಿನಲ್ಲಿ ಎ.ಎಂ. ಮದರಿ (ಅಪ್ಪಣ್ಣ ಮಾರುತಿ ಮದರಿ) ಗೊಂದಲಿಗ ವೃತ್ತಿಯ ಜಾತಿಯಲ್ಲಿ ಹುಟ್ಟಿದ ಕಾರಣಕ್ಕೆ ಅನಭವಿಸಿದ ನೋವು, ದುಃಖ, ಹಿಂಸೆ, ಅವಮಾನಗಳನ್ನು ಹೊರ ಹಾಕುವ ಆತ್ಮ ಕಥನವಿದು. ಭಾರತದಲ್ಲಿ ಜಾತಿ ಅವಮಾನದ ಚರಿತ್ರೆಯೇ ಬಹು ದೊಡ್ಡ ಸಂಕಥನ. ದಲಿತರಂತೆ ದಲಿತೇತರರಾದ ಗೊಂದಲಿಗರೂ ಸಹ ಹಳ್ಳಿಗಳಲ್ಲಿ ತಿರಸ್ಕೃತರು, ಬಹಿಷ್ಕೃತರು. ಡಪ್ಪಿನಾಟ, ಗೀಗೀಪದ, ಗೊಂದಳ ಕಥಾ ಇವು ಹಟ್ಟಿ ಜನರ ವೃತ್ತಿ. ಈ ವೃತ್ತಿ ಎಷ್ಟೋ ಬಾರಿ ಅನ್ನು ಹುಟ್ಟಿಸದ ದಿನಗಳಲ್ಲಿ ಪಾತ್ರೆ ಹೊತ್ತು ಮಾರುವುದು, ಪಿನ್ನು, ಕೂದಲು ಮಾರಾಟ, ಶಕುನ ಹೇಳುವುದು, ಬುಡಬುಡಕಿ ಕೆಲಸ, ಎಣ್ಣೆ ಜೋಗಿ ಆಗುವುದು ಹೀಗೆಲ್ಲಾ ಅನ್ನಕ್ಕಾಗಿ ಅಲೆಯ ಬೇಕಾದಾಗ ಈ ಚಟುವಟಿಕೆಗಳನ್ನು ಅವರು "ಮುಸಾಫರ್" ಎಂದು ಕರೆಯುತ್ತಾರೆ. ಅಪ್ಪಣ್ಣ ಇಂತಹ ಜಾತಿಯಲ್ಲಿ ಹುಟ್ಟಿ ಬಿಜಾಪುರ ಜಿಲ್ಲೆಯ ಶಿವಣಗಿ ಹಳ್ಳಿಯಿಂದ ವಲಸೆ ಪ್ರಾರಂಭಿಸಿ ಅಲೆಮಾರಿಯಾಗಿ ಊರು ಸುತ್ತುತ್ತಾ ಕೊನೆಗೆ ಒಂದೆಡೆ ನಿಂತು ಅಕ್ಷರ ಕಲಿಯುವ ಬದುಕಿನ ನೋವು ಇಲ್ಲಿ ಹರಡಿಕೊಳ್ಳುತ್ತದೆ.

*ಅಕ್ರಮ ಸಂತಾನ, ಉಚಲ್ಯ, ಗಬಾಳ, ಊರುಕೇರಿ, ಮಣೆಗಾರ*ದಂತಹ ಕೃತಿಗಳು ಬಿಚ್ಚಿಟ್ಟ ಬದುಕಿನಂತೆಯೇ ಅಪ್ಪಣ್ಣ ತಮ್ಮ ಅನಾಥ ಬದುಕಿನ ಕಳೆದು ಹೋದ ದಾಖಲೆಗಳನ್ನು ಇಲ್ಲಿ ಜೋಡಿಸುತ್ತಾರೆ. ಗೊಂದಲಿಗರ ನ್ಯಾಯಪದ್ಧತಿ ಪಂಚಾಯ್ತಿ ಕುಲ ಕಸುಬಿನ ಸಂಕಷ್ಟ ವಲಸೆಯ ಕಹಿ ಅನುಭವಗಳು ಇಲ್ಲಿ ಬೆಚ್ಚಿ ಬೀಳಿಸುತ್ತವೆ. ಆಲೂರಿನಲ್ಲಿ ಎಂಟನೇ ವಯಸ್ಸಿಗೆ ಮಹಾಜನ ಎಂಬ ದಲಿತ ಮಾಸ್ತರನ ದೆಸೆಯಿಂದ ದೊರೆತ ಶಾಲೆಯ ಭಾಗ್ಯ ಅಪ್ಪಣ್ಣನ ಬದುಕಿನ ಎರಡನೇ ಆಯಾಮ. ಆದರೂ 'ಯಾಕಲೇ ಗೊಂದಲಿಗ್ಯಾ ನಮ್ಮೂರ ನೀರ ಹತ್ತಿದವೇನ? ಪಂಚರಂಗಿ ಕೂಳ ತಿಂದು ಸೊಕ್ಕು ಬಂದ್ಯೆತೇನು' ಎನ್ನುವ ಸವರ್ಣೀಯರ ವ್ಯಂಗ್ಯ ಮುಳ್ಳಾಗಿ ಚುಚ್ಚುತ್ತದೆ. ಜಾತಿ ದೌರ್ಜನ್ಯದ ಕಹಿ ಎಷ್ಟು ತೀವ್ರವಾಗಿ ಅಪ್ಪಣ್ಣರಿಗೆ ಕಾಡಿದ್ದವೆಂದರೆ ದೌರ್ಜನ್ಯಕ್ಕೂ ಹೀಗೆ ಬೆಲೆ ಕಟ್ಟಿ ಬಿಡುತ್ತಾರೆ: "ದೌರ್ಜನ್ಯ ನಡೆಸಿದ ಎಷ್ಟೋ ಮನೆತನಗಳು ಇಂದು ಹೇಳ ಹೆಸರಿಲ್ಲದಂತಾಗಿವೆ. ಕಾಲವೆನ್ನುವುದು ದೊಡ್ಡ ನ್ಯಾಯಾಧೀಶ" (ಪು. ೬೬).

ಕೌಟುಂಬಿಕ ಕಾರಣ ಸಾಂಪ್ರದಾಯಿಕ ಪರಂಪರೆ ದೆಸೆಯಿಂದ ಮೇಲ್ಜಾತಿಗಳು ಗೊಂದಲಿಗರನ್ನು ಕರೆಸಿ ಜೋಡಿ ತಬಲ ಚೌಡಿಕೆ ತಾಳಗಳ ನಡುವೆ ಕಥೆ ಹೇಳಿಸುತ್ತಾರೆ. ಆದರೆ ಅದು ಮುಗಿದ ಕೂಡಲೇ ಅವರನ್ನು ಹೊರ ತಳ್ಳುತ್ತಾರೆ. "ಊಟ ಮಾಡುವಾಗ ಮನೆಯವರೆಲ್ಲಾ ಗೊಂದಲಿಗರ ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ನಂತರ ನಾವು ಅವರಿಗೆ ಅಸ್ಪೃಶ್ಯರಾಗುತ್ತೇವೆ" (ಪುಟ 73) ಅಪ್ಪಣ್ಣ ತಮ್ಮ ನೋವು ಅವಮಾನಗಳ ಎಳೆಗಳನ್ನು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಮಂಡರಗಿ, ಶಿರಹಟ್ಟಿ, ಆಲೂರು, ಶಿವಣಗಿ ಇಲ್ಲೆಲ್ಲಾ ಕುಲ ಬಾಂಧವರ ಸಂಕಷ್ಟಗಳನ್ನು ಹೇಳುತ್ತಲೇ "ನಮ್ಮ ಹಣೇ ಬರಾನ ಇಷ್ಟ. ಹ್ಯಾಂಗ ಬದಕತೀವಿ, ಎಲ್ಲಿ ಬದುಕತೀವಿ, ಎಲ್ಲಿ ಸಾಯತೀವಿ ಹೇಳೂದ ಕಷ್ಟ" (ಪು.80) ಅಂತ ದಾಖಲಿಸುತ್ತಾರೆ.

ಹೊಳೆ ಆಲೂರಿನಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ನಂತರ ಹುಬ್ಬಳ್ಳಿಯ ಜಾಬಿನ್ ಕಾಲೇಜಿನಲ್ಲಿ ಪಿಯುಸಿ ಓದುವಾಗ ಊಟ ತಿಂಡಿಗಳಿಲ್ಲದ ಹಸಿವು ಅವಮಾನದ ವಿವರಗಳೊಂದಿಗೆ ವಿದ್ಯಾವಂತರ ನಡುವೆ ತೆರಕೊಳ್ಳುವ ಬದುಕು ವಿಭಿನ್ನ ಆಯಾಮಗಳೊಂದಿಗೆ ಅನಾವರಣಗೊಳ್ಳುತ್ತದೆ. ಬಾಗಲಕೋಟೆಯ ಕಾಲೇಜಿನಲ್ಲಿ ಬಿ.ಎಸ್ಸಿ., ಪದವಿ ಪಡೆದು ತಾನು ಹುಟ್ಟಿದ ನಂತರ ಬೆಳೆದ ಹೊಳೆ ಆಲೂರಿನ ಆಡಳಿತ ಮಂಡಳಿಯ ಶಾಲೆಯಲ್ಲಿ ಮಾಸ್ತರಿಕೆ ಮಾಡುವ ಹಂತಕ್ಕೆ ಏರುವ ಮದರಿ ಕೊನೆಗೆ ಸರ್ಕಾರಿ ಕೆಲಸ ದಕ್ಕಿಸಿಕೊಂಡರೂ, ವರ್ಗವಾಗಿ ಎಲ್ಲಿಗೆ ಹೋದರೂ ಜಾತಿಯ ಅವಮಾನಗಳು ಹಿಂಬಾಲಿಸಿಕೊಂಡೇ ಬರುತ್ತವೆ. ಕೌಟುಂಬಿಕ ಕಷ್ಟಗಳೂ ಹಿಂಬಾಲಿಸುತ್ತವೆ. ತಾಯಿಗೆ ಕ್ಯಾನ್ಸರ್ ಬಂದು ಸಾವು, ತಂದೆಯ ಆರೋಗ್ಯ ಹದಗೆಡುವುದು, ತಂಗಿಯರ ಮದುವೆ, ತಮ್ಮ ಓದು ನಿಲ್ಲಿಸಿ ಪಾತ್ರೆ ಮಾರಾಟ ವೃತ್ತಿ ಕೈಗೊಳ್ಳುವುದು ಹೀಗೇ ಸಾಗುವ ವಿವರಗಳು ಎ.ಎಂ. ಮದರಿ ತಮ್ಮ ನಲವತ್ತನೆಯ ವಯಸ್ಸಿನಲ್ಲಿ ಜಿಲ್ಲಾ ಖಜಾನೆ ಅಧಿಕಾರಿ ಆಗುವುದರೊಂದಿಗೆ ಒಂದು ನೆಲೆ ತಲುಪುತ್ತವೆ. ನಂತರ ಅಲೆಮಾರಿ ಜಾತಿಯ ನೋವು ಅವಮಾನಗಳನ್ನು ಅನುಭವಿಸಿದವನ ಈ ಆತ್ಮಕಥೆ ಮದುವೆ, ಮಕ್ಕಳು .ನೆಮ್ಮದಿಯಲ್ಲಿ ಕೊನೆಗೊಳ್ಳುತ್ತದೆ, ಬಹುತೇಕ ಈ ಬಗೆಯ ಎಲ್ಲಾ ಆತ್ಮಕಥನಗಳಂತೆಯೇ.

ಮದರಿಯವರು ಪಡೆದ ಅಕ್ಷರಜ್ಞಾನ ಮತ್ತು ಚೌಡಿಕೆಯನ್ನು ತಿರಸ್ಕರಿಸಿದ್ದು ಮದರಿಯವರಿಗೆ ಜಿಲ್ಲಾ ಖಜಾನಾಧಿಕಾರಿಯ ಹುದ್ದೆ ಕೊಡಿಸಿತೆನ್ನುವುದು ಅಂತಿಮ ಸತ್ಯವೇ? ಅವಮಾನಿತ, ಅಲಕ್ಷಿತ ಜಾತಿಗಳು ಅಕ್ಷರ ಲೋಕ ಪ್ರವೇಶಿಸಿ ಬದುಕನ್ನು ಬದಲಿಸಿಕೊಂಡರೆ, ಅದಕ್ಕೆ ಅಗತ್ಯವಾದ ಆವರಣಗಳ, ಸೂಕ್ಷ್ಮಗಳ ಅರಿವಾದರೆ ಅವರ ಜೀವನ ಅವಮಾನಗಳಿಂದ ಕಳಚಿಕೊಂಡು ಗೌರವಾದರಗಳನ್ನು ಗಳಿಸುವುದು ಎನ್ನುವುದು ಅಂತಿಮ ಸತ್ಯವೇ? ಈ ನೆಲೆಯಲ್ಲಿ ಆತ್ಮಕಥನ ಓದುಗನನ್ನು ಗಲಿಬಿಲಿಗೊಳಿಸುತ್ತದೆ. ಯಾಕೆಂದರೆ ಓದುಗನು ತನ್ನ ಪಾಡಿಗೆ ತಾನು ಓದುತ್ತಿದ್ದರೂ ಮದರಿಯ ಜಾತಿಯ ಅವಮಾನದ ಕ್ಷಣಗಳಲ್ಲಿ 'ನಾನಿದ್ದಿದ್ದರೆ' ಎಂದು ಒಂದು ಕ್ಷಣ ಕಲ್ಪಿಸಿಕೊಂಡರೆ ಆತ್ಮಕಥನವೂ ತನ್ನ ಕೆಲಸ ಮಾಡಿದೆ ಎಂದೇ ಆದೀತು. ಮದರಿಗೆ ಕಾಡುವ ಸಂಕಟ ನೋವು ಬೇರೆ ಬಗೆಯದು. ಯಾರಾದರೂ ನಿಮ್ಮ ಊರು ಯಾವುದೆಂದು ಕೇಳಿದರೆ ಹೇಳಲು ಊರೇ ಇಲ್ಲ. ಎಲ್ಲವೂ ತಾತ್ಕಾಲಿಕ ತಂಗುದಾಣಗಳು. ಯಾವುದೂ ತನ್ನ ಊರಾಗುವುದಿಲ್ಲ. ಕರ್ನಾಟಕದ ಹಳ್ಳಿಗಳಲ್ಲಿ ಮೂರು ದಶಕಗಳ ಹಿಂದಿನಂತೆ ರಾತ್ರಿ ಗೊಂದಲಿಗರ ಚೌಡಿಕೆ ಮೇಳ ಅನುರಣಿಸುವುದಿಲ್ಲ. ಬದಲಾದದ್ದು ಬರಿ ಹಳ್ಳಿಗಳಷ್ಟೇ ಅಲ್ಲ. ಗೊಂದಲಿಗರ ವೃತ್ತಿ, ಜಾತಿ, ಬದುಕುಗಳಿಂದ ಬಿಡುಗಡೆಗೆ ತವಕಿಸುವ ಮದರಿ ಕೂಡ ಹಳ್ಳಿಗಳಲ್ಲಿ ಕಾಣೆಯಾಗಿದ್ದಾರೆ. ಹಾಗಾಗಿ ಬದಲಾದ ಇಂತಹ ಬದುಕು ಇಂದು ಎಷ್ಟರಮಟ್ಟಿಗೆ ಓದುಗರಿಗೆ ಅನಿವಾರ್ಯವೆನ್ನಿಸುವುದೋ ಅಷ್ಟರಮಟ್ಟಿಗೆ ಈ ಕೃತಿ ಸಾರ್ಥಕವೆನ್ನಬಹುದು.

ಜಾತಿಗಳು ಈ ದೇಶದಲ್ಲಿ ಎಷ್ಟೊಂದು ತಲ್ಲಣವನ್ನುಂಟು ಮಾಡಿವೆ ಎಂದು ನಿಬ್ಬೆರಗಾಗಿಸುವಷ್ಟು ಈ ಕೃತಿ ಗಂಭೀರ ಅಲ್ಲದಿದ್ದರೂ ಆ ದಿಕ್ಕಿನ ಕತ್ತಲೆ ಬೆಳಕನ್ನು ತೋರಿಸಬಲ್ಲದಾಗಿದೆ. ಗೊಂದಲಿಗರಲ್ಲಿ ಕೆಲವರು ವ್ಯಾಪಾರ, ಜ್ಯೋತಿಷ್ಯದ ಮೂಲಕ ಕೋಟ್ಯಾಂತರ ಹಣ ಗಳಿಸಿದವರು ಇದ್ದಾರೆ ಎಂದು ಒಂದೆಡೆ ಲೇಖಕರು ಹೇಳುತ್ತಾರೆ. ಅಪ್ಪಣ್ಣ ಮದರಿ ಹಾಗಾಗಿಲ್ಲ. ಧಾರವಾಡದ ಮನೆಯೊಂದರಲ್ಲಿ ಬಾಡಿಗೆದಾರರಾಗಿ ಬದುಕುತ್ತಿದ್ದಾರೆ. ಬುಡಬುಡಕಿ, ಹಕ್ಕಿಪಿಕ್ಕಿ, ಎಣ್ಣೆಜೋಗಿ, ಸುಡುಗಾಡು ಸಿದ್ದ, ಗೋಸಾಯಿ, ದೊಂಬ- ಈ ಬಗೆಯ ಅಲೆಮಾರಿಗಳಲ್ಲಿ ಸೂಕ್ಷ್ಮಜ್ಞರು ಅಕ್ಷರಸ್ಥರಾದರೆ ಈ ಬಗೆಯ ಅತ್ಮಕಥನಗಳು ಲಭಿಸಿಯಾವು. ಜೊತೆಗೆ ಅವರ ವೃತ್ತಿಗಳ ಸಾವು ಕೂಡ ಅನಿವಾರ್ಯವೂ ಹೌದಲ್ಲವೇ?

**-ಎಂ.ಚಂದ್ರಶೇಖರಯ್ಯ**

**'ಹೊಸ ಮನುಷ್ಯ'ಕ್ಕೆ ಶುಭಾಶಯಗಳು**

# ದಿ ಬೆಂಗಳೂರು ಕಮರ್ಶಿಯಲ್ ಟ್ರಾನ್ಸಪೋರ್ಟರ್ಸ್ ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿ ಲಿ.

ನಂ. ೧, ೧ನೇ ಕ್ರಾಸ್,
ಚಿಕ್ಕಣ್ಣ ಗಾರ್ಡನ್ಸ್, ಶಂಕರಪುರಂ
ಬೆಂಗಳೂರು-೫೬೦೦೧೮

## ವಿವೇಕಾ ಬ್ಯೂರೋ ಆಫ್ ಕಾಂಪಿಟೇಟೀವ್ ಎಕ್ಸಾಮ್ಸ್, ಹಾಸನ



ಪ್ರಿಯ ಪೋಷಕರೇ,

ನಮ್ಮ ಮಕ್ಕಳು ಬ್ಯಾಂಕಿನಲ್ಲಿ ಉದ್ಯೋಗ ಮಾಡುವುದನ್ನು ಬಯಸುತ್ತೀರಾ? ಹಾಗಿದ್ದಲ್ಲಿ ಇಲ್ಲಿದೆ ಒಂದು ಸುವರ್ಣ ಅವಕಾಶ, ಯಾರಿಗೂ ಲಂಚ ಕೊಡದೆ, ಯಾರ ಶಿಫಾರಸ್ಸಿಗೂ ಹೆಣಗಾಡದೆ ಉದ್ಯೋಗ ಪಡೆಯುವ ರಾಜಮಾರ್ಗ ಸ್ವರ್ಧಾತ್ಮಕ ಪರೀಕ್ಷೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹಿಂದೆಂದಿಗಿಂತ ಇಂದು ಅತ್ಯಧಿಕ ಸಂಖ್ಯೆಯ ಹುದ್ದೆಗಳನ್ನು ಕೇಂದ್ರಸರ್ಕಾರ **I.B.P.S, SBI & RBI** ಇವುಗಳ ಮೂಲಕ ಸ್ವರ್ಧಾತ್ಮಕ ಪರೀಕ್ಷೆಗಳನ್ನು ನೆಡೆಸಿ ಪ್ರತಿಭೆಗೆತಕ್ಕಂತೆ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.

ನಮ್ಮ ಮಕ್ಕಳು ಪಿಯುಸಿಯಲ್ಲಿ ಶೇ 60% ರಷ್ಟು ಅಂಕಗಳಿಸಿ ಉತ್ತೀರ್ಣರಾಗಿದ್ದರೆ ಅಥವಾ ಡಿಗ್ರಿ ಪರೀಕ್ಷೆಯಲ್ಲಿ ಪಾಸ್ ಮಾಡಿದ್ದು ಕನಿಷ್ಠ 18 ವರ್ಷ ತುಂಬಿದ್ದರೆ ಕ್ಲರಿಕಲ್ ಗೇಡರ್ ಹುದ್ದೆಗಳಿಗೆ ಸ್ವರ್ಧಿಸಲು ಅವರಿಗೆ ಅರ್ಹತೆ ಇದೆ.

ನಮ್ಮ ಸಂಸ್ಥೆಯು ಇಂತಹ ಸ್ವರ್ಧಾತ್ಮಕ ಪರೀಕ್ಷೆಗಳಿಗೆ ಕಳೆದ 26 ವರ್ಷಗಳಿಂದ ತರಬೇತಿ ನೀಡುತ್ತಾ ಬಂದಿದ್ದು, ಸಾವಿರಾರು ಜನ ಇದರ ಸದುಪಯೋಗ ಪಡೆದಿದ್ದಾರೆ. ಈ ವರ್ಷ ವಿಶೇಷವಾಗಿ ಬ್ಯಾಂಕಿಂಗ್ ಕ್ಲರಿಕಲ್ ಕೇಡರ್ ಹುದ್ದೆಗಳಿಗೆ ಜನವರಿ 31 ರಿಂದ ಫ್ಲೆಬ್ರವರಿ 19ವರೆಗೆ 20 ದಿವಸಗಳ ಊಟ ವಸತಿ ಸಹಿತ (ರೆಸಿಡೆನ್ಶಿಯಲ್) ಕ್ರಾಶ್‌ಕೋರ್ಸ್‌ಅನ್ನು ಹಮ್ಮಿಕೊಂಡಿದೆ. ಆಸಕ್ತಿಯುಳ್ಳ ಪೋಷಕರು ಮತ್ತು ಅಭ್ಯರ್ಥಿಗಳು–

ಮಾಹಿತಿಗಾಗಿ ಸಂಪರ್ಕಿಸಿ:–

**ನಿರ್ದೇಶಕರು: ಶ್ರೀಮತಿ ರೇಣುಕಾ ಶಿವಕುಮಾರ್**
**ವಿವೇಕಾ ಬ್ಯೂರೋ ಆಫ್ ಕಾಂಪಿಟೇಟೀವ್ ಎಕ್ಸಾಮ್ಸ್**
**ಎಸ್.ಜೆ.ಪಿ.ಪಾರ್ಕ್ ರಸ್ತೆ, ಕೆ.ಆರ್.ಪುರಂ,**
**ಹಾಸನ–573201.**
**ದೂರವಾಣಿ: 08172–268253**
**ಮೊಬೈಲ್: 9448867087**

## ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರನಗರ, ಶಿವಮೊಗ್ಗ – ೫೭೭ ೨೦೧
ಹಾಗೂ ದೊಣೆಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ –೫೭೭೫೨೮.
ಮೊ : ೯೪೪೯೮೮೬೫೭೦. Email : gbtmohan@gmail.com

### ನಮ್ಮ ಕೆಲವು ಪ್ರಕಟಣೆಗಳು:

ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ (ವ್ಯಕ್ತಿ ಚಿತ್ರಣ)
ಡಾ. ಹಣಮಂತರಾಯ ದೊಡ್ಡಮನಿ ೧೯೦/–
ಕುಮಾರರಾಮ (ವ್ಯಕ್ತಿ ಚಿತ್ರಣ) ಷಣ್ಮುಖಪ್ಪ ೮೦/–
ಹಿರಿಯರ ಹಾದಿ/ (ಅಂಕಣ ಬರಹಗಳು) ಪ್ರೊ. ಎಂ.ಎನ್. ಸುಂದರರಾಜ್ ೧೪೦/–
ನೀಲನಕ್ಷೆ : ಕನ್ನಡ ವಿಮರ್ಶೆ ಡಾ. ಕೇಶವಶರ್ಮ ಕೆ. ೨೮೦/–
ಕಂಡದ್ದು–ಕಾಡಿದ್ದು (ಸಮಾಜವಾದಿ ಸಂಕಥನಗಳು–೫) ಡಿ.ಎಸ್. ನಾಗಭೂಷಣ ೨೨೦/–
ಕುವೆಂಪು ಸಾಹಿತ್ಯದರ್ಶನ / ಡಿ.ಎಸ್. ನಾಗಭೂಷಣ ೮೦/–
ಕುವೆಂಪು: ಒಂದು ಪುನರನ್ವೇಷಣೆ/ಸಂ: ಡಿ.ಎಸ್. ನಾಗಭೂಷಣ ೨೨೦/–
ಲೋಹಿಯಾ ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/–
ಲೋಹಿಯಾ ವಾಣಿ/ ಡಿ.ಎಸ್. ನಾಗಭೂಷಣ ೨೫/–
ಜೆ.ಪಿ. ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/–
ಭಾರತೀಯ ಷೋಡಶ ಸಂಸ್ಕಾರಗಳು (ವೈಜ್ಞಾನಿಕ ದೃಷ್ಟಿಕೋನ)
ಡಾ. ಶ್ರೀ ಷ.ಬ್ರ. ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು, ವೀರಾಪುರ ೧೦೦/–

ಕಾಯಕಯೋಗಿ ಸರ್.ಎಂ.ವಿಶ್ವೇಶ್ವರಯ್ಯ /ಡಾ. ಪ್ರದೀಪ್‌ಕುಮಾರ್ ಹೆಬ್ರಿ ೧೦೦/–
ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ/ರೇಖಾ ಬಿ. ೧೪೦/–
ಕಾಯಕಯೋಗಿ ಸರ್.ಎಂ.ವಿಶ್ವೇಶ್ವರಯ್ಯ /ಡಾ. ಪ್ರದೀಪ್‌ಕುಮಾರ್ ಹೆಬ್ರಿ ೧೦೦/–
*ಚನಸಂಪದ/ಬಸವಣ್ಣನವರ ವಚನಗಳು/ಜಿ.ಬಿ.ಟಿ.ಗೀತಾವಿಶ್ವನಾಥ್ ೩೦/–
ಪ್ರೇಮಜಾಲ/ಕಾದಂಬರಿ/ಬಿ.ಎಲ್.ವೇಣು ೧೧೦/–
ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು/ ಮಕ್ಕಳ ಕಥೆಗಳು/ಡಾ.ನಾ.ಡಿಸೋಜ ೪೫/–
ಮಲೆನಾಡಿಗ/ಡಾ.ನಾ.ಡಿ.ಸೋಜಅಭಿನಂದನಾ ಗ್ರಂಥ ೨೫೦/–
ಹಾರುವ ಹಕ್ಕಿಗೆ ಹಸಿರೆಲೆ ತೋರಣ/ಸಮಗ್ರ ಮಕ್ಕಳ ಕಿರು ಕಾದಂಬರಿಗಳು/
ಡಾ.ನಾ.ಡಿಸೋಜ ೬೦೦/–
ಮಧುರಾಲಾಪ/ಶರ್ಮ/ಗೀತಗೋವಿಂದ ಅನುವಾದ ೫೦/–
ಮಹಿಳೆ, ಮಾಧ್ಯಮ, ಮಾರುಕಟ್ಟೆ/ಮಹಿಳಾ ವಿಮರ್ಶಾ ಲೇಖನಗಳು/
ವಿಜಯ್‌ಕುಮಾರ್ ಹೆಚ್. ೫೦/–
ಮಹಿಳೆ ಮತ್ತು ಜಾತಿಶ್ರೇಣಿಕರಣ :ಅಂಬೇಡ್ಕರ್ ದೃಷ್ಟಿಕೋನ/ಡಾ. ಈ. ಯರ್‍ರಿಸ್ವಾಮಿ ೧೫೦/–

ಪುಸ್ತಕ ಮಾರಾಟಗಾರರಿಗೆ ವಿಶೇಷ ರಿಯಾಯಿತಿ ಕೊಡಲಾಗುವುದು. ಅಂಚೆ ಮೂಲಕ ತರಿಸಿಕೊಳ್ಳುವವರಿಗೆ ಶೇ. ೨೦ ರಿಯಾಯಿತಿ. (ಅಂಚೆ ವೆಚ್ಚ ಸೇರಿ)



**'ಹೊಸ ಮನುಷ್ಯ' ಓದುಗ ಬಳಗಕ್ಕೆ**

## ಹಾರ್ದಿಕ ಶುಭಾಶಯಗಳು!

ಆಡಳಿತ ಮಂಡಳಿ

## ಜೆ.ಹೆಚ್. ಪಟೇಲ್ ಕಾಲೇಜು

ಹೇಮಾವತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ. ರಸ್ತೆ
ದಾವಣಗೆರೆ–೫೭೭೦೦೪

ಉಪಯುಕ್ತ ವ್ಯಾಸಂಗ ಕ್ರಮಗಳು!
ಸಂಪನ್ನ ವ್ಯಕ್ತಿತ್ವ ನಿರ್ಮಾಣಕ್ಕಾಗಿ–
ವೈವಿಧ್ಯಮಯ ಪಠ್ಯೇತರ ಚಟುವಟಿಕೆಗಳು!
ನುರಿತ ಅಧ್ಯಾಪಕ ವೃಂದ!
ದಕ್ಷ ಆಡಳಿತ ಸಿಬ್ಬಂದಿ!



HOSA MANUSHYA, a kannada monthly solely owned, edited, published and printed by D. S. Nagabhushana at HIG-5, Kallahally Extension, Vinobanagara, SHIMOGA-577204 and printed in Chitrakuta Printers, Durgigudi, Shimoga-577 201

**RNI No: KARKAN/2012/47568**


ತೆರೆದ ಅಂಚೆ

ಇವರಿಗೆ,


If undelivered, please return to D.S. Nagabhushana,
HIG-5, 'Nudi', Kallahalli Extension, Vinoba Nagara,
Shivamogga - 577204 (Karnataka)